KEONICS
ISO 9001:2015

# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ

## ನಿರ್ದೇಶಕರ ಮಂಡಳಿ

| ನಿರ್ದೇಶಕರ ಮಂಡಳಿ | | ಇಂದ | ವರೆಗೆ |
|---|---|---|---|
| ಶ್ರೀ ಪ್ರಿಯಾಂಕ್ ಖರ್ಗೆ<br>ಮಾನ್ಯ ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ<br>ಮತ್ತು ಜೈವಿಕ ತಂತ್ರಜ್ಞಾನ ರಾಜ್ಯ ಸಚಿವರು,<br>ಕರ್ನಾಟಕ ಸರ್ಕಾರ | ಅಧ್ಯಕ್ಷರು | 25.08.2016 | 15.11.2016 |
| ಶ್ರೀ ಡಿ.ಸುಧಾಕರ್, ವಿಧಾನಸಭಾ ಸದಸ್ಯರು | ಅಧ್ಯಕ್ಷರು | 15.11.2016 | |
| ಶ್ರೀ ರಾಜ್ ಕುಮಾರ್ ಶ್ರೀವಾಸ್ತವ, ಭಾ.ಆ.ಸೇ. | ವ್ಯವಸ್ಥಾಪಕ ನಿರ್ದೇಶಕರು | 09.09.2015 | 05.05.2017 |
| ಶ್ರೀ ರಂಗೇಗೌಡ, ಭಾ.ಅ.ಸೇ. | ವ್ಯವಸ್ಥಾಪಕ ನಿರ್ದೇಶಕರು | 05.05.2017 | |
| ಶ್ರೀಮತಿ ವಿ. ಮಂಜುಳ, ಭಾ.ಆ.ಸೇ. | ನಿರ್ದೇಶಕರು | 11.08.2015 | 18.03.2017 |
| ಶ್ರೀಮತಿ ತನುಶ್ರೀ ದೇಬ್‌ಬರ್ಮ, ಭಾ.ಆ.ಸೇ. | ನಿರ್ದೇಶಕರು | 04.06.2014 | 18.03.2017 |
| ಶ್ರೀಮತಿ ಬಿ. ಸಿಂಧು, ಭಾ.ಆ.ಸೇ. | ನಿರ್ದೇಶಕರು | 18.07.2016 | |
| ಪ್ರೊ. ಎಸ್. ಸದಗೋಪನ್ | ನಿರ್ದೇಶಕರು | 18.8.2000 | |
| ಶ್ರೀ ಪಿ.ಕೆ. ದಾಸ್ | ನಿರ್ದೇಶಕರು | 21.09.2013 | 23.09.2016 |
| ಶ್ರೀ ಎಸ್.ಸಿ. ಶಶಿಧರ್ | ನಿರ್ದೇಶಕರು | 16.04.2016 | |
| ಶ್ರೀ ಎ.ಎಸ್. ಮಂಜುನಾಥ್ | ನಿರ್ದೇಶಕರು | 16.04.2016 | |
| ಶ್ರೀ ಡಿ.ಎಸ್. ರಘು | ನಿರ್ದೇಶಕರು | 16.04.2016 | |
| ಶ್ರೀ ಕೆ.ವೆಂಕಟಸುಬ್ಬರಾಜು | ನಿರ್ದೇಶಕರು | 16.04.2016 | |
| ಶ್ರೀ ಬಸವಣ್ಣ | ನಿರ್ದೇಶಕರು | 16.04.2016 | |
| ಶ್ರೀ ಬಿ.ಆರ್. ಅವಿನಾಶ್‌ಬಾಬು | ನಿರ್ದೇಶಕರು | 16.04.2016 | |
| ಶ್ರೀ ಎಂ. ಅಕ್ಬರ್ ಪಾಷ | ನಿರ್ದೇಶಕರು | 16.04.2016 | |
| ಶ್ರೀ ಭೀಮರಾಯ | ನಿರ್ದೇಶಕರು | 16.04.2016 | |
| ಶ್ರೀ ರಾಮಣ್ಣ ಕೆ.ಕಲ್ಲಣ್ಣವರ್ | ನಿರ್ದೇಶಕರು | 16.04.2016 | |
| ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ. | ನಿರ್ದೇಶಕರು | 20.08.2016 | 18.03.2017 |
| ಶ್ರೀ ಶೈಲೇಂದರ್ ಕುಮಾರ್ ತ್ಯಾಗಿ | ನಿರ್ದೇಶಕರು | 25.10.2016 | |
| ಶ್ರೀ ಗೌರವ್‌ಗುಪ್ತಾ, ಭಾ.ಆ.ಸೇ. | ನಿರ್ದೇಶಕರು | 18.03.2017 | |
| ಶ್ರೀಮತಿ ಸಲ್ಮಾ ಕೆ. ಫಯಿಮ್ ಭಾ.ಆ.ಸೇ. | ನಿರ್ದೇಶಕರು | 18.03.2017 | |
| ಶ್ರೀ ಶ್ರೀವಾಸ್ತ ಕೃಷ್ಣ, ಭಾ.ಆ.ಸೇ. | ನಿರ್ದೇಶಕರು | 18.03.2017 | 10.05.2017 |
| ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ. | ನಿರ್ದೇಶಕರು | 10.05.2017 | 28.07.2017 |
| ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ. | ನಿರ್ದೇಶಕರು | 28.07.2017 | |

**ನೋಂದಾಯಿತ ಕಚೇರಿ:**

**2ನೇ ಮಹಡಿ, ಟಿಟಿಎಂಸಿ 'ಎ' ಬ್ಲಾಕ್,**
**ಬಿಎಂಟಿಸಿ ಕಾಂಪ್ಲೆಕ್ಸ್, ಕೆ.ಹೆಚ್. ರಸ್ತೆ,**
**ಶಾಂತಿನಗರ, ಬೆಂಗಳೂರು – 560 027.**

**ಲೆಕ್ಕಪರಿಶೋಧಕರು:**

**ಮೆ॥ ಎಸ್‌ಎಸ್‌ಬಿ & ಅಸೋಸಿಯೇಟ್ಸ್**
**ಚಾರ್ಟರ್ಡ್ ಅಕೌಂಟೆಂಟ್ಸ್**
**ನಂ,27, ಸರ್ವಿಸ್ ರಸ್ತೆ, 2 ಮತ್ತು 3ನೇ ಕ್ರಾಸ್ ನಡುವೆ,**
**ಪಂಪಮಹಾಕವಿ ರಸ್ತೆ, ಶಂಕರಪುರಂ,**
**ಬಸವನಗುಡಿ, ಬೆಂಗಳೂರು–560 004.**

# ಸೂಚನೆ

**ಸರ್ವ ಷೇರುದಾರರಿಗೆ :**

ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಲು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಇದರ **40ನೇ ವಾರ್ಷಿಕ ಸರ್ವಸದಸ್ಯರ ಸಭೆಯು** 26ನೇ ಸೆಪ್ಟೆಂಬರ್ 2017ರ ಮಂಗಳವಾರ, ಅಪರಾಹ್ನ 12.00 ಗಂಟೆಗೆ ಕಂಪನಿಯ ನೋಂದಾಯಿತ ಕಚೇರಿ, 2ನೇ ಮಹಡಿ, ಟಿಟಿಎಂಸಿ 'ಎ' ಬ್ಲಾಕ್, ಬಿಎಂಟಿಸಿ ಕಾಂಪ್ಲೆಕ್ಸ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027 ಇಲ್ಲಿ ಜರುಗಲಿರುವುದು.

## I. ಸಾಮಾನ್ಯ ಕಲಾಪಗಳು:

1) 31–03–2017 ರಂದು ಅಂತ್ಯಗೊಂಡ ಆರ್ಥಿಕ ವರ್ಷದ ಕಂಪನಿಯ ಲೆಕ್ಕಪರಿಶೋಧಿತ ಹಣಕಾಸು ವಿವರಣೆಗಳು ಮತ್ತು ಲೆಕ್ಕಪರಿಶೋಧಕರ ಮತ್ತು ನಿರ್ದೇಶಕರ ವರದಿಗಳೊಂದಿಗೆ 2013ರ ಕಂಪನಿಗಳ ಕಾಯ್ದೆಯ ಸೆಕ್ಷನ್ 143(6)(ಬಿ)ರ ಅನ್ವಯ ಭಾರತದ ಮಹಾನಿಯಂತ್ರಕರು ಮತ್ತು ಮಹಾಲೇಖಪಾಲರವರ ಟಿಪ್ಪಣಿಗಳ ಸ್ವೀಕರಣೆ, ಪರಿಗಣನೆ ಮತ್ತು ಅಳವಡಿಕೆ ಮಾಡಿಕೊಳ್ಳುವುದು.

2) 2017–18ನೇ ಹಣಕಾಸು ವರ್ಷಕ್ಕಾಗಿ ಭಾರತದ ಮಹಾನಿಯಂತ್ರಕರು ಮತ್ತು ಮಹಾಲೇಖಪಾಲರು, ನವದೆಹಲಿ ಇವರಿಂದ ನೇಮಕವಾದ ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆ॥ ಡಾಗ್ಲಿಯ ಅಂಡ್ ಕಂ., ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರಿಗೆ ಸಂಭಾವನೆಯನ್ನು ನಿಗದಿಪಡಿಸಲು ನಿರ್ದೇಶಕರ ಮಂಡಳಿಗೆ ಅಧಿಕಾರ ನೀಡುವುದು.

## II. ವಿಶೇಷ ಕಲಾಪ:

3) ಕಂಪನಿಯ ಅಧಿಕೃತ ಷೇರು ಬಂಡವಾಳವನ್ನು ಹೆಚ್ಚಿಸುವುದು:

ಸಾಮಾನ್ಯ ನಿರ್ಣಯವಾಗಿ ಈ ಕೆಳಕಂಡ ನಿರ್ಣಯವನ್ನು ಪರಿಗಣಿಸುವುದು ಮತ್ತು ಸೂಕ್ತವೆಂದು ಕಂಡು ಬಂದರೆ ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡುಗಳಿಲ್ಲದೆ ಅಂಗೀಕರಿಸುವುದು.

"ನಿರ್ಣಯಿಸುವುದೇನೆಂದರೆ ಕಂಪನಿಯ ಅಧಿಕೃತ ಷೇರು ಬಂಡವಾಳವನ್ನು ತಲಾ ರೂ.100/– (ಒಂದು ನೂರು ರೂಪಾಯಿ ಮಾತ್ರ) ಮುಖ ಬೆಲೆಯ 27,50,000 (ಇಪ್ಪತ್ತ ಏಳು ಲಕ್ಷ ಐವತ್ತು ಸಾವಿರ) ಈಕ್ವಿಟಿ ಷೇರುಗಳ ರೂ.27,50,00,000/– (ಇಪ್ಪತ್ತ ಏಳು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದಿಂದ ತಲಾ ರೂ.100/– (ಒಂದು ನೂರು ರೂಪಾಯಿ ಮಾತ್ರ) ಮುಖ ಬೆಲೆಯ 35,00,000(ಮುವತ್ತು ಐದು ಲಕ್ಷ) ಈಕ್ವಿಟಿ ಷೇರುಗಳ ರೂ.35,00,00,000/– (ಮುವತ್ತು ಐದು ಕೋಟಿ ರೂಪಾಯಿಗಳು ಮಾತ್ರ) ಮೊತ್ತಕ್ಕೆ ಹೆಚ್ಚಿಸುವುದು ಮತ್ತು ಇದರನುಸಾರ ಕಂಪನಿಯ ಸಂಸ್ಥಾಪನ ಪತ್ರದ ಕಲಂ–V ಅನ್ನು ಮಾರ್ಪಾಡು ಮಾಡುವುದು".

**ಮಂಡಳಿಯ ಆದೇಶದ ಮೇರೆಗೆ**

**ಸಹಿ/–**

**(ಸಿಎಸ್ ಶಶಿಧರ ಜಿ.ಎಸ್.)**

**ಕಾರ್ಯನಿರ್ವಹಿಸುತ್ತಿರುವ ಕಂಪನಿ ಕಾರ್ಯದರ್ಶಿ**

ಸ್ಥಳ: ಬೆಂಗಳೂರು
ದಿನಾಂಕ: 11.09.2017

**ಸೂಚನೆ:**

ಎ) ಸಭೆಯಲ್ಲಿ ಭಾಗವಹಿಸಿ ಮತ ಚಲಾಯಿಸಬಹುದಾದ ಸದಸ್ಯರು ಆತನ/ಆಕೆಯ ಪರವಾಗಿ ಸಭೆಯಲ್ಲಿ ಭಾಗವಹಿಸಿ ಮತ ಚಲಾಯಿಸಲು ತಮ್ಮ ಪ್ರತಿನಿಧಿಯನ್ನು ನೇಮಿಸಬಹುದು ಮತ್ತು ಆ ಪ್ರತಿನಿಧಿಯು ಕಂಪನಿಯ ಸದಸ್ಯನಾಗಿರುವ ಅಗತ್ಯವಿಲ್ಲ.

ಬಿ) ಕಂಪನಿಯು ಸರ್ಕಾರಿ ಕಂಪನಿಯಾದ್ದರಿಂದ ಭಾರತದ ಮಹಾನಿಯಂತ್ರಕರು ಮತ್ತು ಮಹಾಲೇಖಪಾಲರು, ನವದೆಹಲಿ, ಇವರು ದಿನಾಂಕ : 17.08.2017ರ ತಮ್ಮ ಪತ್ರದ ಮೂಲಕ 2013ರ ಕಂಪನಿಗಳ ಕಾಯ್ದೆಯ ಸೆಕ್ಷನ್ 139ರ ಸಬ್‌ಸೆಕ್ಷನ್ (5)ರ ಉಪಬಂಧಗಳ ಅನ್ವಯ 2017–18ನೇ ಹಣಕಾಸು ವರ್ಷಕ್ಕಾಗಿ ಮೆ॥ ಡಾಗ್ಲಿಯ ಅಂಡ್ ಕಂ; ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದೆ.

**ಕಂಪನಿಗಳ ಕಾಯ್ದೆ, 2013ರ ಪ್ರಕರಣ 102ರ ಅನುಸಾರ ವಿವರಣಾತ್ಮಕ ಹೇಳಿಕೆ:**

ಕಂಪನಿಯ ಪ್ರಸ್ತುತದ ಪಾವತಿಯಾದ ಷೇರು ಬಂಡವಾಳ ರೂ.27,50,00,000 (ಇಪ್ಪತ್ತ ಏಳು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ತಲಾ ರೂ.100/– (ಒಂದು ನೂರು ರೂಪಾಯಿ ಮಾತ್ರ) 27,50,000 (ಇಪ್ಪತ್ತ ಏಳು ಲಕ್ಷ ಐವತ್ತು ಸಾವಿರ) ಈಕ್ವಿಟಿ ಷೇರುಗಳಾಗಿ ವಿಭಾಗಿಸಿರುವುದು. ಕಂಪನಿಯ ಈಕ್ವಿಟಿ ಷೇರುಗಳ ಹಂಚಿಕೆಗಾಗಿ ಕಂಪನಿಯು ಸರ್ಕಾರದಿಂದ ಕಾಲಕಾಲಕ್ಕೆ ಹೂಡಿಕೆಯನ್ನು ಪಡೆಯುತ್ತಿರುವುದು. ಆದ್ದರಿಂದಾಗಿ ಹಾಲಿ ಇರುವ ತಲಾ ರೂ.100/–ರ (ಒಂದು ನೂರು ರೂಪಾಯಿ ಮಾತ್ರ) ಮುಖ ಬೆಲೆಯ 27,50,000 (ಇಪ್ಪತ್ತ ಏಳು ಲಕ್ಷ ಐವತ್ತು ಸಾವಿರ) ಈಕ್ವಿಟಿ ಷೇರುಗಳಾಗಿ ವಿಭಾಗಿಸಿದ ರೂ.27,50,00,000/– (ಇಪ್ಪತ್ತ ಏಳು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅಧಿಕೃತ ಷೇರು ಬಂಡವಾಳವನ್ನು ತಲಾ ರೂ.100/–ರ (ಒಂದು ನೂರು ರೂಪಾಯಿ ಮಾತ್ರ) ಮುಖ ಬೆಲೆಯ 35,00,000 (ಮುವತ್ತ ಐದು ಲಕ್ಷ) ಈಕ್ವಿಟಿ ಷೇರುಗಳಾಗಿ ವಿಭಾಗಿಸಿದ ರೂ.35,00,00,000/– (ಮುವತ್ತ ಐದು ಕೋಟಿ ರೂಪಾಯಿಗಳು ಮಾತ್ರ) ಗೆ ಹೆಚ್ಚಿಸಲು ನಿರ್ದೇಶಕರ ಮಂಡಳಿ ಶಿಫಾರಸು ಮಾಡಿದೆ. ಕಂಪನಿಯ ಅಧಿಕೃತ ಷೇರು ಬಂಡವಾಳದ ಹೆಚ್ಚಳಕ್ಕೆ ಸದಸ್ಯರುಗಳ ಅನುಮೋದನೆ ಬೇಕಾಗಿದೆ. ಆದ್ದರಿಂದಾಗಿ ನಿರ್ದೇಶಕರು ನಿಮ್ಮ ಅನುಮೋದನೆಗಾಗಿ ನಿರ್ದೇಶಕರು ನಿರ್ಣಯವನ್ನು ಶಿಫಾರಸು ಮಾಡಿರುವರು.

ನಿರ್ಣಯದ ಬಗ್ಗೆ ಯಾವುದೇ ನಿರ್ದೇಶಕರು ಆಸಕ್ತಿ ವಹಿಸಿರುವುದಿಲ್ಲ/ಕಳಕಳಿ ಹೊಂದಿರುವುದಿಲ್ಲ.



**ಶ್ರೀ ಡಿ.ಸುಧಾಕರ್**
**ವಿಧಾನಸಭಾ ಸದಸ್ಯರು**
**ಮತ್ತು ಅಧ್ಯಕ್ಷರು, ಕಿಯೋನಿಕ್ಸ್**

# ಸದಸ್ಯರುಗಳಿಗೆ 2016–17ರ ಸಾಲಿನ ನಿರ್ದೇಶಕರ ವರದಿ

**ಮೆ॥ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ** ನಿರ್ದೇಶಕರುಗಳ ಮಂಡಳಿಯು 31.03.2017ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ಪರಿಶೋಧಿತ ಹಣಕಾಸಿನ ಹೇಳಿಕೆಗಳ ಜೊತೆಗೆ ತಮ್ಮ 40ನೇ ವಾರ್ಷಿಕ ವರದಿಯನ್ನು ಸಮರ್ಪಿಸಲು ಅಪಾರ ಹರ್ಷಪಡುವರು.

**01. ಹಣಕಾಸಿನ ಕಾರ್ಯಕ್ಷಮತೆ – ಕಂಪನಿಯ ವ್ಯವಹಾರಗಳ ವಿವರ**

ಕಂಪನಿಯ ಹಿಂದಿನ ವರ್ಷ 2016–17ರ ಕಾರ್ಯಕ್ಷಮತೆ ಬಗ್ಗೆ ಹಿಂದಿನ ವರ್ಷದ ಇದೇ ಅವಧಿಯೊಡನೆ ಹೋಲಿಕೆ ಮಾಡಿದಂತೆ ವಾರ್ಷಿಕ ಲೆಕ್ಕಪತ್ರಗಳ ವೈಶಿಷ್ಟ್ಯತೆಯು ಈ ಕೆಳಕಂಡಂತಿರುವುದು:–

(ರೂ. ಕೋಟಿಗಳಲ್ಲಿ)

| ವಿವರಗಳು | 2016–17 | 2015–16 |
|---|---|---|
| ಮಾರಾಟ ಮತ್ತು ಸೇವಾ ವಹಿವಾಟು | **204.50** | 236.70 |
| ಇತರೆ ಆದಾಯ | **6.20** | 5.89 |
| **ಒಟ್ಟು ವಹಿವಾಟು** | **210.70** | **242.59** |
| ಸವಕಳಿ, ತೆರಿಗೆಗಳು ಮತ್ತು ಹಿಂದಿನ ವರ್ಷದ ಹೊಂದಾಣಿಕೆಗೆ ಮುನ್ನ ಲಾಭ | **9.00** | **12.41** |
| ಸವಕಳಿ | **2.54** | **2.69** |
| ಹಿಂದಿನ ವರ್ಷದ ಹೊಂದಾಣಿಕೆಗಳು | (+) **0.30** | (–) **0.08** |
| ವಿಶೇಷ ಐಟಂಗಳು | – | – |
| **ತೆರಿಗೆ ಪೂರ್ವದ ಲಾಭ** | **6.76** | **9.64** |
| ತೆರಿಗೆ ಖರ್ಚುಗಳು | **2.39** | **3.47** |
| **ತೆರಿಗೆ ನಂತರದ ಲಾಭ** | **4.37** | **6.17** |
| ಲಾಭಾಂಶ ಮತ್ತು ಲಾಭಾಂಶದ ಮೇಲಿನ ತೆರಿಗೆ | – | – |
| ಲಾಭ ಮತ್ತು ನಷ್ಟದ ಖಾತೆಯಲ್ಲಿನ ಹಿಂದಿನ ವರ್ಷದ ಶಿಲ್ಕು | **76.76** | **70.59** |
| **ಸ್ಥಿತಿ ವಿವರಣ ಪಟ್ಟಿಗೆ ತೆಗೆದುಕೊಂಡಿರುವ ಶಿಲ್ಕು** | **81.13** | **76.76** |

ಕಂಪನಿಯ ವಿವಿಧ ವಿಭಾಗಗಳ ಮಾರಾಟದ ಕಾರ್ಯಕ್ಷಮತೆಯನ್ನು ಈ ಕೆಳಗೆ ನಿರೂಪಿಸಿದೆ.

**(ರೂ. ಕೋಟಿಗಳಲ್ಲಿ)**

| ವಿಭಾಗ | 2016–17 | 2015–16 |
|---|---|---|
| 1. ಮೂಲಭೂತ ಸೌಕರ್ಯ ಅಭಿವೃದ್ಧಿ | **5.70** | **7.75** |
| 2. ಐಟಿ ಸೇವೆಗಳು | **32.59** | **105.13** |
| 3. ಐಟಿ ಶಿಕ್ಷಣ ಸೇವೆಗಳು | **9.81** | **6.83** |
| 4. ಮಾನವ ಶಕ್ತಿ ಪೂರೈಕೆ ಸೇವೆಗಳು | **156.40** | **116.99** |
| 5. ಕಾರ್ಪೋರೇಟ್ (ಇತರೆ ಆದಾಯ) | **6.20** | **5.89** |
| **ಒಟ್ಟು** | **210.70** | **242.59** |

**02. ಗಳಿಕೆ ಮತ್ತು ಲಾಭಗಳು**

ಕಂಪನಿಯು ಹಣಕಾಸಿನ ವರ್ಷ 2016–17ರಲ್ಲಿ ಮಾರಾಟ ಮತ್ತು ಸೇವೆಗಳಿಂದ ಗಳಿಸಿರುವ ಹಣ ರೂ. 204.50 ಕೋಟಿಗಳು. ಹಿಂದಿನ ವರ್ಷ ಇದೇ ಅವಧಿಯಲ್ಲಿ ಈ ಮೊತ್ತ ರೂ. 236.70 ಕೋಟಿಗಳಾಗಿತ್ತು. ಮಾರಾಟ ಮತ್ತು ಸೇವೆಗಳಿಂದ ಗಳಿಸಿರುವ ಈ ಗಳಿಕೆ ಮೊತ್ತಕ್ಕೆ ತೆರಿಗೆ ಪಾವತಿಸುವುದಕ್ಕೆ ಮುಂಚಿನ ಲಾಭದ ಶೇಕಡ ಪ್ರಮಾಣ 3.30%.

ದಿನಾಂಕ 31.03.2017 ರಂದು ಇದ್ದಂತೆ ಕಂಪನಿಯ ಮೀಸಲು ನಿಧಿ ಮತ್ತು ಹೆಚ್ಚುವರಿ ನಿಧಿ ರೂ.81.13 ಕೋಟಿಗಳು ಮತ್ತು ನಿವ್ವಳ ಮೌಲ್ಯ ರೂ.106.00 ಕೋಟಿಗಳು. ಸದರಿ ವರ್ಷದಲ್ಲಿ ಷೇರು ಒಂದರ ಗಳಿಕೆ (ಮೂಲ ದರ) ರೂ.16.92

**03. ವ್ಯವಹಾರ ಕಾರ್ಯಾಚರಣೆಗಳ ಪರಾಮರ್ಶೆ ಮತ್ತು ಮುಂದಿನ ನಿರೀಕ್ಷೆಗಳು**

**I. ಮೂಲಭೂತ ಸೌಕರ್ಯ ಅಭಿವೃದ್ಧಿ :**

**(ಎ) ಎಲೆಕ್ಟ್ರಾನಿಕ್ಸ್ ಸಿಟಿ :**

ಬೆಂಗಳೂರಿನ ಹೊಸೂರು ರಸ್ತೆಯಲ್ಲಿ ಕಂಪನಿಯು 332 ಎಕರೆ ವಿಶಾಲವಾದ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ಸ್ ಸಿಟಿಯನ್ನು ರೂಪಿಸಿದೆ. ಇಂದು ಈ ಎಲೆಕ್ಟ್ರಾನಿಕ್ಸ್ ಸಿಟಿಯು ಮಾಹಿತಿ ತಂತ್ರಜ್ಞಾನ ಚಟುವಟಿಕೆಗಳಿಗೆ ಪ್ರಮುಖ ಕೇಂದ್ರವಾಗಿದೆ.

**(ಬಿ) ಐಟಿ ಪಾರ್ಕ್ ಶಿವಮೊಗ್ಗ ಮತ್ತು ಕಲಬುರಗಿ:**

ಕರ್ನಾಟಕ ಸರ್ಕಾರದ ನಿರ್ದೇಶನದ ಮೇರೆಗೆ ಕಂಪನಿಯು ಈ ಕೆಳಕಂಡ ಐಟಿ ಪಾರ್ಕುಗಳನ್ನು ಸ್ಥಾಪಿಸಿದೆ:

| ಕ್ರ.ಸಂ. | ವಿವರಗಳು | ನಿರ್ಮಿತಿ ಪ್ರದೇಶ | ಹೂಡಿರುವ ಮೊತ್ತ |
|---|---|---|---|
| 1. | ಐಟಿ ಪಾರ್ಕ್, ಶಿವಮೊಗ್ಗ | 73,666 ಚ.ಅಡಿ | 16.10 ಕೋಟಿಗಳು |
| 2. | ಐಟಿ ಪಾರ್ಕ್, ಕಲಬುರಗಿ | 53,000 ಚ.ಅಡಿ | 9.19 ಕೋಟಿಗಳು |

**(ಸಿ) ಐಟಿ ಎಸ್‌ಇಜಡ್ ಶಿವಮೊಗ್ಗ :**

ಕಂಪನಿಯು ನಿದಿಗೆ –ಮಾಚೇನಹಳ್ಳಿ, ಕೈಗಾರಿಕಾ ಪ್ರದೇಶ, ಶಿವಮೊಗ್ಗ ಇಲ್ಲಿನ 25 ಎಕರೆಗಳ ಪ್ರದೇಶದಲ್ಲಿ ಐಟಿ ಎಸ್‌ಇಜಡ್ ಸ್ಥಾಪಿಸಿದೆ.ಭಾರತ ಸರ್ಕಾರವು ಕಿಯೋನಿಕ್ಸ್‌ಗೆ ಸದರಿ ಎಸ್‌ಇಜಡ್ ಯೋಜನೆಯ ಸಹ ಡೆವಲಪರ್ ಸ್ಥಾನಮಾನ ನೀಡಿದೆ.

**(ಡಿ) ಐಟಿ ಪಾರ್ಕ್, ಹುಬ್ಬಳ್ಳಿ :**

ಕರ್ನಾಟಕದ ಉತ್ತರ **ಭಾಗದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಒಳಗೊಂಡ ಸೇವಾ ಕೈಗಾರಿಕೆಗಳ** ಪ್ರಗತಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಕರ್ನಾಟಕ ಸರ್ಕಾರದಿಂದ ಪಡೆದ ಅನುದಾನಗಳಿಂದ ಹುಬ್ಬಳ್ಳಿಯಲ್ಲಿನ ಹೆಚ್‌ಡಿಎಂಸಿ ಕಾಂಪ್ಲೆಕ್ಸ್‌ನಲ್ಲಿ ಒಟ್ಟು 2.70 ಲಕ್ಷ ಚದರ ಅಡಿಗಳ ನಿರ್ಮಿತಿ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲಾಗಿದೆ. ಕರ್ನಾಟಕ ಸರ್ಕಾರದಿಂದ ಪಡೆದ ನಿರ್ವಹಣೆ ಅನುದಾನದಿಂದ ಕಂಪನಿಯು ಈ ಐಟಿ ಪಾರ್ಕ್‌ನ್ನು ನಿರ್ವಹಣೆ ಮಾಡುತ್ತಿದೆ. ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ, ಹುಬ್ಬಳ್ಳಿಯಲ್ಲಿನ ಈ ಪಾರ್ಕ್‌ನಲ್ಲಿ ಅತ್ಯಧಿಕ ವೇಗದ ಸಂಪರ್ಕಸೌಲಭ್ಯ ಒದಗಿಸಿದೆ.

**II. ಐಟಿ ಸೇವೆಗಳು :**

ಕಂಪನಿಯು ಕರ್ನಾಟಕ ಸರ್ಕಾರ ಮತ್ತು ಇತರೆ ರಾಜ್ಯಗಳ ವಿವಿಧ ಇಲಾಖೆಗಳಿಗೆ ಐಟಿ ಸಾಫ್ಟ್‌ವೇರ್ ಒದಗಿಸುವ ಮತ್ತು ಪ್ರೋಗ್ರಾಮಿಂಗ್‌ನ ಹಲವಾರು ಯೋಜನೆಗಳು ಮತ್ತು ಇ–ಆಡಳಿತ ಯೋಜನೆಗಳನ್ನು ಕೈಗೊಂಡಿದೆ. ಕಂಪನಿಯು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್‌ವೇರ್, ಎಲೆಕ್ಟ್ರಾನಿಕ್ ಉಪಕರಣಗಳು ಇತ್ಯಾದಿಯನ್ನು ಸಹ ಮಾರಾಟ ಮಾಡುತ್ತಿದೆ.

ಇದರ ಜೊತೆಗೆ ಕಂಪನಿಯು ನೆಟ್‌ವರ್ಕಿಂಗ್, ವೆಬ್ ಕ್ರಿಯೇಷನ್, ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಮತ್ತು ಕಂಪ್ಯೂಟರೀಕರಣ ಯೋಜನೆಗಳ ಕ್ಷೇತ್ರಗಳಲ್ಲಿ ವಿವಿಧ ಇಲಾಖೆಗಳಿಗೆ ಯೋಜನಾ ಅನುಷ್ಠಾನದ ಬಗ್ಗೆ ಸಲಹೆ ನೀಡಿಕೆ ಕಾರ್ಯವನ್ನು ಮುಂದುವರಿಸುತ್ತಿದೆ.

**III. ಐಟಿ ಶಿಕ್ಷಣ ಸೇವೆಗಳು :**

ಕಂಪನಿಯ ಐಟಿ ಶಿಕ್ಷಣ ವಿಭಾಗವು ಗ್ರಾಮೀಣ ಕರ್ನಾಟಕಕ್ಕೆ ಐಟಿ ಸೌಲಭ್ಯಗಳನ್ನು ಕೊಂಡೊಯ್ಯುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.ಕಂಪನಿಯು ಕರ್ನಾಟಕದಾದ್ಯಂತ ಸುಮಾರು 216 ಫ್ರಾಂಚೈಸೀ ತರಬೇತಿ ಕೇಂದ್ರಗಳ ಜಾಲಬಂಧವನ್ನು ಹೊಂದಿದೆ.ಕಂಪನಿಯ ಪ್ರಮುಖ ಚಟುವಟಿಕೆಗಳಲ್ಲಿ ಐಟಿ ಶಿಕ್ಷಣವು ಒಂದು ಆಗಿದೆ.ಕಂಪನಿಯು ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಿಂದ ರಾಜ್ಯದಾದ್ಯಂತ ಬೇಸಿಕ್‌ನಿಂದ ಪ್ರಾರಂಭಿಸಿ, ಉದ್ಯೋಗ ಆಧಾರಿತ, ವೃತ್ತಿಪರ ಮತ್ತುಅತ್ಯುನ್ನತ ಮಟ್ಟದ ತರಬೇತಿ ಕೋರ್ಸುಗಳಿಗೆ ತರಬೇತಿ ಕಾರ್ಯಕ್ರಮ ನಡೆಸುತ್ತಿದೆ.ಕಂಪನಿಯು ಸರ್ಕಾರಿ ನೌಕರರುಗಳಿಗೆ ಕಂಪ್ಯೂಟರ್ ತರಬೇತಿ ನೀಡುವ ಕಾರ್ಯಕ್ರಮವನ್ನು ಸಹ ಕೈಗೊಂಡಿದೆ.ಇದಲ್ಲದೆ ಸರ್ಕಾರಿ ನೌಕರರುಗಳಿಗೆ ಕಂಪ್ಯೂಟರ್ ಸಾಕ್ಷರತೆ ಆನ್‌ಲೈನ್ ಪರೀಕ್ಷೆ ನಡೆಸುವ ಕಾರ್ಯವನ್ನು ಕಂಪನಿ ಕೈಗೊಂಡಿದೆ.ಕರ್ನಾಟಕ ಸರ್ಕಾರದ ಬಹುಪಾಲು ಸರ್ಕಾರಿ ಪ್ರಾಯೋಜಿತ ಕಂಪ್ಯೂಟರ್ ತರಬೇತಿ ಕಾರ್ಯಕ್ರಮಗಳನ್ನು ಕಂಪನಿಯು ಅನುಷ್ಠಾನಗೊಳಿಸುತ್ತಿದೆ. ಕಂಪನಿಯು ಈ ತರಬೇತಿ ಪಡೆದ ಅಭ್ಯರ್ಥಿಗಳನ್ನು ಸರ್ಕಾರದ ವಿವಿಧ ಇಲಾಖೆಗಳು/ ಸಂಸ್ಥೆಗಳಿಗೆ ಮಾನವ ಶಕ್ತಿ ಪೂರೈಕೆ ಸೇವೆಗಳ ವಿಭಾಗದ ಮೂಲಕ ನಿಯೋಜನೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ವಿದ್ಯಾರ್ಥಿಗಳು, ನಿರುದ್ಯೋಗಿಗಳು ಮತ್ತು ಉದ್ಯೋಗದಲ್ಲಿರುವ ಕಂಪ್ಯೂಟರ್ ವೃತ್ತಿಪರರಿಗೆ ಉನ್ನತ ಮಟ್ಟದ ಕಂಪ್ಯೂಟರ್ ಕಾರ್ಯಕ್ರಮಗಳು ಮತ್ತುತರಬೇತಿ ಕೋರ್ಸುಗಳಲ್ಲಿ ತರಬೇತಿ ನೀಡಬೇಕಾದ ಅವಶ್ಯಕತೆಯನ್ನು ಪರಿಗಣಿಸಿ ಕಂಪನಿಯು ಐಬಿಎಂ ಮೈನ್‌ಫ್ರೇಮ್ ಪ್ರೋಗ್ರಾಮ್/ ಆಪರೇಟರ್ ಕೋರ್ಸುಗಳನ್ನು ಪ್ರಾರಂಭಿಸಿದೆ.

**IV. ಮಾನವ ಸಂಪನ್ಮೂಲ ಪೂರೈಕೆ ಸೇವೆಗಳು :**

ಕಂಪನಿಯ ಪ್ರಮುಖ ಚಟುವಟಿಕೆಗಳನ್ನು ಮುಂದುವರಿಸುವುದರ ಜೊತೆಗೆ ತನ್ನ ವ್ಯವಹಾರ ಪಾಲುದಾರರುಗಳು ಮತ್ತು ಸಹವರ್ತಿಗಳ ಮೂಲಕ ಸರ್ಕಾರದ ವಿವಿಧ ಇಲಾಖೆಗಳು, ಮಂಡಳಿಗಳು ಹಾಗೂ ನಿಗಮಗಳಿಗೆ ನುರಿತ ಮಾನವ ಶಕ್ತಿ ಸೇವೆಗಳನ್ನು ಪೂರೈಸುವ ವ್ಯವಹಾರದಲ್ಲಿ ಕಂಪನಿ ತೊಡಗಿದೆ.ಈ ಹೊಸ ಚಟುವಟಿಕೆ ಕ್ಷೇತ್ರದಲ್ಲಿ ಪಡೆದ ಅನುಭವವು ಪ್ರೋತ್ಸಾಹದಾಯಕವಾಗಿದೆ.ಕಂಪನಿಯ ಒಟ್ಟಾರೆ ವಹಿವಾಟಿಗೆ ಕಂಪನಿಯ ಹೆಚ್‌ಆರ್ ವಿಭಾಗದ ಕೊಡುಗೆಯು ಗಣನೀಯವಾಗಿರುವುದು ಇದಕ್ಕೆ ಮೂಲ ಕಾರಣವಾಗಿದೆ.ಇದು ಕಂಪನಿಯ ದೀರ್ಘ ಕಾಲಿಕ ಅಸ್ತಿತ್ವಕ್ಕೆ ಮತ್ತು ದೃಢ ಪ್ರಗತಿಗೆ ಇಂಬು ನೀಡುವ ಸಂಕೇತವಾಗಿದೆ. ಇಂದಿನ ದಿನಾಂಕದಂದು ಇದ್ದಂತೆ ವಿವಿಧ ಸರ್ಕಾರಿ ಇಲಾಖೆಗಳು/ ಮಂಡಳಿಗಳು ಮತ್ತು ನಿಗಮಗಳಿಗೆ ನಿಯೋಜನೆ ಮಾಡುವ ಮೂಲಕ ಸರಿಸುಮಾರು 7,150 ಜನರಿಗೆ ಉದ್ಯೋಗವಕಾಶವನ್ನು ಕಂಪನಿ ಒದಗಿಸಿದೆ.

**04 ಲಾಭಾಂಶ**

**ಮೀಸಲು ನಿಧಿಯನ್ನು** ಸಂರಕ್ಷಿಸಬೇಕಾದ ಅವಶ್ಯಕತೆಯನ್ನು ಪರಿಗಣಿಸಿ ನಿಮ್ಮ ನಿರ್ದೇಶಕರ ಮಂಡಳಿಯು ಪರಿಶೀಲನೆಯಲ್ಲಿನ ಸದರಿ ವರ್ಷಾವಧಿಗೆ ಯಾವುದೇ ಲಾಭಾಂಶವನ್ನು ಶಿಫಾರಸು ಮಾಡಿರುವುದಿಲ್ಲ.

**05 ಮೀಸಲು ನಿಧಿಗೆ ವರ್ಗಾವಣೆ**

ವರದಿ ಮಾಡುತ್ತಿರುವ ಸದರಿ ವರ್ಷದಲ್ಲಿ ಕಂಪನಿಯ ಮೀಸಲು ನಿಧಿಗೆ ಯಾವುದೇ ಹಣವನ್ನು ವರ್ಗಾಯಿಸಲು ನಿಮ್ಮ ನಿರ್ದೇಶಕರು ಉದ್ದೇಶಿಸಿರುವುದಿಲ್ಲ.

**06 ಸಂಬಂಧಪಟ್ಟ ವ್ಯಕ್ತಿಗಳ ಜೊತೆ ಮಾಡಿಕೊಂಡಿರುವ ಗುತ್ತಿಗೆಗಳು ಮತ್ತು ವ್ಯವಸ್ಥೆಗಳ ವಿವರಗಳು**

ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ 188(1) ರಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ವ್ಯಕ್ತಿಗಳ ಜೊತೆ ಮಾಡಿಕೊಂಡಿರುವ ಗುತ್ತಿಗೆಗಳು ಮತ್ತು ವ್ಯವಸ್ಥೆಗಳ ವಿವರಗಳನ್ನು ನಿಗದಿತ ನಮೂನೆ ಎಒಸಿ–2 ರಲ್ಲಿ ಸದರಿ ವರದಿಗೆ **ಅನುಬಂಧ–1** ಆಗಿ ಲಗತ್ತಿಸಲಾಗಿದೆ.

**07 ಹಣಕಾಸಿನ ವರ್ಷದ ಕೊನೆಯಲ್ಲಿ ಮತ್ತು ವರದಿಯ ದಿನಾಂಕದ ನಡುವೆ ಆಗಿರುವ ಹಣಕಾಸಿನ ಪರಿಸ್ಥಿತಿಯಲ್ಲಿನ ವಾಸ್ತವಿಕ ಬದಲಾವಣೆ ಮತ್ತು ಇದರ ಮೇಲೆ ಪರಿಣಾಮ ಬೀರುವ ಬದ್ಧತೆಗಳು**

ಹಣಕಾಸಿನ ವರ್ಷ 2016–17ರ ಕೊನೆಯಲ್ಲಿ ಮತ್ತು ವರದಿಯ ದಿನಾಂಕದ ನಡುವೆ ಹಣಕಾಸಿನ ಪರಿಸ್ಥಿತಿಯಲ್ಲಿ ಕೆಳಕಂಡ ವಾಸ್ತವಿಕ ಬದಲಾವಣೆಗಳು ಮತ್ತು ಬದ್ಧತೆಗಳು ಉಂಟಾಗಿವೆ:

– ದಿನಾಂಕ 21.06.2017 ರಂದು ನಡೆದ ಕಂಪನಿಯ ನಿರ್ದೇಶಕರುಗಳ ಮಂಡಳಿಯ ಸಭೆಯಲ್ಲಿ ನಿರ್ಣಯ ಮಂಡಿಸುವ ಮೂಲಕ ರೂ.50,00,000/– ಮೊತ್ತದ ತಲಾ ರೂ.100/–ರ ಮುಖ ಬೆಲೆಯ 50,000 ಈಕ್ವಿಟಿ ಷೇರುಗಳ ಹಂಚಿಕೆ.
– ದಿನಾಂಕ 29.08.2017 ರಂದು ನಡೆದ ಕಂಪನಿಯ ನಿರ್ದೇಶಕರುಗಳ ಮಂಡಳಿಯ ಸಭೆಯಲ್ಲಿ ನಿರ್ಣಯ ಮಂಡಿಸುವ ಮೂಲಕ ನಿರ್ದೇಶಕರುಗಳಿಂದ ಅನುಮೋದನೆ ಪಡೆದು ಹಕ್ಕಿನ ಆಧಾರದ ಮೇಲೆ ರೂ. 1,04,00,000/–ಮೊತ್ತದ ತಲಾ ರೂ. 100/–ರ ಮುಖ ಬೆಲೆಯ 1,04,000 ಈಕ್ವಿಟಿ ಷೇರುಗಳ ಹಂಚಿಕೆ.

**08 ವಾರ್ಷಿಕ ರಿಟರ್ನ್‌ನ ಉದ್ಧೃತ**

ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ 134(3) (ಎ) ಅನುಸಾರ ವಾರ್ಷಿಕ ರಿಟರ್ನ್‌ನ ಉದ್ಧೃತವನ್ನು ನಮೂನೆ ಎಂಜಿಟಿ–9 ರಲ್ಲಿ ಸದರಿ ವರದಿಗೆ **ಅನುಬಂಧ–II** ಆಗಿ ಲಗತ್ತಿಸಲಾಗಿದೆ.

**09 ಮಂಡಳಿಯ ಸಭೆಗಳ ಸಂಖ್ಯೆ**

ನಿರ್ದೇಶಕರುಗಳ ಮಂಡಳಿಯು ಹಣಕಾಸಿನ ವರ್ಷ 2016–17ರ ಅವಧಿಯಲ್ಲಿ ದಿನಾಂಕ : 25.04.2016, 29.06.2016, 18.08.2016 14.12.2016 ಮತ್ತು 19.01.2017 ರಂದು ಐದು ಬಾರಿ ಸಭೆ ಸೇರಿದೆ. ಕಂಪನಿಗಳ ಅಧಿನಿಯಮ, 2013ರ ಪ್ರಕರಣ 173ರ ಅನ್ವಯ ಯಾವುದೇ ಎರಡು ಸಭೆಗಳ ಅಂತರವು ನಿಗದಿಪಡಿಸಿರುವ ಅವಧಿಯ ಒಳಗಿರುವುದು .ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ 118 (10)ರ ಅನ್ವಯ ನೀಡಿರುವ ನಿರ್ದೇಶಕರುಗಳ ಮಂಡಳಿಯ ಸಭೆಗಳ ಬಗೆಗಿನ ಎಸ್‌ಎಸ್–1 ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್‌ನ ಕಲಂ–9ರ ಅನ್ವಯ ಅಗತ್ಯವಾದಂತೆ ಆರ್ಥಿಕ ವರ್ಷ 2016–17ರ ಅವಧಿಯಲ್ಲಿ ಕಂಪನಿಯ ಪ್ರತಿ ನಿರ್ದೇಶಕರು ಹಾಜರಾಗಿದ್ದ ಮಂಡಳಿ ಸಭೆಗಳ ಸಂಖ್ಯೆ ಈ ಕೆಳಕಂಡತಿರುವುದು:

| ಕ್ರ.ಸಂ. | ನಿರ್ದೇಶಕರ ಹೆಸರು | ಹಣಕಾಸಿನ ವರ್ಷ 2016–17ರಲ್ಲಿ ಹಾಜರಾಗಿದ್ದ ಮಂಡಳಿಯ ಸಭೆಗಳ ಸಂಖ್ಯೆ |
|---|---|---|
| 1 | ಶ್ರೀ ಯು.ಬಿ. ವೆಂಕಟೇಶ್ | 3 |
| 2 | ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನಖಾತೆ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ | 0 |
| 3 | ಶ್ರೀ ಡಿ.ಸುಧಾಕರ್, ಕರ್ನಾಟಕ ವಿಧಾನಸಭಾ ಸದಸ್ಯರು | 2 |
| 4 | ಶ್ರೀಮತಿ ವಿ. ಮಂಜುಳ, ಭಾ.ಆ.ಸೇ | 1 |
| 5 | ಶ್ರೀಮತಿ ತನುಶ್ರೀ ದೇಬ್ ಬರ್ಮ, ಭಾ.ಆ.ಸೇ | 2 |
| 6 | ಶ್ರೀಮತಿ ದೀಪ್ತಿ ಆದಿತ್ಯ ಕಾನಡೆ, ಭಾ.ಆ.ಸೇ | 0 |
| 7 | ಶ್ರೀ ರಾಜ್‌ಕುಮಾರ್ ಶ್ರೀವಾಸ್ತವ, ಭಾ.ಅ.ಸೇ | 5 |
| 8 | ಶ್ರೀ ಡಿ.ವಿ.ಪ್ರಸಾದ್, ಭಾ.ಆ.ಸೇ | 0 |
| 9 | ಶ್ರೀಮತಿ ಬಿ.ಸಿಂಧು,ಭಾ.ಆ.ಸೇ | 0 |
| 10 | ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ | 2 |
| 11 | ಪ್ರೊ. ಸದಗೋಪನ್ | 1 |
| 12 | ಶ್ರೀ ಪಿ.ಕೆ. ದಾಸ್ | 0 |
| 13 | ಶ್ರೀ ಶೈಲೇಂದರ್ ಕುಮಾರ್ ತ್ಯಾಗಿ | 1 |
| 14 | ಶ್ರೀ ಎಸ್.ಸಿ.ಶಶಿಧರ್ | 4 |
| 15 | ಶ್ರೀ ಎ.ಎಸ್. ಮಂಜುನಾಥ್ | 5 |
| 16 | ಶ್ರೀ ಡಿ.ಎಸ್. ರಘು | 5 |
| 17 | ಶ್ರೀ ಕೆ.ವೆಂಕಟಸುಬ್ಬರಾಜು | 5 |
| 18 | ಶ್ರೀ ಬಸವಣ್ಣ | 4 |
| 19 | ಶ್ರೀ ಬಿ.ಆರ್. ಅವಿನಾಶ್ ಬಾಬು | 4 |
| 20 | ಶ್ರೀ ಎಂ.ಎ.ಅಕ್ಬರ್ ಪಾಷ | 4 |
| 21 | ಶ್ರೀ ಭೀಮರಾಯ | 4 |
| 22 | ಶ್ರೀ ರಾಮಣ್ಣ ಕೆ. ಕಲ್ಲಣ್ಣವರ್ | 3 |

## ೧೦ ಪ್ರತಿಯೊಂದು ಅರ್ಹತೆ, ಮೀಸಲು ಅಥವಾ ವ್ಯತಿರಿಕ್ತ ಪ್ರತಿಕ್ರಿಯೆ ಅಥವಾ ಹಕ್ಕು ನಿರಾಕರಣೆಗಳ ಬಗ್ಗೆ ಮಂಡಳಿಯು ನೀಡಿರುವ ಸಮಜಾಹಿಷಿ ವಿವರ ಅಥವಾ ತಿಳಿಸಿರುವ ಅಭಿಪ್ರಾಯಗಳು :

ಎ) <u>ಲೆಕ್ಕಪರಿಶೋಧಕರು ಅವರ ವರದಿಯಲ್ಲಿ ತಿಳಿಸಿರುವುದು:</u>

| ಕ್ರ. ಸಂ. | ಅರ್ಹತೆ / ಮೀಸಲು / ವ್ಯತಿರಿಕ್ತ ಅಭಿಪ್ರಾಯ / ಲೆಕ್ಕಪರಿಶೋಧಕರಿಂದ ಹಕ್ಕು ನಿರಾಕರಣೆ | ಮಂಡಳಿಯು ನೀಡಿರುವ ಸಮಜಾಹಿಷಿ ಅಥವಾ ಅಥವಾ ಮಾಡಿರುವ ಟೀಕೆ ಟಿಪ್ಪಣಿಗಳು |
|---|---|---|
| i | ಹಣಕಾಸಿನ ವಿವರಣೆಯಲ್ಲಿ ಅತಿಸಣ್ಣ ಮತ್ತು ಸಣ್ಣ ಪ್ರಮಾಣದ ಉದ್ಯಮಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಮಾಹಿತಿಯನ್ನು ಪ್ರಕಟಿಸಲು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ (ಎಂಎಸ್ಎಂಇಡಿ) ಅಧಿನಿಯಮ, 2006ರ ಪ್ರಕರಣ 22ರ ಅನ್ವಯ ತಿಳಿಸಿರುವ ಸೂಚನೆಯನ್ನು ಕಂಪನಿಯು ಪರಿಪಾಲಿಸಿರುವುದಿಲ್ಲ. | ತಾವು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಅಧಿನಿಯಮ 2006ರ ಅನ್ವಯ ಒಳಪಡುವರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸುವಂತೆ ಲೇಣಿದಾರರಿಗೆ ಕಂಪನಿಯು ಪತ್ರ ಬರೆದಿತ್ತು. ಇದಕ್ಕೆ ಲೇಣಿದಾರರಿಂದ ಪ್ರತಿಯುತ್ತರ ಬಂದಿರುವುದಿಲ್ಲ. ಈ ಮಾಹಿತಿ ಇಲ್ಲದಿರುವ ಪ್ರಯುಕ್ತ ಕಂಪನಿಯು ವರ್ಗೀಕರಣವನ್ನು ಮಾಡಲು ಹಾಗೂ ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳಲ್ಲಿನ ಘೋಷಣೆ ಸಲ್ಲಿಸುವ ಕಾರ್ಯವನ್ನು ಕಂಪನಿ ಪರಿಪಾಲಿಸಲು ಸಾಧ್ಯವಾಗಿರುವುದಿಲ್ಲ |
| ii | ದೇಣಿದಾರರ ಮತ್ತು ಲೇಣಿದಾರರ ಖಾತೆಗಳ ಸಾಲಗಳು ಮತ್ತು ಮುಂಗಡಗಳ ಮತ್ತು ಠೇವಣಿಗಳ ಬಾಕಿಯನ್ನು ದೃಢೀಕರಣೆ ಪಡೆದಿರುವುದಿಲ್ಲ | ದೇಣಿದಾರರು ಮತ್ತು ಲೇಣಿದಾರರುಗಳಿಂದ ಬಾಕಿಯ ಬಗ್ಗೆ ದೃಢೀಕರಣೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು. |
| iii | ಕೈಗಾರಿಕಾ ಪಾರ್ಕ್‌ಗಳ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರದಿಂದ ಪಡೆದಿರುವ ಸುಮಾರು ರೂ.26,08,696/– ಮೊತ್ತದ ಅನುದಾನದ ಸಂಬಂಧ ಸೇವಾ ತೆರಿಗೆ ಹೊಣೆಗಾರಿಕೆಗೆ ವ್ಯವಸ್ಥೆ ಮಾಡಿರುವುದಿಲ್ಲ | ಹುಬ್ಬಳ್ಳಿ, ಶಿವಮೊಗ್ಗ ಮತ್ತು ಕಲಬುರ್ಗಿಯಲ್ಲಿರುವ ಮಾಹಿತಿ ತಂತ್ರಜ್ಞಾನ ಪಾರ್ಕ್ ಕಟ್ಟಡಗಳ ನಿರ್ವಹಣೆಗಾಗಿ ಮಾತ್ರ ಕರ್ನಾಟಕ ಸರ್ಕಾರದಿಂದ ಅನುದಾನವನ್ನು ಪಡೆಯಲಾಗಿದೆ. ಈ ರೀತಿ ಪಡೆದ ಹಣವನ್ನು ನಿರ್ವಹಣೆ ಕಾರ್ಯಕ್ಕೆ ಖರ್ಚು ಮಾಡಲಾಗಿದೆ. ಅನುದಾನವನ್ನು ನಿರ್ವಹಣೆ ಕಾರ್ಯದ ಉದ್ದೇಶಕ್ಕಾಗಿ ಪಡೆದಿರುವುದರಿಂದ ಸೇವಾ ತೆರಿಗೆ ಬಗ್ಗೆ ಯಾವುದೇ ವ್ಯವಸ್ಥೆ ಮಾಡಿರುವುದಿಲ್ಲ. |
| iv | ಫ್ರಾಂಚೈಸಿಗಳಿಂದ ಬಂದ ಆದಾಯ /ಯುವ ಡಾಟ್ ಕಾಮ್ ಫ್ರಾಂಚೈಸಿ ಕಮಿಷನ್ ಮತ್ತು ಕಂಪನಿಯ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಂದ ಪಡೆದ ತರಬೇತಿ ಶುಲ್ಕಗಳನ್ನು ನಗದು ಆಧಾರದ ಮೇಲೆ ಪರಿಗಣಿಸಲಾಗಿರುವ ಮತ್ತು ಲೆಕ್ಕ ಮಾಡಲಾಗಿರುವ "ಆದಾಯ ಪರಿಗಣನೆ"ಯ ಕಂಪನಿಯ ಲೆಕ್ಕಗಾರಿಕೆ ನೀತಿಯು ಕಂಪನಿಗಳ ಅಧಿನಿಯಮ 2013ರ ಪ್ರಕರಣ 128(1)ರ ಉಪಬಂಧಗಳು ಮತ್ತು ಲೆಕ್ಕಗಾರಿಕೆ ಗುಣಮಟ್ಟ–I– ಲೆಕ್ಕಗಾರಿಕೆ ನೀತಿಗಳ ಪ್ರಕಟಣೆಗೆ ವ್ಯತಿರಿಕ್ತವಾಗಿದೆ | ಫ್ರಾಂಚೈಸಿಯಿಂದ ಪಡೆದ ಆದಾಯ/ಯುವ ಡಾಟ್ ಕಾಮ್ ಫ್ರಾಂಚೈಸೀ ಕಮಿಷನ್ ಮತ್ತು ಕಂಪನಿ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಂದ ಪಡೆದ ತರಬೇತಿ ಶುಲ್ಕವನ್ನು ಸಂಚಿತ ಆಧಾರದ ಮೇಲೆ ಪರಿಗಣಿಸುವುದು ವಾಸ್ತವಿಕವಾಗಿ ತೊಂದರೆಯಾಗಿರುವುದರಿಂದ ಕಂಪನಿಯು ಈ ಆದಾಯಗಳನ್ನು ನಗದು ಆಧಾರದ ಮೇಲೆ ಗುರುತಿಸುವ ಲೆಕ್ಕಗಾರಿಕೆ ನೀತಿಯನ್ನು ಅಳವಡಿಸಿಕೊಂಡಿದೆ ಮತ್ತು ಅದನ್ನೇ ಪ್ರತಿ ವರ್ಷವೂ ಅನುಸರಿಸಿಕೊಂಡು ಬರಲಾಗುತ್ತಿದೆ. |
| | | |

| | | |
|---|---|---|
| v | ಕಂಪನಿಯು ವಿಭಾಗದ ಆಸ್ತಿಗಳನ್ನು ಮತ್ತು ವಿಭಾಗದ ಹೊಣೆಗಾರಿಕೆಗಳನ್ನು ವಿಭಾಗಗಳಿಗೆ ನಿರ್ದಿಷ್ಟವಾಗಿ ಅಥವಾ ವಾಸ್ತವಿಕ ಆಧಾರದ ಮೇಲೆ ಹಂಚಿಕೆ ಮಾಡಿರುವುದಿಲ್ಲ/ ಘೋಷಣೆ ಮಾಡಿರುವುದಿಲ್ಲ. ಇದು ಲೆಕ್ಕಗಾರಿಕೆ ಗುಣಮಟ್ಟ–17 – ವಿಭಾಗ ವರದಿಗಾರಿಕೆಗೆ ವಿರುದ್ಧವಾಗಿದೆ | ಕಂಪನಿಯು ಸರ್ಕಾರದ ಕಂಪನಿ ಎಂಬುದರ ಅಂಶವನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ವಿಭಾಗವಾರು ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಹಂಚಿಕೆ ಮಾಡುವುದು ಪ್ರಾಯೋಗಿಕ ತೊಂದರೆಯಾಗಿರುವುದರಿಂದ, ವಿಭಾಗವಾರು ಆಧಾರದ ಮೇಲೆ ಘೋಷಣೆ ಮಾಡಿರುವುದಿಲ್ಲ. |

**ಬಿ) ಕಾರ್ಯನಿರತ ಕಂಪನಿ ಕಾರ್ಯದರ್ಶಿಯವರು ತಮ್ಮ ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧನೆ ವರದಿಯಲ್ಲಿ ತಿಳಿಸಿರುವ ಅಭಿಪ್ರಾಯ :**

ಕಂಪನಿಗಳ ಅಧಿನಿಯಮ, 2013ರ ಪ್ರಕರಣ 204ರ ಉಪಬಂಧಗಳಿಗೆ ಅನುಸಾರವಾಗಿ ಕಾರ್ಯನಿರತ ಕಂಪನಿ ಕಾರ್ಯದರ್ಶಿಯವರಿಂದ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ವರದಿ ಸಲ್ಲಿಕೆಯು ಸದರಿ ಕಂಪನಿಗೆ ಅನ್ವಯಿಸುವುದಿಲ್ಲ.

**11 ಪ್ರಕರಣ 186ರ ಅನ್ವಯ ಸಾಲಗಳು, ಗ್ಯಾರಂಟಿಗಳು ಅಥವಾ ಹಣ ಹೂಡಿಕೆಗಳ ವಿವರಗಳು :**

ವರದಿಯ ವರ್ಷದ ಅವಧಿಯಲ್ಲಿ ಕಂಪನಿಗಳ ಅಧಿನಿಯಮ 2013ರ ಪ್ರಕರಣ 186ರ ಉಪಬಂಧಗಳ ಅನುಸಾರ ಕಂಪನಿಯು ಸಾಲಗಳು, ಗ್ಯಾರಂಟಿಗಳು ಅಥವಾ ಹಣ ಹೂಡಿಕೆಗಳನ್ನು ಮಾಡಿರುವುದಿಲ್ಲ.

**12 ಇಂಧನ ಸಂರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆಗಳು ಮತ್ತು ಹೊರ ಹರಿಯುವಿಕೆ**

**ಎ. ಇಂಧನ ಸಂರಕ್ಷಣೆ**

| | | |
|---|---|---|
| ಎ. | ಇಂಧನ ಸಂರಕ್ಷಣೆ ಬಗ್ಗೆ ಕೈಗೊಂಡಿರುವ ಕ್ರಮಗಳು ಅಥವಾ ಉಂಟಾಗಿರುವ ಪರಿಣಾಮ | **ಕಂಪನಿಯು ವಿದ್ಯುನ್ಮಾನ ಕೈಗಾರಿಕೆ ಆಗಿರುವುದರಿಂದ ಹೆಚ್ಚು ಇಂಧನ ಬಳಸುವುದಿಲ್ಲ. ಈ ದೃಷ್ಟಿಯಿಂದಾಗಿ ಇಂಧನ ಸಂರಕ್ಷಣೆ ಕ್ರಮಗಳಿಗಾಗಿ ಹೆಚ್ಚುವರಿ ಹಣ ಹೂಡಿಕೆ ಮತ್ತು ಸಂರಕ್ಷಣೆಗಾಗಿ ಕ್ರಮಗಳನ್ನು ಕೈಗೊಳ್ಳುವ ಪ್ರಸ್ತಾವನೆಯು ಉಂಟಾಗುವುದಿಲ್ಲ** |
| ಬಿ. | ಪರ್ಯಾಯ ಇಂಧನ ಮೂಲಗಳ ಉಪಯೋಗಕ್ಕಾಗಿ ಕಂಪನಿ ಕೈಗೊಂಡಿರುವ ಕ್ರಮಗಳು | **ಇಲ್ಲ** |
| ಸಿ. | ಇಂಧನ ಉಳಿತಾಯ ಉಪಕರಣದ ಮೇಲೆ ಹೂಡಿರುವ ಬಂಡವಾಳ | **ಇಲ್ಲ** |

**ಬಿ. ತಂತ್ರಜ್ಞಾನ ಅಳವಡಿಕೆ :**

| | | |
|---|---|---|
| ಎ. | ತಂತ್ರಜ್ಞಾನ ಅಳವಡಿಕೆ ಬಗ್ಗೆ ಮಾಡಿರುವ ಪ್ರಯತ್ನಗಳು | **ಮಂಡಳಿಯ ವರದಿಯಲ್ಲಿ ಘೋಷಣೆ ಮಾಡಬೇಕಾಗಿರುವ ಯಾವುದೇ ತಂತ್ರಜ್ಞಾನ ಅಳವಡಿಕೆ ಕಾರ್ಯವು ಒಳಗೊಂಡಿರುವುದಿಲ್ಲ** |
| ಬಿ. | ಉತ್ಪನ್ನ ಸುಧಾರಣೆ, ವೆಚ್ಚ ಇಳಿಕೆ, ಉತ್ಪನ್ನ ಅಭಿವೃದ್ಧಿ ಅಥವಾ ಆಮದು ಪರ್ಯಾಯದಿಂದ ಆಗಿರುವ ಅನುಕೂಲಗಳು | **ಇಲ್ಲ** |
| ಸಿ. | ಪ್ರಸ್ತುತ ಹಣಕಾಸಿನ ವರ್ಷದ ಪ್ರಾರಂಭದಿಂದ ಪರಿಗಣಿಸಿದಂತೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಯಾವುದೇ ಆಮದು ತಂತ್ರಜ್ಞಾನವನ್ನು ಆಮದು ಮಾಡಿಕೊಂಡಿದ್ದರೆ<br>(ಎ) ಆಮದು ಮಾಡಿಕೊಂಡಿರುವ ತಂತ್ರಜ್ಞಾನದ ವಿವರ;<br>(ಬಿ) ಆಮದು ಮಾಡಿಕೊಂಡ ವರ್ಷ ;<br>(ಸಿ) ಆ ತಂತ್ರಜ್ಞಾನವನ್ನು ಪೂರ್ಣವಾಗಿ ಅಳವಡಿಸಿಕೊಳ್ಳಲಾಗಿದೆಯೇ;<br>(ಡಿ) ಒಂದು ವೇಳೆ ಪೂರ್ಣವಾಗಿ ಅಳವಡಿಸಿಕೊಂಡಿರದಿದ್ದಲ್ಲಿ ಯಾವ ಕ್ಷೇತ್ರದಲ್ಲಿ ಆ ಅಳವಡಿಕೆ ನಡೆದಿರುವುದಿಲ್ಲ ಮತ್ತು ಇದಕ್ಕೆ ಕಾರಣವೇನು ಎಂಬುದನ್ನು ತಿಳಿಸಿ | **ಇಲ್ಲ** |
| ಡಿ. | ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಮಾಡಿರುವ ಖರ್ಚುಗಳು | **ಇಲ್ಲ** |

**ಸಿ. ವಿದೇಶಿ ವಿನಿಮಯ ಗಳಿಕೆಗಳು ಮತ್ತು ಹೊರಹರಿವು :**

| | | |
|---|---|---|
| ಎ. | ವರದಿಗಾರಿಕೆಯ ವರ್ಷದ ಅವಧಿಯಲ್ಲಿ ವಾಸ್ತವಿಕವಾಗಿ ಒಳಬಂದ ವಿಧಾನದಲ್ಲಿ ಗಳಿಸಿರುವ ವಿದೇಶಿ ವಿನಿಮಯ | **ಇಲ್ಲ** |
| ಬಿ. | ವರದಿಯ ವರ್ಷದ ಅವಧಿಯಲ್ಲಿ ವಾಸ್ತವಿಕವಾಗಿ ಹೊರಹರಿದ ವಿಧಾನದಲ್ಲಿ ಹೊರಹೋದ ವಿದೇಶಿ ವಿನಿಮಯ | **ಇಲ್ಲ** |

**13 ನಿರ್ದೇಶಕರ ಹೊಣೆಗಾರಿಕೆ ವಿವರ**

ಕಂಪನಿಯ ಹಣಕಾಸಿನ ವಿವರಗಳ ಸಂಬಂಧವಾಗಿ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 134ರ ಉಪ ಪ್ರಕರಣ (5)ರ ಉಪಬಂಧಗಳ ಅನ್ವಯ, ಸದರಿ ಪ್ರಕರಣದ ಉಪ ಪ್ರಕರಣ (3)ರ ಕಲಂ (ಸಿ)ಗೆ ಸಂಬಂಧಿಸಿದಂತೆ ನಿರ್ದೇಶಕರ ಹೊಣೆಗಾರಿಕೆ ವಿವರವು ಕೆಳಕಂಡಂತಿರುವುದು :

ಎ) ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ದಿಸೆಯಲ್ಲಿ ಸಾಮಗ್ರಿಯ ವಿಲೇವಾರಿಗೆ ಸಂಬಂಧಿಸಿದಂತೆ ಸೂಕ್ತ ವಿವರಣೆ ಜೊತೆಗೆ ಅನ್ವಯವಾಗುವ ಲೆಕ್ಕಗಾರಿಕೆ ಮಾನದಂಡಗಳನ್ನು ಅನುಸರಿಸಲಾಗಿದೆ.

ಬಿ) ನಿರ್ದೇಶಕರು ಸೂಕ್ತವಾದ ಲೆಕ್ಕಪತ್ರಗಳ ನೀತಿಯನ್ನು ಆಯ್ಕೆ ಮಾಡಿ ಅವುಗಳನ್ನು ನಿಖರವಾಗಿ ಬಳಕೆ ಮಾಡಿದ್ದಾರೆ. ಆರ್ಥಿಕ ವರ್ಷದ ಕೊನೆಯಲ್ಲಿ ಕಂಪನಿಯ ಲಾಭ ಮತ್ತು ನಷ್ಟದ ಬಗ್ಗೆ ನೈಜವಾದ ಹಾಗೂ ನ್ಯಾಯೋಚಿತವಾದ ಚಿತ್ರಣ ನೀಡಲು ಸೂಕ್ತವಾದ ಮತ್ತು ಸಮಂಜಸವಾದ ತೀರ್ಮಾನಗಳನ್ನು ಕೈಗೊಂಡಿದ್ದಾರೆ ಮತ್ತು ಅಂದಾಜುಗಳನ್ನು ಮಾಡಿದ್ದಾರೆ;

ಸಿ) ಕಂಪನಿಯ ಆಸ್ತಿಗಳನ್ನು ಸಂರಕ್ಷಿಸಲು ಮತ್ತು ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು ಸದರಿ ಅಧಿನಿಯಮದ ಉಪಬಂಧಗಳ ಅನುಸಾರ ಸಾಕಷ್ಟು ಪ್ರಮಾಣದಲ್ಲಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಣೆ ಮಾಡಲು ನಿರ್ದೇಶಕರು ಸೂಕ್ತವಾದ ಮತ್ತು ಸಮರ್ಪಕವಾದ ಮುತುವರ್ಜಿ ವಹಿಸಿದ್ದಾರೆ;

ಡಿ) ನಿರ್ದೇಶಕರು ವಾರ್ಷಿಕ ಲೆಕ್ಕಪತ್ರವನ್ನು 'ಯಥಾಸ್ಥಿತಿಯ' ಆಧಾರದ ಮೇಲೆ ಸಿದ್ಧಪಡಿಸಿದ್ದಾರೆ.

ಇ) ನಿರ್ದೇಶಕರು ಅನ್ವಯವಾಗುವ ಎಲ್ಲಾ ಕಾನೂನುಗಳ ಉಪಬಂಧಗಳನ್ನು ಪರಿಪಾಲಿಸಿರುವುದನ್ನು ಖಾತರಿಪಡಿಸಲು ಸೂಕ್ತವಾದ ವ್ಯವಸ್ಥೆಗಳನ್ನು ರೂಪಿಸಿದ್ದಾರೆ. ಈ ವ್ಯವಸ್ಥೆಗಳು ಪರಿಪೂರ್ಣವಾಗಿವೆ ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿವೆ.

**14 ಕೇಂದ್ರ ಸರ್ಕಾರಕ್ಕೆ ತಿಳಿಸಬೇಕಾದ ಸಂಗತಿಗಳ ಹೊರತಾಗಿ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 143ರ ಉಪ ಪ್ರಕರಣ (12)ರ ಅನ್ವಯ ಲೆಕ್ಕಪರಿಶೋಧಕರಿಂದ ವರದಿ ಮಾಡಿರುವ ವಂಚನೆಗಳ ಬಗ್ಗೆಗಿನ ವಿವರಗಳು**

ಕಂಪನಿಗಳ ಅಧಿನಿಯಮ, 2013ರ ಪ್ರಕರಣ 143ರ ಉಪ ಪ್ರಕರಣ (12)ರ ಅನ್ವಯ ಲೆಕ್ಕಪರಿಶೋಧಕರಿಂದ ಯಾವುದೇ ವಂಚನೆ ವರದಿಯಾಗಿರುವುದಿಲ್ಲ.

**15 ಹಣಕಾಸಿನ ವರ್ಷದ ಕೊನೆ ಮತ್ತು ನಿರ್ದೇಶಕರ ವರದಿ ದಿನಾಂಕದ ನಡುವೆ ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ದಂಡಗಳು / ಶಿಕ್ಷೆ / ಬದ್ಧತೆಗಳ ವಿವರಗಳು**

ಹಣಕಾಸಿನ ವರ್ಷದ ಕೊನೆ ಮತ್ತು ನಿರ್ದೇಶಕರ ವರದಿಯ ದಿನಾಂಕದ ನಡುವೆ ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ದಂಡಗಳು/ಶಿಕ್ಷೆಗಳು/ಸಬ್ಧತೆಗಳು ಉಂಟಾಗಿರುವುದಿಲ್ಲ.

**16 ಕಂಪನಿಯ ಅಸ್ತಿತ್ವಕ್ಕೆ ಪೆಟ್ಟನ್ನು ಉಂಟು ಮಾಡುವುದೆಂದು ಮಂಡಳಿಯು ಅಭಿಪ್ರಾಯ ಪಟ್ಟಿರುವ ಯಾವುದೇ ಅಪಾಯದ ಅಂಶಗಳಿರುವಿಕೆಯನ್ನು ಗುರುತಿಸುವುದು ಸೇರಿದಂತೆ ಕಂಪನಿಯ ಅಪಾಯ ನಿರ್ವಹಣೆ ನೀತಿಯನ್ನು ರೂಪಿಸುವಿಕೆ ಮತ್ತು ಅನುಷ್ಠಾನ ಮಾಡಿರುವಿಕೆಯನ್ನು ತಿಳಿಸಲ್ಪಟ್ಟ ವಿವರಣೆ**

ಕಂಪನಿಯು ಅಪಾಯ ನಿರ್ವಹಣೆ ನೀತಿಯನ್ನು ಅನುಷ್ಠಾನ ಮಾಡಬೇಕಾಗಿದೆ.

**17 ವರದಿಗಾರಿಕೆಯ ವರ್ಷದ ಅವಧಿಯಲ್ಲಿ ಕಂಪನಿ ಕೈಗೊಂಡ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಉಪಕ್ರಮದ ಅನುಷ್ಠಾನಗೊಳಿಸಿರುವಿಕೆ ಮತ್ತು ನೀತಿ ರೂಪಿಸಿರುವಿಕೆ ಬಗ್ಗೆ ವಿವರಗಳು**

ನಿಮ್ಮ ನಿರ್ದೇಶಕರ ಮಂಡಳಿಯು ತಿಳಿಸುವುದೇನೆಂದರೆ, ಆರ್ಥಿಕ ವರ್ಷ 2016–17ರ ಅವಧಿಯಲ್ಲಿ ಕಂಪನಿಯು ಸಿಎಸ್‌ಆರ್ ಚಟುವಟಿಕೆಗಳ ಅನುಷ್ಠಾನಗೊಳಿಸುವಿಕೆ ಸಂಬಂಧ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 135ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದು. ಆರ್ಥಿಕ ವರ್ಷ 2016–17 ಮತ್ತು 2017–18ರ ಅವಧಿಯಲ್ಲಿ ಮಾಡಬೇಕಾಗಿರುವ ಕೆಳಕಂಡ ಸಿಎಸ್‌ಆರ್ ಚಟುವಟಿಕೆಗಳನ್ನು ಕಂಪನಿ ಗುರುತಿಸಿರುವುದು ಎಂದು ನಿಮ್ಮ ಮಂಡಳಿಯ ನಿರ್ದೇಶಕರು ತಿಳಿಸಿರುವರು. ಖರ್ಚು ಮಾಡದಿರುವ ಆರ್ಥಿಕ ವರ್ಷ 2014–15ರ ಸಿಎಸ್‌ಆರ್ ನಿಧಿ ರೂ.38.00 ಲಕ್ಷಗಳನ್ನು ಮತ್ತು ಆರ್ಥಿಕ ವರ್ಷ 2015–16 ಕ್ಕೆ ರೂ.36.00 ಲಕ್ಷವನ್ನು ಮತ್ತು 2016–17ಕ್ಕೆ ರೂ.17.25 ಲಕ್ಷವನ್ನು ಆರ್ಥಿಕ ವರ್ಷ 2016–17 ಮತ್ತು 2017–18ರ ಅವಧಿಯಲ್ಲಿ ಸಿಎಸ್‌ಆರ್ ಚಟುವಟಿಕೆಗಳನ್ನು ನಡೆಸಲು ಗೊತ್ತುಪಡಿಸಲಾಗಿದೆ. 2016–17ರ ಆರ್ಥಿಕ ವರ್ಷದಲ್ಲಿ ಕಂಪನಿಯು ಸಿಎಸ್‌ಆರ್ ಚಟುವಟಿಕೆಗಳಿಗೆ ರೂ.23.63 ಲಕ್ಷ ಖರ್ಚು ಮಾಡಲಾಗಿದೆ ಎಂದು ನಿಮ್ಮ ನಿರ್ದೇಶಕರುಗಳ ಮಂಡಳಿಯು ವರದಿ ಮಾಡಿದೆ. ಕಂಪನಿಗಳ ಅಧಿನಿಯಮ, 2013ರ ಪ್ರಕರಣ 135(4)ರಲ್ಲಿ ತಿಳಿಸಿರುವ ಸಿಎಸ್‌ಆರ್ ನೀತಿ ಮತ್ತು ಇತರೆ ವಿವರಗಳ ಬಗ್ಗೆ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸದರಿ ವರದಿಗೆ ಅನುಬಂಧ–III ಆಗಿ ಲಗತ್ತಿಸಲಾಗಿದೆ.

| ಗಮನ ನೀಡಬೇಕಾಗಿರುವುದು | ಕ್ರಮ ಸಂಖ್ಯೆ | ಚಟುವಟಿಕೆ |
|---|---|---|
| ಸುಗಮ ಜೀವನಕ್ಕೆ ಮಾರ್ಗವಾಗುವ ಶಿಕ್ಷಣ ಮತ್ತು ಕೌಶಲ್ಯವನ್ನು ಮತ್ತು ಚೇತನರು, ದ್ವಿಲಿಂಗಿಗಳು ಮತ್ತು ಸಮಾಜದ ಇತರೆ ದುರ್ಬಲ ವರ್ಗಗಳಿಗೆ ಉದ್ಯೋಗಾವಕಾಶ ಹೆಚ್ಚಿಸುವ ಕಾರ್ಯಕ್ರಮಗಳು | 1 | ವಿಶೇಷಚೇತನರು, ದ್ವಿಲಿಂಗಿಗಳುವಿಶೇಷ ಮತ್ತು ಸಮಾಜ ಇತರೆ ದುರ್ಬಲ ವರ್ಗಗಳಿಗೆ ಉದ್ಯೋಗಾವಕಾಶ ಹೆಚ್ಚಿಸುವ ಕೌಶಲ್ಯ ಬೆಳವಣಿಗೆ. |
| | 2 | ಡಿಜಿಟಲ್ ಸಾಕ್ಷರತೆ |
| ಸುರಕ್ಷಿತ ಕುಡಿಯುವ ನೀರು ಸೇರಿದಂತೆ ಆರೋಗ್ಯ, ನೈರ್ಮಲ್ಯ ಪೌಷ್ಠಿಕಾಂಶ ಸುಧಾರಣೆಗಾಗಿ ಸೌಲಭ್ಯಗಳ ಪೂರೈಕೆ ಮತ್ತು ಬಲವರ್ಧನೆ | 3 | ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯತೆ |
| | 4 | ಸಂಚಾರಿ ಆರೋಗ್ಯ ಕಾರ್ಯಕ್ರಮ ಮತ್ತು ಸೇವೆಗಳು, ವರ್ತನೆ ಬದಲಾವಣೆ ಸಂಪರ್ಕ ಸಂವಹನೆ |
| ಸಾಮಾಜಿಕ ಬಂಡವಾಳವೃದ್ಧಿ ಮತ್ತು ಮೂಲ ಸೌಲಭ್ಯಗಳ ಸೃಷ್ಠಿ | 5 | ಮಹಿಳಾ ಸ್ವ ಸಹಾಯ ಗುಂಪುಗಳಲ್ಲಿ ಉದ್ಯಮಶೀಲತೆ ಬೆಳೆಸುವುದು. |
| | 6 | ನೈಸರ್ಗಿಕ ವಿಪತ್ತು ಸಂದರ್ಭದಲ್ಲಿ ಬೆಂಬಲ ನೀಡುವುದು |
| ಬೆಳವಣಿಗೆ ಸೇರಿದಂತೆ ಸಹಿಷ್ಣುತೆ ಪೋಷಣೆ | 7 | ಸಂರಕ್ಷಣೆ ತಂತ್ರಜ್ಞಾನ |
| | 8 | ಗಿಡಮೂಲಿಕೆ ಉದ್ಯಾನಗಳು/ಪಾರ್ಕುಗಳು/ ನೆಡುತೋಪುಗಳು |
| | 9 | ಗ್ರಾಮೀಣ ಇಂಧನ ಪರಿಹಾರಗಳು |
| ಉನ್ನತ ಸಾಮಾಜಿಕ ಪರಿಣಾಮವನ್ನುಂಟು ಮಾಡುವ ತಂತ್ರಜ್ಞಾನ ಸೃಷ್ಟಿ. | | |

18 ಸದರಿ ವರ್ಷಾವಧಿಯಲ್ಲಿ ನೇಮಕವಾಗಿರುವ ಅಥವಾ ರಾಜೀನಾಮೆ ನೀಡಿರುವ ನಿರ್ದೇಶಕರುಗಳು / ಪ್ರಮುಖ ಆಡಳಿತ ಸಿಬ್ಬಂದಿಯ ವಿವರಗಳು

ಕರ್ನಾಟಕ ಸರ್ಕಾರದ ನಿರ್ದೇಶನಗಳ ಅನ್ವಯ, ನಿರ್ದೇಶಕರುಗಳ ಮಂಡಳಿಯಲ್ಲಿ ಕೆಳಕಂಡ ಬದಲಾವಣೆಗಳಾಗಿವೆ:

| ಕ್ರ. ಸಂ. | ನಿರ್ದೇಶಕರ ಹೆಸರು | ನಾಮ ನಿರ್ದೇಶನ/ ಸಮಾಪ್ತಿ ದಿನಾಂಕ | ಇವರ ಬದಲಾಗಿ |
|---|---|---|---|
| 1 | ಶ್ರೀ ಎಸ್.ಸಿ. ಶಶಿಧರ್ | 16.04.2016 | |
| 2 | ಶ್ರೀ ಎ.ಎಸ್. ಮಂಜುನಾಥ್ | 16.04.2016 | |
| 3 | ಶ್ರೀ ಡಿ.ಎಸ್. ರಘು | 16.04.2016 | |
| 4 | ಶ್ರೀ ವೆಂಕಟಸುಬ್ಬರಾಜು | 16.04.2016 | |
| 5 | ಶ್ರೀ ಬಸವಣ್ಣ | 16.04.2016 | |
| 6 | ಶ್ರೀ ಅವಿನಾಶ್‌ಬಾಬು | 16.04.2016 | |
| 7 | ಶ್ರೀ ಎಂ.ಎ. ಅಕ್ಬರ್ ಪಾಷ | 16.04.2016 | |
| 8 | ಶ್ರೀ ಭೀಮರಾಯ | 16.04.2016 | |
| 9 | ಶ್ರೀ ರಾಮಣ್ಣ ಕೆ.ಕಲ್ಲಣ್ಣವರ್ | 16.04.2016 | |
| 10 | ಶ್ರೀಮತಿ ಬಿ. ಸಿಂಧು, ಭಾ.ಆ.ಸೇ | 18.07.2016 | ಶ್ರೀಮತಿ ದೀಪ್ತಿ ಆದಿತ್ಯ ಕಾನಡೆ, ಭಾ.ಆ.ಸೇ |
| 11 | ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ | 20.08.2016 | ಶ್ರೀ. ಡಿ.ವಿ.ಪ್ರಸಾದ್, ಭಾ.ಆ.ಸೇ. |
| 12 | ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ. | 25.08.2016 | ಶ್ರೀ ಯು.ಬಿ.ವೆಂಕಟೇಶ್‌ರವರ ಸ್ಥಾನದಲ್ಲಿ ಅಧ್ಯಕ್ಷರಾಗಿ ನೇಮಕ |
| 13 | ಶ್ರೀ ಶೈಲೇಂದರ್ ಕುಮಾರ್ ತ್ಯಾಗಿ | 25.10.2016 | ಶ್ರೀ ಪಿ.ಕೆ.ದಾಸ್ |
| 14 | ಶ್ರೀ ಡಿ. ಸುಧಾಕರ್, ಎಂಎಲ್‌ಎ | 15.11.2016 | ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ ಇವರ ಸ್ಥಾನದಲ್ಲಿ ಅಧ್ಯಕ್ಷರಾಗಿ ನೇಮಕವಾಗಿರುವರು |
| 15 | ಶ್ರೀ ಗೌರವ್ ಗುಪ್ತ, ಭಾ.ಆ.ಸೇ | 18.03.2017 | ಶ್ರೀಮತಿ ವಿ. ಮಂಜುಳ, ಭಾ.ಆ.ಸೇ |
| 16 | ಶ್ರೀಮತಿ ಸಲ್ಮ ಕೆ ಫಾಹಿಮ್, ಭಾ.ಆ.ಸೇ | 18.03.2017 | ಶ್ರೀಮತಿ ತನುಶ್ರೀ ದೇಬ್ ಬರ್ಮಾ ಭಾ.ಆ.ಸೇ |
| 17 | ಶ್ರೀ ಶ್ರೀವಾಸ್ತ ಕೃಷ್ಣ, ಭಾ.ಆ.ಸೇ | 18.03.2017 | ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ |
| 18 | ಶ್ರೀ ರಂಗೇಗೌಡ, ಭಾ..ಅ.ಸೇ | 03.05.2017 | ಶ್ರೀ ರಾಜ್‌ಕುಮಾರ್ ಶ್ರೀವಾಸ್ತವ, ಭಾ..ಅ.ಸೇ |
| 19 | ಶ್ರೀ ರಾಜೇಂದರ್ ಕುಮಾರ್ ಕಠಾರಿಯ, ಭಾ.ಆ.ಸೇ | 10.05.2017 | ಶ್ರೀ ಶ್ರೀವಾಸ್ತ ಕೃಷ್ಣ, ಭಾ.ಆ.ಸೇ |
| 20 | ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ | 28.07.2017 | ಶ್ರೀ ರಾಜೇಂದರ್ ಕುಮಾರ್ ಕಠಾರಿಯ, ಭಾ.ಆ.ಸೇ |

**ಇದು ಹೊರತಾಗಿ ವರದಿಯಲ್ಲಿನ ಈ ವರ್ಷದಲ್ಲಿ ಕಂಪನಿಯ ನಿರ್ದೇಶಕರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

**ವರದಿಯ ದಿನಾಂಕದಲ್ಲಿದ್ದಂತೆ ಈ ಕೆಳಕಂಡವರು ಮಂಡಳಿಯ ನಿರ್ದೇಶಕರಾಗಿರುವರು:**

| | | |
|---|---|---|
| 1 | ಶ್ರೀ ಡಿ.ಸುಧಾಕರ್,<br>ಕರ್ನಾಟಕ ವಿಧಾನಸಭಾ ಸದಸ್ಯರು | ಅಧ್ಯಕ್ಷರು |
| 2 | ಶ್ರೀ ಗೌರವ್ ಗುಪ್ತ, ಭಾ.ಆ.ಸೇ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಐಟಿ, ಬಿಟಿ ಮತ್ತು ಎಸ್ ಅಂಡ್ ಟಿ ಇಲಾಖೆ |
| 3 | ಶ್ರೀಮತಿ ರೇಣುಕಾ ಚಿದಂಬರಂ,ಭಾ.ಆ.ಸೇ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ |
| 4 | ಶ್ರೀಮತಿ ಬಿ.ಸಿಂಧು, ಭಾ.ಆಸೇ | ಸರ್ಕಾರದ ಉಪಕಾರ್ಯದರ್ಶಿಗಳು,<br>ಹಣಕಾಸು ಇಲಾಖೆ (ಬಿ ಅಂಡ್ಆರ್) |
| 5 | ಶ್ರೀಮತಿ ಸಲ್ಮಕೆ ಫಾಹಿಮ್, ಭಾ.ಆ.ಸೇ | ನಿರ್ದೇಶಕರು, ಐಟಿ ಮತ್ತು ಬಿಟಿಇಲಾಖೆ |
| 6 | ಶ್ರೀ ರಂಗೇಗೌಡ, ಭಾ..ಅ.ಸೇ | ವ್ಯವಸ್ಥಾಪಕ ನಿರ್ದೇಶಕರು |
| 7 | ಪ್ರೊ. ಎಸ್. ಸದಗೋಪನ್ | ನಿರ್ದೇಶಕರು, ಐಐಐಟಿಬಿ |
| 8 | ಶ್ರೀ ಶೈಲೇಂದರ್ ಕುಮಾರ್ ತ್ಯಾಗಿ | ನಿರ್ದೇಶಕರು,ಎಸ್‌ಟಿಪಿಐ |
| 9 | ಶ್ರೀ ಎಸ್.ಸಿ.ಶಶಿಧರ್ | ನಿರ್ದೇಶಕರು, |
| 10 | ಶ್ರೀ ಎ.ಎಸ್. ಮಂಜುನಾಥ್ | ನಿರ್ದೇಶಕರು, |
| 11 | ಶ್ರೀ ಡಿ.ಎಸ್. ರಘು | ನಿರ್ದೇಶಕರು, |
| 12 | ಶ್ರೀ ಕೆ.ವೆಂಕಟಸುಬ್ಬರಾಜು | ನಿರ್ದೇಶಕರು, |
| 13 | ಶ್ರೀ ಬಸವಣ್ಣ | ನಿರ್ದೇಶಕರು, |
| 14 | ಶ್ರೀ ಬಿ.ಆರ್. ಅವಿನಾಶ್‌ಬಾಬು | ನಿರ್ದೇಶಕರು, |
| 15 | ಶ್ರೀ ಎಂ.ಎ. ಅಕ್ಬರ್ ಪಾಷ | ನಿರ್ದೇಶಕರು, |
| 16 | ಶ್ರೀ ಭೀಮರಾಯ | ನಿರ್ದೇಶಕರು, |
| 17 | ಶ್ರೀ ರಾಮಣ್ಣ ಕೆ.ಕಲ್ಲಣ್ಣವರ್ | ನಿರ್ದೇಶಕರು, |

**ವರದಿಯ ದಿನಾಂಕದಂದು ಕೆಳಕಂಡ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರುಗಳು ನಿರ್ಗಮಿಸಿರುವರು:**

| | | |
|---|---|---|
| 1. ಶ್ರೀ ಪ್ರಿಯಾಂಕ್ ಖರ್ಗೆ,<br>ಮಾನ್ಯ ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ ಮತ್ತು<br>ಜೈವಿಕ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ. | : | ಅಧ್ಯಕ್ಷರು |
| 2. ಶ್ರೀ ರಾಜ್‌ಕುಮಾರ್ ಶ್ರೀವಾಸ್ತವ, ಭಾಅ.ಸೇ | : | ವ್ಯವಸ್ಥಾಪಕ ನಿರ್ದೇಶಕರು |
| 3. ಶ್ರೀಮತಿ ದೀಪ್ತಿ ಆದಿತ್ಯ ಕಾನಡೆ,ಭಾ.ಆ.ಸೇ | : | ನಿರ್ದೇಶಕರು |
| 4. ಶ್ರೀ ಡಿ.ವಿ.ಪ್ರಸಾದ್, ಭಾ.ಆ.ಸೇ | : | ನಿರ್ದೇಶಕರು |
| 5. ಶ್ರೀ ಪಿ.ಕೆ.ದಾಸ್ | : | ನಿರ್ದೇಶಕರು |
| 6. ಶ್ರೀಮತಿ ವಿ. ಮಂಜುಳ,ಭಾ.ಆ.ಸೇ | : | ನಿರ್ದೇಶಕರು |
| 7. ಶ್ರೀಮತಿ ತನುಶ್ರೀ ದೇಬ್ ಬರ್ಮ ಭಾ.ಆ.ಸೇ | : | ನಿರ್ದೇಶಕರು |
| 8. ಶ್ರೀ ಶ್ರೀವಾಸ್ತ ಕೃಷ್ಣ, ಭಾ.ಆ.ಸೇ | : | ನಿರ್ದೇಶಕರು |
| 9. ಶ್ರೀ ರಾಜೇಂದರ್ ಕುಮಾರ್ ಕಠಾರಿಯ, ಭಾ.ಆ.ಸೇ | : | ನಿರ್ದೇಶಕರು |

ಮೇಲೆ ತಿಳಿಸಿರುವ ಕಂಪನಿಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕರು ಅವರ ಅವಧಿಯಲ್ಲಿ ಸಲ್ಲಿಸಿದ ಅಮೂಲ್ಯ ಸೇವೆಗಳನ್ನು ಮಂಡಳಿಯು ಶ್ಲಾಘಿಸುವುದು ಮತ್ತು ದಾಖಲಿಸಲು ಬಯಸುವುದು.

ನಿಮ್ಮ ನಿರ್ದೇಶಕರ ಮಂಡಳಿಯು ಮತ್ತೆ ತಿಳಿಸುವುದೇನೆಂದರೆ ಕನಿಷ್ಠ ಇಬ್ಬರು ಸ್ವತಂತ್ರ ನಿರ್ದೇಶಕರುಗಳನ್ನು ನೇಮಕ ಮಾಡುವ ವಿಚಾರದಲ್ಲಿ ಕಂಪನಿಗಳ (ನಿರ್ದೇಶಕರ ನೇಮಕಾತಿ ಮತ್ತು ಅರ್ಹತೆಗಳು) ನಿಯಮಗಳು, 2014 ರ ನಿಯಮ 4 ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ 149ರ ಉಪ–ಪರಿಚ್ಛೇದ (4)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದು. ಆದರೂ, ಕಂಪನಿಯ ಮಂಡಳಿಗೆ ಸ್ವತಂತ್ರ ನಿರ್ದೇಶಕರು ನೇಮಕವಾಗಿರುವುದಿಲ್ಲ.

ನಿಮ್ಮ ನಿರ್ದೇಶಕರ ಮಂಡಳಿಯು ಮತ್ತೆ ತಿಳಿಸುವುದೇನೆಂದರೆ, ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯ ನೇಮಕಾತಿ ವಿಚಾರವಾಗಿ ಕಂಪನಿಗಳ (ಆಡಳಿತ ವರ್ಗದ ಸಿಬ್ಬಂದಿ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ 8ಎ ಓದಿಕೊಂಡಂತೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 203ರ ಉಪಬಂಧಗಳು ಸಹ ಕಂಪನಿಗೆ ಅನ್ವಯವಾಗುವವು. ಆದರೂ ಸಹ, ಈ ವರದಿಯ ವರ್ಷಾವಧಿಯಲ್ಲಿ ಕಂಪನಿಯು ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯನ್ನು ನೇಮಕ ಮಾಡಿರುವುದಿಲ್ಲ.

**19 ಮಂಡಳಿಯ ಸಮಿತಿಗಳು**

ಸದರಿ ವರದಿಯ ವರ್ಷಾವಧಿಯಲ್ಲಿ ಮಂಡಳಿಯು ಕೆಳಕಂಡ ಸಮಿತಿಗಳನ್ನು ರಚನೆ ಮಾಡಿದೆ :

– **ಸಿಎಸ್‌ಆರ್ ಸಮಿತಿ :** ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನೀತಿ) ನಿಯಮಗಳು, 2014 ಓದಿಕೊಂಡಂತೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 135ರ ಉಪಬಂಧಗಳ ಅನುಸಾರ ನಿರ್ದೇಶಕರ ಮಂಡಳಿಯು ಸಿಎಸ್‌ಆರ್ ಸಮಿತಿಯನ್ನು ರಚನೆ ಮಾಡಿದೆ. ಕಂಪನಿಯು ಕೈಗೊಳ್ಳಬೇಕಾಗಿರುವ ಚಟುವಟಿಕೆಗಳನ್ನು ತಿಳಿಸಲ್ಪಡುವ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನೀತಿಯ ರಚನೆ ಮತ್ತು ಮಂಡಳಿಗೆ ಶಿಫಾರಸ್ಸು ಮಾಡುವುದು, ಸದರಿ ಚಟುವಟಿಕೆಗಳಿಗೆ ಮಾಡಬೇಕಾಗಿರುವ ಖರ್ಚಿನ ಮೊತ್ತದ ಬಗ್ಗೆ ಶಿಫಾರಸ್ಸು ಮಾಡುವುದು, ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ಕಾಲಕಾಲಕ್ಕೆ ಮೇಲುಸ್ತುವಾರಿ ನೋಡಿಕೊಳ್ಳುವುದು ಮತ್ತು ಕಂಪನಿಯಿಂದ ಕೈಗೊಳ್ಳಲು ಉದ್ದೇಶಿಸುವ ಯೋಜನೆಗಳು/ಕಾರ್ಯಕ್ರಮಗಳು/ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಿಕೆಗಾಗಿ ಪಾರದರ್ಶಕ ಮೇಲ್ವಿಚಾರಣೆ ಯಂತ್ರವನ್ನು ಸಿದ್ಧಪಡಿಸುವುದು ಈ ಸಮಿತಿಯ ಹೊಣೆಗಾರಿಕೆಯಾಗಿರುತ್ತದೆ.

– **ಈ ಕೆಳಕಂಡ ನಿರ್ದೇಶಕರು ಸಿಎಸ್‌ಆರ್ ಸಮಿತಿಯ ಸದಸ್ಯರಾಗಿರುವರು:–**

| | | | |
|---|---|---|---|
| 1. | ವ್ಯವಸ್ಥಾಪಕ ನಿರ್ದೇಶಕರು | – | ಅಧ್ಯಕ್ಷರು |
| 2. | ಶ್ರೀ ರಾಮಣ್ಣ ಕೆ ಕಲ್ಲಣ್ಣವರ್ | – | ಸದಸ್ಯರು |
| 3. | ಶ್ರೀ ಎಂ.ಎ. ಅಕ್ಬರ್ ಪಾಷ | – | ಸದಸ್ಯರು |
| 4. | ಶ್ರೀ ಬಿ.ಆರ್. ಅವಿನಾಶ್ ಬಾಬು | – | ಸದಸ್ಯರು |
| 5. | ಶ್ರೀ ಎ.ಎಸ್. ಮಂಜುನಾಥ್ | – | ಸದಸ್ಯರು |
| 6. | ಶ್ರೀ ಬಸವಣ್ಣ | – | ಸದಸ್ಯರು |

– **ಲೆಕ್ಕಪರಿಶೋಧನಾ ಸಮಿತಿ** : ಕಂಪನಿಗಳ ಅಧಿನಿಯಮ, 2013ರ ಪ್ರಕರಣ 177ರ ಉಪಬಂಧಗಳ ಅನ್ವಯ ಅಗತ್ಯವಾದಂತೆ ಲೆಕ್ಕಪರಿಶೋಧನಾ ಸಮಿತಿಯನ್ನು ರಚನೆ ಮಾಡಲಾಗಿದೆ. ಲೆಕ್ಕಪರಿಶೋಧನಾ ಸಮಿತಿಗೆ ಕೆಳಕಂಡ ನಿರ್ದೇಶಕರುಗಳು ಸದಸ್ಯರಾಗಿರುವರು :

| | | | |
|---|---|---|---|
| 1. | ವ್ಯವಸ್ಥಾಪಕ ನಿರ್ದೇಶಕರು | – | ಅಧ್ಯಕ್ಷರು |
| 2. | ನಿರ್ದೇಶಕರು, ಐಟಿ ಮತ್ತು ಬಿಟಿ | – | ಸದಸ್ಯರು |
| 3. | ಶ್ರೀ ಡಿ.ಎಸ್. ರಘು | – | ಸದಸ್ಯರು |
| 4. | ಶ್ರೀ ವೆಂಕಟಸುಬ್ಬರಾಜು | – | ಸದಸ್ಯರು |
| 5. | ಶ್ರೀ ಭೀಮರಾಯ | – | ಸದಸ್ಯರು |
| 6. | ಶ್ರೀ ಎಸ್.ಸಿ.ಶಶಿಧರ್ | – | ಸದಸ್ಯರು |

**20 ಈ ವರ್ಷಾವಧಿಯಲ್ಲಿ ಸಹಾಯಕ ಕಂಪನಿಗಳು, ಸಹಭಾಗಿತ್ವ ಕಂಪನಿಗಳು ಅಥವಾ ಸಹವರ್ತಿ ಕಂಪನಿಗಳಾಗಿರುವ ಅಥವಾ ಇವುಗಳಿಂದ ರದ್ದಾಗಿರುವ ಕಂಪನಿಗಳ ಹೆಸರುಗಳು**

ನಿಮ್ಮ ನಿರ್ದೇಶಕರುಗಳ ಮಂಡಳಿಯು ತಿಳಿಸುವುದೇನೆಂದರೆ, ಸದರಿ ವರದಿಯ ವರ್ಷದ ಅವಧಿಯಲ್ಲಿ ಯಾವುದೇ ಸಹಾಯಕ ಕಂಪನಿ, ಸಹಭಾಗಿತ್ವ ಕಂಪನಿ ಅಥವಾ ಸಹವರ್ತಿ ಕಂಪನಿಯು ಸದರಿ ಕಂಪನಿಯ ಕಾರ್ಪೋರೇಟ್ ಕಂಪನಿಯಾಗಿ ಸೇರ್ಪಡೆಯಾಗಿರುವುದಿಲ್ಲ ಅಥವಾ ಇಂತಹ ಯಾವುದೇ ಕಂಪನಿಯು ರದ್ದಾಗಿರುವುದಿಲ್ಲ.

**21 ನಿಯಂತ್ರಕರು ಅಥವಾ ನ್ಯಾಯಾಲಯ ಅಥವಾ ನ್ಯಾಯ ಪಂಚಾಯ್ತಿಗಳಿಂದ ಹೊರಡಿಸಿರುವ ಅಭಿವೃದ್ಧಿಪರ ಕಂಪನಿಯ ಸ್ಥಾನಮಾನಕ್ಕೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಯ ಮೇಲೆ ಯಾವುದೇ ಪರಿಣಾಮ ಬೀರುವಂತಹ ಗಮನಾರ್ಹವಾದ ಮತ್ತು ವಾಸ್ತವಿಕ ಆಜ್ಞೆಗಳ ವಿವರಗಳು**

ಅಭಿವೃದ್ಧಿಪರ ಕಂಪನಿಯ ಸ್ಥಾನಮಾನಕ್ಕೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆ ಮೇಲೆ ಪರಿಣಾಮ ಉಂಟು ಮಾಡುವಂತಹ ಯಾವುದೇ ಗಮನಾರ್ಹವಾದ ಮತ್ತು ವಾಸ್ತವಿಕ ಆಜ್ಞೆಗಳನ್ನು ಯಾವುದೇ ನ್ಯಾಯಾಲಯ/ನಿಯಂತ್ರಕರು ಅಥವಾ ನ್ಯಾಯ ಪಂಚಾಯ್ತಿ ಹೊರಡಿಸಿರುವುದಿಲ್ಲ.

**22 ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ತಡೆ (ತಡೆ, ನಿಷೇಧ ಮತ್ತು ಪರಿಹಾರ) ಅಧಿನಿಯಮ 2013ರ ಅನ್ವಯ ಅಗತ್ಯವಾದಂತೆ ಪ್ರತಿ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಸ್ವೀಕರಿಸಿರುವ ಮತ್ತು ವಿಲೇವಾರಿ ಮಾಡಿರುವ ದೂರುಗಳ ಸಾರಾಂಶ ಮತ್ತು ಕಂಪನಿಯು ಅಧಿನಿಯಮದ ಅಗತ್ಯಗಳ ಅನುಸಾರ ಲೈಂಗಿಕ ಕಿರುಕುಳ ನಿರೋಧಕ ನೀತಿಯನ್ನು ಹೊಂದಿರುವ ಬಗ್ಗೆ ಮತ್ತು ದೂರುಗಳ ಪರಿಹಾರಕ್ಕಾಗಿ ಆಂತರಿಕ ದೂರುಗಳ ಸಮಿತಿ ರಚಿಸಿರುವ ಬಗ್ಗೆ ಹಾಗೂ ಎಲ್ಲಾ ನೌಕರರು (ಖಾಯಂ, ಗುತ್ತಿಗೆ, ತಾತ್ಕಾಲಿಕ, ತರಬೇತಿದಾರರು) ಈ ನೀತಿಯ ಅಡಿಯಲ್ಲಿ ಒಳಪಟ್ಟಿರುವ ಬಗ್ಗೆ ಘೋಷಣೆ**

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನಡೆಯದಂತೆ ತಡೆಯುವ ಸಲುವಾಗಿ ನೂತನ ಅಧಿನಿಯಮವನ್ನು ಅಂದರೆ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ (ತಡೆ, ನಿಷೇಧ ಮತ್ತು ಪರಿಹಾರ) ಅಧಿನಿಯಮ, 2013 ಅನ್ನು ದಿನಾಂಕ : 09.12.2013ರಂದು ಪ್ರಕಟಪಡಿಸಲಾಗಿದೆ. ಸದರಿ ಅಧಿನಿಯಮದ ಅನ್ವಯ ಪ್ರತಿಯೊಂದು ಕಂಪನಿಯು ಕೆಲಸದ ಸ್ಥಳದಲ್ಲಿ ಯಾವುದೇ ಮಹಿಳಾ ನೌಕರರ ಮೇಲೆ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ದೂರುಗಳ ಬಗ್ಗೆ ವಿಚಾರಣೆ ಮಾಡಲು ಆಂತರಿಕ ದೂರುಗಳ ಸಮಿತಿ ಒಂದನ್ನು ಸ್ಥಾಪಿಸಬೇಕಾಗಿರುತ್ತದೆ. ಅದರಂತೆ ಕಂಪನಿಯಲ್ಲಿ ಈಗಾಗಲೇ ಅಂತಹ ಸಮಿತಿಯು ಅಸ್ತಿತ್ವದಲ್ಲಿರುವುದು. ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ಸಮಿತಿಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

**23 ಕಂಪನಿಗಳ ಅಧಿನಿಯಮ, 2013ರ ಪ್ರಕರಣ 177ರ ಉಪ ಪ್ರಕರಣ (10)ರ ಅನುಸಾರ ಕಂಪನಿಗೆ ನೈಜ ವಿಚಾರಗಳನ್ನು ವರದಿ ಮಾಡಲು ನಿರ್ದೇಶಕರು ಮತ್ತು ನೌಕರರಿಗೆ ಅನುಕೂಲವಾಗಲು ಜಾಗೃತ ಯಂತ್ರದ ಸ್ಥಾಪನೆಯ ವಿವರಗಳು**

ಕಂಪನಿಗಳ ಅಧಿನಿಯಮ, 2013ರ ಪ್ರಕರಣ 177ರ ಉಪ ಪ್ರಕರಣ (10)ರ ಉಪಬಂಧಗಳ ಅನುಸಾರ ಕಂಪನಿಗೆ ನೈಜ ವಿಚಾರಗಳನ್ನು ತಿಳಿಸಲು ನಿರ್ದೇಶಕರು ಮತ್ತು ನೌಕರರುಗಳಿಗೆ ಅನುವಾಗಲು ಜಾಗೃತ ಯಂತ್ರ ಸ್ಥಾಪನೆಯು ಸದರಿ ಕಂಪನಿಗೆ ಅನ್ವಯವಾಗುವುದಿಲ್ಲ.

**24 ಅಧಿನಿಯಮದ ಭಾಗ V ರ ಅಡಿಯಲ್ಲಿ ಒಳಪಡುವ ಠೇವಣಿಗಳಿಗೆ ಸಂಬಂಧಿಸಿದಂತೆ ವಿವರಗಳು**

ಕಂಪನಿಯು ಕಂಪನಿಗಳ ಅಧಿನಿಯಮ 2013ರ ಭಾಗ V ರ ಅನ್ವಯ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ. ಆದುದರಿಂದ ಸದರಿ ಕಲಂ ಅನ್ವಯ ಘೋಷಣೆ ಮಾಡುವಿಕೆ ಅಗತ್ಯ ಉಂಟಾಗುವುದಿಲ್ಲ.

**25 ಹಣಕಾಸಿನ ವಿವರಣೆಗಳಿಗೆ ಸಂಬಂಧಿಸಿದಂತೆ ಸಮರ್ಪಕವಾದ ಆಂತರಿಕ ಹಣಕಾಸು ನಿಯಂತ್ರಕಗಳಿರುವ ಬಗ್ಗೆ ವಿವರಗಳು**

ಕಂಪನಿಗಳ ಅಧಿನಿಯಮ 2013ರ (ಅಧಿನಿಯಮ) ಪ್ರಕರಣ 143ರ ಉಪ ಪ್ರಕರಣ 3 ರ ಕಲಂ (i) ರನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿಯನ್ನು ಶಾಸನಬದ್ಧ ಲೆಕ್ಕ ಪರಿಶೋಧಕರು ದಿನಾಂಕ: 29.08.2017ರ ತಮ್ಮ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯಲ್ಲಿ (ಅನುಬಂಧ–ಸಿ) ವರದಿ ಮಾಡಿದ್ದಾರೆ.

**26 ಮಂಡಳಿಯಿಂದ ಅದರ ಸ್ವಂತ ಸಾಮರ್ಥ್ಯದ ಮುಖೇನ ಮತ್ತು ಅದರ ಸಮಿತಿಗಳಿಂದ ಹಾಗೂ ಪ್ರತಿ ನಿರ್ದೇಶಕರಿಂದ ಸಾಂಪ್ರದಾಯಿಕ ವಾರ್ಷಿಕ ಮೌಲ್ಯಮಾಪನದ ಘೋಷಣೆ**

ಕಂಪನಿಯು ಮಂಡಳಿಯ ಸ್ವಸಾಮರ್ಥ್ಯದ ಮುಖೇನ, ಸಮಿತಿಗಳ ಮೂಲಕ ಹಾಗೂ ಪ್ರತಿ ನಿರ್ದೇಶಕರಿಂದ ಸಾಂಪ್ರದಾಯಿಕ ವಾರ್ಷಿಕ ಮೌಲ್ಯಮಾಪನ ಘೋಷಣೆಯು ವರದಿಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಗೆ ಅನ್ವಯವಾಗುವುದಿಲ್ಲ.

**27 ಈ ವರದಿಯ ವರ್ಷದಲ್ಲಿ ಕಂಪನಿಯಿಂದ ನೀಡಲಾಗಿರುವ ವ್ಯತ್ಯಾಸದ ಹಕ್ಕುಗಳ ಜೊತೆಗಿನ ಈಕ್ವಿಟಿ ಷೇರುಗಳ ವಿವರಗಳು**

ನಿಮ್ಮ ನಿರ್ದೇಶಕರ ಮಂಡಳಿಯು ತಿಳಿಸುವುದೇನೆಂದರೆ, ಈ ವರದಿಯ ವರ್ಷದಲ್ಲಿ ಕಂಪನಿಯು ಕಂಪನಿಗಳ (ಷೇರು ಬಂಡವಾಳ ಮತ್ತು ಡಿಬೆಂಚರುಗಳು) ನಿಯಮಗಳು, 2014ರ ನಿಯಮ 4ರ ಉಪ ನಿಯಮ (4) ಓದಿಕೊಂಡಂತೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 43ರ ಉಪಬಂಧಗಳ ಅನುಸಾರ ವ್ಯತ್ಯಾಸದ ಹಕ್ಕುಗಳ ಜೊತೆಗಿನ ಈಕ್ವಿಟಿ ಷೇರುಗಳನ್ನು ನೀಡಿರುವುದಿಲ್ಲ.

**28 ವರದಿಯ ವರ್ಷದ ಅವಧಿಯಲ್ಲಿ ಕಂಪನಿಯು ನೀಡಿರುವ ಸ್ವೆಟ್ ಈಕ್ವಿಟಿ ಷೇರುಗಳ ವಿವರ**

ನಿಮ್ಮ ನಿರ್ದೇಶಕರ ಮಂಡಳಿಯು ತಿಳಿಸುವುದೇನೆಂದರೆ, ವರದಿಯ ಈ ವರ್ಷದಲ್ಲಿ ಕಂಪನಿಗಳ (ಷೇರು ಬಂಡವಾಳ ಮತ್ತು ಡಿಬೆಂಚರುಗಳು) ನಿಯಮಗಳು, 2014ರ ನಿಯಮ 8ರ ಉಪ ನಿಯಮ (13) ಓದಿಕೊಂಡಂತೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 54ರ ಉಪಬಂಧಗಳ ಅನುಸಾರ ಕಂಪನಿಯು ಸ್ವೆಟ್ ಈಕ್ವಿಟಿ ಷೇರುಗಳನ್ನು ನೀಡಿರುವುದಿಲ್ಲ.

**29 ಇಎಸ್‌ಓಪಿ ಯೋಜನೆಯ ವಿವರಗಳು**

ನಿಮ್ಮ ನಿರ್ದೇಶಕರ ಮಂಡಳಿಯು ತಿಳಿಸುವುದೇನೆಂದರೆ, ವರದಿಯ ಈ ವರ್ಷದಲ್ಲಿ ಕಂಪನಿಗಳ (ಷೇರು ಬಂಡವಾಳ ಮತ್ತು ಡಿಬೆಂಚರುಗಳು) ನಿಯಮಗಳು, 2014ರ ನಿಯಮ 12ರ ಉಪನಿಯಮ (9) ಓದಿಕೊಂಡಂತೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 62(1)(ಬಿ)ಯ ಉಪಬಂಧಗಳ ಅನುಸಾರ ಕಂಪನಿಯು ತನ್ನ ನೌಕರರಿಗೆ ಇಎಸ್‌ಓಪಿ ಯೋಜನೆ ಅನ್ವಯ ಈಕ್ವಿಟಿ ಷೇರುಗಳನ್ನು ನೀಡಿರುವುದಿಲ್ಲ.

**30 ಕಂಪನಿಗಳ (ಆಡಳಿತ ವರ್ಗದ ಸಿಬ್ಬಂದಿಯ ನೇಮಕ ಮತ್ತು ಸಂಭಾವನೆ) ತಿದ್ದುಪಡಿ ನಿಯಮಗಳು, 2016 ಓದಿಕೊಂಡಂತೆ ಕಂಪನಿಗಳ ಆಡಳಿತ ವರ್ಗದ ಸಿಬ್ಬಂದಿ ನೇಮಕ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ 5(2)ರ ಅನ್ವಯ ಅಗತ್ಯವಾದ ನೌಕರರ ವಿವರಗಳು**

ಕಂಪನಿಗಳ (ಆಡಳಿತ ವರ್ಗದ ಸಿಬ್ಬಂದಿ ನೇಮಕಾತಿ ಮತ್ತು ಸಂಭಾವನೆ) ತಿದ್ದುಪಡಿ ನಿಯಮಗಳು, 2016 ಓದಿಕೊಂಡಂತೆ ಕಂಪನಿಗಳ (ಆಡಳಿತ ವರ್ಗದ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ 5(2)ರ ಅನ್ವಯ ವರದಿಯ ವರ್ಷದಲ್ಲಿ ವಿವರಗಳನ್ನು ಒದಗಿಸಬೇಕಾಗಿರುವ ಯಾವುದೇ ನೌಕರರು ಇರುವುದಿಲ್ಲ.

**31 ಸಿಬ್ಬಂದಿ–ಆಡಳಿತ ವರ್ಗದ ಬಾಂಧವ್ಯ**

ಸಿಬ್ಬಂದಿ–ಆಡಳಿತ ವರ್ಗದ ಬಾಂಧವ್ಯವು ಪರಾಮರ್ಶೆಯ ವರ್ಷದ ಅವಧಿಯಲ್ಲಿ ಸೌಹಾರ್ದಯುತವಾಗಿ ಮತ್ತು ಮಧುರವಾಗಿತ್ತು. ದಿನಾಂಕ 31.03.2017ರಂದು ಇದ್ದಂತೆ ಕಂಪನಿಯು 117 ನೌಕರರನ್ನು ಹೊಂದಿರುವುದು. ಎಕ್ಸಿಕ್ಯೂಟಿವ್‌ಗಳು ಮತ್ತು ಎಕ್ಸಿಕ್ಯೂಟಿವ್‌ಗಳಿಲ್ಲದವರ ವಿಭಜನೆಯು ಈ ಕೆಳಕಂಡಂತಿರುವುದು :

| ಕ್ರ.ಸಂ. | ವಿವರ | ಚಾಲ್ತಿ ವರ್ಷದಲ್ಲಿ | ಹಿಂದಿನ ವರ್ಷದಲ್ಲಿ |
|---|---|---|---|
| 1. | ಎಕ್ಸಿಕ್ಯುಟಿವ್‌ಗಳು | 36 | 45 |
| 2. | ಎಕ್ಸಿಕ್ಯುಟಿವ್‌ಗಳಲ್ಲದವರು | 81 | 87 |

**32 ಶಾಸನಬದ್ಧ ಲೆಕ್ಕಪರಿಶೋಧಕರು**

ಮೆ॥ ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್, ಲೆಕ್ಕಪರಿಶೋಧಕರು, ಬೆಂಗಳೂರು ಇವರನ್ನು ಆರ್ಥಿಕ ವರ್ಷ 2016–17ರ ಅವಧಿಗೆ ಕಂಪನಿಯ ಹಣಕಾಸಿನ ವಿವರಗಳ ಪರಿಶೋಧನೆಗಾಗಿ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 139ರ ಉಪ ಪ್ರಕರಣ (5)ರ ಉಪಬಂಧಗಳ ಅನುಸಾರ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರು ನೇಮಕ ಮಾಡಿದ್ದಾರೆ. ಸದಸ್ಯರುಗಳ ಗಮನಕ್ಕೆ ಮತ್ತೆ ಈ ಮೂಲಕ ತರುವುದೇನೆಂದರೆ, ದಿನಾಂಕ 17.08.2017 ರ ಪತ್ರದ ಅನ್ವಯ, ಕಂಪನಿಗಳ ಅಧಿನಿಯಮ, 2013ರ ಪ್ರಕರಣ 139ರ ಉಪ ಪ್ರಕರಣ (5)ರ ಉಪಬಂಧಗಳ ಅನುಸಾರ ಮೆ॥ ದಾಗ್ಲಿಯ ಅಂಡ್ ಕಂ; ಲೆಕ್ಕಪರಿಶೋಧಕರು, ಬೆಂಗಳೂರು ಇವರನ್ನು ಆರ್ಥಿಕ ವರ್ಷ 2017–18ಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ.

**33 ಆಂತರಿಕ ಲೆಕ್ಕಪರಿಶೋಧಕರು**

ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 13 ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ 138 ರ ಉಪಬಂಧಗಳ ಅನುಸಾರ ಕಂಪನಿಯು ಹಣಕಾಸಿನ ವರ್ಷ 2017–18ರ ಅವಧಿಗೆ ನಿಮ್ಮ ಕಂಪನಿಯ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಮೆ/. ಸೊಂದೆ, ಶ್ರೀನಿವಾಸ್ ಅಂಡ್ ಕಂ; ಇವರನ್ನು ನೇಮಕ ಮಾಡಿದೆ.

**34 ಕೃತಜ್ಞತೆ**

ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರವು ಕಂಪನಿಗೆ ನೀಡಿದ ಅಮೂಲ್ಯ ಸಲಹೆ ಮತ್ತು ಬೆಂಬಲವನ್ನು ಸ್ಮರಿಸುತ್ತಾ ಮಂಡಳಿಯು ಅವರಿಗೆ ಕೃತಜ್ಞತೆ ಸಲ್ಲಿಸುತ್ತದೆ. ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಮಂಡಳಿ ಮತ್ತು ಕಂಪನಿಯ ವ್ಯವಹಾರಗಳನ್ನು ಸಮರ್ಥವಾಗಿ ನಡೆಸುತ್ತಿರುವುದಕ್ಕೆ ಹಾಗೂ ಪರಾಮರ್ಶೆಯಲ್ಲಿರುವ ವರ್ಷದಲ್ಲಿ ಕಂಪನಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸಲ್ಲಿಸಿರುವ ಅಮೂಲ್ಯ ಹಾಗೂ ಪ್ರಾಮಾಣಿಕ ಸೇವೆಯ ಬಗ್ಗೆ ಮಂಡಳಿಯು ಮೆಚ್ಚುಗೆ ವ್ಯಕ್ತಪಡಿಸುತ್ತದೆ.

**ನಿರ್ದೇಶಕರ ಮಂಡಳಿಯ ಪರವಾಗಿ**

**ಸಹಿ/ –**
**(ಡಿ.ಸುಧಾಕರ್)**
**ಅಧ್ಯಕ್ಷರು**
**ಡಿನ್: 01536333**

**ಸ್ಥಳ : ಬೆಂಗಳೂರು**
**ದಿನಾಂಕ : 15ನೇ ಸೆಪ್ಟೆಂಬರ್, 2017**

# ಅನುಬಂಧ–1

## ಫಾರಂ ನಂ. ಎಓಸಿ–2

(ಕಂಪನಿಗಳ (ಲೆಕ್ಕ ಪತ್ರಗಳು) ನಿಯಮಗಳು, 2014ರ ನಿಯಮ 8(2) ಮತ್ತು ಅಧಿನಿಯಮದ ಪ್ರಕರಣ 134ರ ಉಪ ಪ್ರಕರಣ (3)ರ ಕಲಂ (ಎಚ್)ರ ಅನ್ವಯ)

**ಕಂಪನಿಗಳ ಅಧಿನಿಯಮ, 2013ರ ಪ್ರಕರಣ 188ರ ಉಪ ಪ್ರಕರಣ (1)ರಲ್ಲಿ ತಿಳಿಸಿರುವ ಸಂಬಂಧಪಟ್ಟ ವ್ಯಕ್ತಿಗಳೊಡನೆ ಕಂಪನಿ ಮಾಡಿಕೊಂಡಿರುವ ಗುತ್ತಿಗೆ ಒಪ್ಪಂದಗಳು / ವ್ಯವಸ್ಥೆಗಳು ಜೊತೆಗೆ ಸಂಬಂಧಿತ ಮೂರನೆ ಉಪಬಂಧಗಳ ಅನ್ವಯ ಹಲವು ಪ್ರಮಾಣದ ವ್ಯವಹಾರಗಳ ವಿವರಗಳನ್ನು ತಿಳಿಸುವ ನಮೂನೆ**

**1. ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ಅಥವಾ ಕೈಗೆಟುಕುವ ಅಂತರದ ಆಧಾರದ ಮೇಲಿರದ ವ್ಯವಹಾರಗಳ ವಿವರಗಳು**

| ಸಂಬಂಧಪಟ್ಟ ವ್ಯಕ್ತಿಯ ಹೆಸರು ಮತ್ತು ಸಂಬಂಧದ ಸ್ವರೂಪ | ಗುತ್ತಿಗೆ / ವ್ಯವಸ್ಥೆಗಳು / ವ್ಯವಹಾರಗಳ ಸ್ವರೂಪ | ಗುತ್ತಿಗೆ / ವ್ಯವಸ್ಥೆಗಳು / ವ್ಯವಹಾರಗಳ ಅವಧಿ | ಇದ್ದಲ್ಲಿ ಮೌಲ್ಯವೂ ಸೇರಿದಂತೆ ಗುತ್ತಿಗೆ / ವ್ಯವಸ್ಥೆಗಳು / ವ್ಯವಹಾರಗಳ ವಿಶಿಷ್ಟವಾದ ನಿಯಮಗಳು | ಗುತ್ತಿಗೆ / ವ್ಯವಸ್ಥೆಗಳು / ವ್ಯವಹಾರಗಳನ್ನು ಮಾಡಿಕೊಳ್ಳುತ್ತಿರುವ ಬಗ್ಗೆ ಸಮರ್ಥನೆ | ಮಂಡಳಿಯಿಂದ ಅನುಮೋದನೆಯ ದಿನಾಂಕ | ಯಾವುದೇ ಮುಂಗಡ ಪಾವತಿ ಮಾಡಿರುವ ಮೊತ್ತ | ಸಾಮಾನ್ಯ ಮಹಾಸಭೆಯಲ್ಲಿ ಹೊರಡಿಸಿದ ವಿಶೇಷ ನಿರ್ಣಯಗಳ ದಿನಾಂಕ |
|---|---|---|---|---|---|---|---|
| ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

**2. ಕೈಗೆಟುಕುವ ಅಂತರದ ಆಧಾರದಲ್ಲಿನ ಸಾಮಗ್ರಿಗಳ ಗುತ್ತಿಗೆಗಳು ಅಥವಾ ವ್ಯವಸ್ಥೆಗಳು ಅಥವಾ ವ್ಯವಹಾರಗಳ ವಿವರಗಳು**

| ಸಂಬಂಧಪಟ್ಟ ಪಕ್ಷದ ಹೆಸರು | ಸಂಬಂಧದ ಸ್ವರೂಪ | ಗುತ್ತಿಗೆ / ವ್ಯವಸ್ಥೆಗಳು / ವ್ಯವಹಾರಗಳ ಸ್ವರೂಪ | ಗುತ್ತಿಗೆ / ವ್ಯವಸ್ಥೆಗಳು / ವ್ಯವಹಾರಗಳ ಅವಧಿ | ಇದ್ದಲ್ಲಿ ಮೌಲ್ಯವು ಸೇರಿದಂತೆ ಗುತ್ತಿಗೆ / ವ್ಯವಸ್ಥೆಗಳು / ವ್ಯವಹಾರಗಳ ವಿಶಿಷ್ಟ ನಿಯಮಗಳು | ಮಂಡಳಿಯಿಂದ ಅನುಮೋದನೆಯ ದಿನಾಂಕ | ಮುಂಗಡವಾಗಿ ಪಾವತಿ ಮಾಡಿರುವ ಮೊತ್ತ |
|---|---|---|---|---|---|---|
| ಮೆ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ.2,33,88,304/– | – | – |
| ಮೆ॥ ಚಾಮುಂಡೇಶ್ವರಿ ಎಲೆಕ್ಟ್ರಿಸಿಟಿ ಸರಬರಾಜು ಕಂಪನಿ ಲಿಮಿಟೆಡ್ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ.5,39,51,467/– | – | – |

| | | | | | | |
|---|---|---|---|---|---|---|
| ಮೆ॥ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ.34,01,301/– | – | – |
| ಮೆ॥ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ.2,89,03,233/– | – | |
| ಮೆ॥ ಮೈಸೂರ್ ಮಿನರಲ್ಸ್ ಲಿಮಿಟೆಡ್ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ.66,59,534/– | – | ರೂ. 17,379/– |
| ಮೆ॥ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ33,49,247/– | – | – |
| ಮೆ॥ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ25,30,29,190/– | – | – |
| ಮೆ॥ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | ಕರ್ನಾಟಕ ಸರ್ಕಾರದ ಒಂದು ಉದ್ಯಮ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ5,82,23,469/– | – | – |
| ಸರ್ಕಾರಿ ಇಲಾಖೆಗಳು / ಏಜೆನ್ಸಿಗಳು | ಕರ್ನಾಟಕ ಸರ್ಕಾರದ ಇಲಾಖೆಗಳಿಗೆ ಮತ್ತು ಏಜೆನ್ಸಿಗಳಿಗೆ | ವ್ಯವಹಾರದ ಸಾಮಾನ್ಯ ಅವಧಿಯಲ್ಲಿ ಮತ್ತು ಮುನ್ನಡೆಯುತ್ತಿರುವ ವ್ಯವಹಾರಗಳಲ್ಲಿ ವ್ಯವಹಾರ ನಡೆಯುತ್ತಿರುವುದು | ಸರಕುಗಳ ಸರಬರಾಜು ಮಾಡುವವರೆಗೆ/ಸೇವೆಯು ಪೂರ್ಣಗೊಳ್ಳುವವರೆಗೆ | ಸರಕುಗಳ ಮಾರಾಟ ಮತ್ತು ಸೇವೆಗಳು ರೂ1,80,48,85,380/– | – | ರೂ. 8,84,29,181/– |

**ನಿರ್ದೇಶಕರ ಮಂಡಳಿಯ ಪರವಾಗಿ**

**ಸಹಿ/ –**
**(ಡಿ.ಸುಧಾಕರ್)**
**ಅಧ್ಯಕ್ಷರು**
**ಡಿನ್: 01536333**

**ಸ್ಥಳ : ಬೆಂಗಳೂರು**
**ದಿನಾಂಕ : 15ನೇ ಸೆಪ್ಟೆಂಬರ್, 2017**

**ಅನುಬಂಧ–II**

# ಫಾರಂ ನಂ. ಎಂಜಿಟಿ–9

## ವಾರ್ಷಿಕ ರಿಟರ್ನ್‌ನ ಉದ್ಧೃತ

**31.03.2017ರಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿದ್ದಂತೆ**

**[ಕಂಪನಿಗಳ ಅಧಿನಿಯಮ, 2013ರ ಪ್ರಕರಣ 92(3) ಮತ್ತು ಕಂಪನಿಗಳ (ಆಡಳಿತ ವರ್ಗ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನ್ವಯ]**

**I. ನೋಂದಣಿ ಮತ್ತು ಇತರೆ ವಿವರಗಳು :**

| | | |
|---|---|---|
| 01 | ಸಿಐಎನ್ | **U75112KA1976SGC003055** |
| 02 | ನೋಂದಣಿ ದಿನಾಂಕ | **22.09.1976** |
| 03 | ಕಂಪನಿ ಹೆಸರು | **ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ** |
| 04 | ಕಂಪನಿಯ ಪ್ರವರ್ಗ/ಉಪ ಪ್ರವರ್ಗ | **ನಿಯಮಿತ ಕಂಪನಿ ಷೇರುಗಳ ಮೂಲಕ ಸೀಮಿತ** |
| 05 | ನೋಂದಾಯಿತ ಕಚೇರಿ ವಿಳಾಸ ಮತ್ತು ಸಂಪರ್ಕ ವಿವರಗಳು | **2ನೇ ಮಹಡಿ, ಟಿಟಿಎಂಸಿ 'ಎ' ಬ್ಲಾಕ್, ಬಿಎಂಟಿಸಿ, ಶಾಂತಿನಗರ, ಕೆ.ಎಚ್. ರಸ್ತೆ, ಬೆಂಗಳೂರು – 560 027<br>ಇ–ಮೇಲ್ ಐಡಿ : keonicsaccounts@gmail.com<br>ದೂರವಾಣಿ ಸಂಖ್ಯೆ : 080–22272203** |
| 06 | ಹೆಸರು ಸೇರ್ಪಡೆಯಾಗಿರುವ ಕಂಪನಿಯೇ? | **ಇಲ್ಲ** |
| 07 | ಯಾವುದೇ ಇದ್ದ ಪಕ್ಷದಲ್ಲಿ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು | **ಅನ್ವಯವಾಗುವುದಿಲ್ಲ** |

**II. ಕಂಪನಿಯ ಪ್ರಮುಖ ವ್ಯಾಪಾರ ವ್ಯವಹಾರ ಚಟುವಟಿಕೆಗಳು :**

(ಕಂಪನಿಯ ಒಟ್ಟು ವಹಿವಾಟಿನ 10% ಅಥವಾ ಇದಕ್ಕೂ ಹೆಚ್ಚಿನ ಕೊಡುಗೆ ನೀಡುತ್ತಿರುವ ಎಲ್ಲಾ ವ್ಯವಹಾರ ಚಟುವಟಿಕೆಗಳನ್ನು ತಿಳಿಸುವುದು)

| ಕ್ರ. ಸಂ. | ಮುಖ್ಯ ಉತ್ಪನ್ನಗಳು / ಸೇವೆಗಳ ಹೆಸರು | ಉತ್ಪನ್ನ / ಸೇವೆಯ ಎನ್ಐಸಿ ಕೋಡ್ | ಕಂಪನಿಯ ಒಟ್ಟು ವಹಿವಾಟಿನ ಶೇಕಡವಾರು ಪ್ರಮಾಣ |
|---|---|---|---|
| 1 | ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಉತ್ಪನ್ನಗಳು ಮತ್ತು ಸೇವೆಗಳ ಮಾರಾಟ | | 15.46% |
| 2 | ಮಾನವ ಶಕ್ತಿ ಪೂರೈಕೆ ಸೇವೆಗಳು | | 74.23% |

**III. ಧಾರಕ, ಸಹಾಯಕ ಮತ್ತು ಸಹವರ್ತಿ ಕಂಪನಿಗಳ ವಿವರಗಳು :**

| ಕ್ರ. ಸಂ. | ಕಂಪನಿಯ ಹೆಸರು ಮತ್ತು ವಿಳಾಸ | ಸಿಐಎನ್ / ಜಿಎಲ್ಎನ್ | ಧಾರಕ / ಸಹಾಯಕ ಸಹವರ್ತಿ | ಹೊಂದಿರುವ ಷೇರಿನ ಶೇಕಡವಾರು | ಅನ್ವಯವಾಗುವ ಪರಿಚ್ಛೇದ |
|---|---|---|---|---|---|
| – | – | – | – | – | – |

KEONICS
ISO 9001:2015

## IV. ಷೇರು ಹೊಂದಿರುವ ಸ್ವರೂಪ (ಒಟ್ಟು ಈಕ್ವಿಟಿಯ ಶೇಕಡವಾರಾಗಿ ಈಕ್ವಿಟಿ ಷೇರು ಬಂಡವಾಳದ ವಿಭಜನೆ)

### i) <u>ಪ್ರವರ್ಗವಾರು ಷೇರುಗಳನ್ನು ಹೊಂದಿರುವಿಕೆ</u>

| ಷೇರುದಾರರ ಪ್ರವರ್ಗ | ವರ್ಷದ ಆರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷದ ಕೊನೆಯಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷದ ಹೊಂದಿದ್ದ ಷೇರಿನಲ್ಲಿನ ಬದಲಾ-ವಣೆಯ % |
|---|---|---|---|---|---|---|---|---|---|
| | ಡಿವ್ಯಾಟ್ | ಭೌತಿಕ | ಒಟ್ಟು | ಷೇರುಗಳ ಒಟ್ಟು % | ಡಿವ್ಯಾಟ್ | ಭೌತಿಕ | ಒಟ್ಟು | ಷೇರುಗಳ ಒಟ್ಟು % | |
| **ಎ. ಪ್ರವರ್ತಕರು** | | | | | | | | | |
| **(1) ಭಾರತೀಯರು** | | | | | | | | | |
| ಎ) ವ್ಯಕ್ತಿ / ಎಚ್‌ಯುಎಫ್ | – | – | – | – | – | – | – | – | – |
| ಬಿ) ಕೇಂದ್ರ ಸರ್ಕಾರ | – | – | – | – | – | – | – | – | – |
| ಸಿ) ರಾಜ್ಯ ಸರ್ಕಾರ (ಗಳು) | – | **22,37,200** | **22,37,200** | **100%** | – | **24,87,200** | **24,87,200** | **100%** | – |
| ಡಿ) ಕಾರ್ಪೊರೇಟ್ ಸಂಸ್ಥೆಗಳು | – | – | – | – | – | – | – | – | – |
| ಇ) ಬ್ಯಾಂಕ್ / ಹ.ಸಂ. | – | – | – | – | – | – | – | – | – |
| ಎಫ್) ಯಾವುದೇ ಇತರೆ ... | – | – | – | – | – | – | – | – | – |
| **ಉಪ ಮೊತ್ತ : (ಎ) (1)** | – | **22,37,200** | **22,37,200** | **100%** | – | **24,87,200** | **24,87,200** | **100%** | – |
| **(2) ವಿದೇಶಿಯರು** | | | | | | | | | |
| ಎ) ಎನ್‌ಆರ್‌ಐಗಳು–ವ್ಯಕ್ತಿಗಳು | – | – | – | – | – | – | – | – | – |
| ಬಿ) ಇತರೆ ವ್ಯಕ್ತಿಗಳು | – | – | – | – | – | – | – | – | – |
| ಸಿ) ಕಾರ್ಪೊರೇಟ್ ಸಂಸ್ಥೆಗಳು | – | – | – | – | – | – | – | – | – |
| ಡಿ) ಬ್ಯಾಂಕುಗಳು / ಎಫ್‌ಐ | – | – | – | – | – | – | – | – | – |
| ಇ) ಯಾವುದೇ ಇತರೆ ... | – | – | – | – | – | – | – | – | – |
| **ಉಪ ಮೊತ್ತ (ಎ) (2)** | – | – | – | – | – | – | – | – | – |
| **ಪ್ರವರ್ತಕರು ಹೊಂದಿರುವ ಒಟ್ಟು ಷೇರುಗಳು (ಎ)=(ಎ)(1)+(ಎ)(2)** | – | **22,37,200** | **22,37,200** | **100%** | – | **24,87,200** | **24,87,200** | **100%** | |
| **ಬಿ. ಸಾರ್ವಜನಿಕರು ಹೊಂದಿರುವ ಷೇರುಗಳು** | | | | | | | | | |
| **(1) ಸಂಸ್ಥೆಗಳು** | | | | | | | | | |
| ಎ) ಮ್ಯೂಚುವಲ್ ಫಂಡ್‌ಗಳು | – | – | – | – | – | – | – | – | – |
| ಬಿ) ಬ್ಯಾಂಕುಗಳು / ಹ.ಸಂ. | – | – | – | – | – | – | – | – | – |
| ಸಿ) ಕೇಂದ್ರ ಸರ್ಕಾರ | – | – | – | – | – | – | – | – | – |
| ಡಿ) ರಾಜ್ಯ ಸರ್ಕಾರ (ಗಳು) | – | – | – | – | – | – | – | – | – |
| ಇ) ವೆಂಚರ್ ಕ್ಯಾಪಿಟಲ್ ಫಂಡ್ | – | – | – | – | – | – | – | – | – |
| ಎಫ್) ವಿಮಾ ಕಂಪನಿಗಳು | – | – | – | – | – | – | – | – | – |
| ಜಿ) ಎಫ್‌ಐಐಎಸ್ | – | – | – | – | – | – | – | – | – |
| ಎಚ್) ವಿದೇಶಿ ವೆಂಚರ್ ಕ್ಯಾಪಿಟಲ್ ಫಂಡ್‌ಗಳು | – | – | – | – | – | – | – | – | – |
| ಐ) ಇತರೆಯವರು (ನಿರ್ದಿಷ್ಟಪಡಿಸಿ) | – | – | – | – | – | – | – | – | – |
| **ಉಪ ಮೊತ್ತ (ಬಿ) (1) :–** | – | **22,37,200** | **22,37,200** | **100%** | – | **24,87,200** | **24,87,200** | **100%** | – |

| | | | | | | | | | |
|---|---|---|---|---|---|---|---|---|---|
| **(2) ಸಂಸ್ಥೆಗಳಲ್ಲದವು** | | | | | | | | | |
| ಎ) ಕಾರ್ಪೊರೇಟ್ ಸಂಸ್ಥೆಗಳು | – | – | – | – | – | – | – | – | – |
| i) ಭಾರತೀಯ | – | – | – | – | – | – | – | – | – |
| ii) ಸಾಗರೋತ್ತರ | – | – | – | – | – | – | – | – | – |
| ಬಿ) ವ್ಯಕ್ತಿಗಳು | – | – | – | – | – | – | – | – | – |
| i) ರೂ. 1 ಲಕ್ಷದವರೆಗೆ ಸಾಧಾರಣ ಷೇರು ಬಂಡವಾಳ ಹೊಂದಿರುವ ಷೇರುದಾರ ವ್ಯಕ್ತಿಗಳು | – | – | – | – | – | – | – | – | – |
| ii) ರೂ.1 ಲಕ್ಷಕ್ಕೂ ಹೆಚ್ಚು ಸಾಧಾರಣ ಷೇರು ಬಂಡವಾಳ ಹೊಂದಿರುವ ಷೇರುದಾರ ವ್ಯಕ್ತಿಗಳು | – | – | – | – | – | – | – | – | – |
| ಸಿ) ಇತರೆ (ನಿರ್ದಿಷ್ಟ ಪಡಿಸಿ) | – | – | – | – | – | – | – | – | – |
| **ಉಪ ಒಟ್ಟು ಮೊತ್ತ (ಬಿ)(2):** | – | **22,37,200** | **22,37,200** | **100%** | – | **24,87,200** | **24,87,200** | **100%** | – |
| **ಸಾರ್ವಜನಿಕರು ಹೊಂದಿರುವ ಒಟ್ಟು ಷೇರುದಾರಿಕೆ (ಬಿ)= (ಬಿ)(1)+(ಬಿ)(2)** | – | – | – | – | – | – | – | – | – |
| **ಸಿ. ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಕಸ್ಟೋಡಿಯನ್‌ರಿಂದ ಹೊಂದಿರುವ ಷೇರುಗಳು** | – | – | – | – | – | – | – | – | – |
| **ಒಟ್ಟು ಮೊತ್ತ (ಎ+ಬಿ+ಸಿ)** | – | **22,37,200** | **22,37,200** | **100%** | – | **24,87,200** | **24,87,200** | **100%** | – |

**ii) ಪ್ರವರ್ತಕರು ಹೊಂದಿರುವ ಷೇರುಗಳು :**

| ಕ್ರ. ಸಂ. | ಷೇರುದಾರರ ಹೆಸರು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | | ವರ್ಷಾಂತ್ಯದಲ್ಲಿ ಹೊಂದಿದ್ದ ಷೇರುಗಳು | | | ವರ್ಷದ ಅವಧಿಯಲ್ಲಿ ಹೊಂದಿದ್ದ ಷೇರುಗಳಲ್ಲಿನ ಬದಲಾವಣೆ% |
|---|---|---|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ % | ಒಟ್ಟು ಷೇರಿಗೆ ಈಡು ಮಾಡಿರುವ/ ಋಣಭಾರವಿರುವ ಷೇರುಗಳ % | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರಿನ % | ಒಟ್ಟು ಷೇರಿಗೆ ಈಡು ಮಾಡಿರುವ/ ಋಣಭಾರವಿರುವ ಷೇರುಗಳ % | |
| **01.** | ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ | **22,37,189** | **99.99%** | – | **24,87,189** | **99.99%** | – | – |
| **02.** | ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್ | **4** | **0.01%** | – | **4** | **0.01%** | – | – |
| **03.** | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಐಟಿ, ಬಿಟಿ ಮತ್ತು ಎಸ್ ಮತ್ತು ಟಿ ಇಲಾಖೆ | **1** | **0.00%** | – | **1** | **0.00%** | – | – |
| **04.** | ನಿರ್ದೇಶಕರು, ಐಟಿ ಮತ್ತು ಬಿಟಿ | **1** | **0.00%** | – | **1** | **0.00%** | – | – |
| **05.** | ಸರ್ಕಾರದ ಉಪಕಾರ್ಯದರ್ಶಿ (ಬಜೆಟ್ ಮತ್ತು ಸಂಪನ್ಮೂಲಗಳು) ಹಣಕಾಸು ಇಲಾಖೆ | **1** | **0.00%** | – | **1** | **0.00%** | – | – |
| **06.** | ಸರ್ಕಾರದ ಉಪಕಾರ್ಯದರ್ಶಿ ಐಟಿ, ಬಿಟಿ, ಎಸ್ ಮತ್ತು ಟಿ ಇಲಾಖೆ | **1** | **0.00%** | – | **1** | **0.00%** | – | – |

| | | | | | | | | |
|---|---|---|---|---|---|---|---|---|
| 07. | ಸರ್ಕಾರದ ಉಪಕಾರ್ಯದರ್ಶಿ (ಕಲ್ಯಾಣ), ಹಣಕಾಸು ಇಲಾಖೆ | 1 | 0.00% | – | 1 | 0.00% | – | – |
| 08. | ಸರ್ಕಾರದ ಅಧೀನ ಕಾರ್ಯದರ್ಶಿ ಐಟಿ, ಬಿಟಿ ಹಾಗೂ ಎಸ್ ಮತ್ತು ಟಿ ಇಲಾಖೆ | 1 | 0.00% | – | 1 | 0.00% | – | – |
| 09. | ಸರ್ಕಾರದ ಅಧೀನ ಕಾರ್ಯದರ್ಶಿ ಹಣಕಾಸು ಇಲಾಖೆ, ಪಿಡಬ್ಲ್ಯೂಡಿ, ಹಣಕಾಸು ಕೋಶ | 1 | 0.00% | – | 1 | 0.00% | – | – |

**iii)** ಪ್ರವರ್ತಕರು ಹೊಂದಿರುವ ಷೇರುಗಳಲ್ಲಿನ ಬದಲಾವಣೆ :

| ಕ್ರ ಸಂ. | ವಿವರಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | ವರ್ಷದಲ್ಲಿ ಹೊಂದಿದ್ದ ಸಂಚಿತ ಷೇರುಗಳು | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ % | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ % |
| 01 | ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ | | | | |
| | ವರ್ಷದ ಆರಂಭದಲ್ಲಿ | **22,37,189** | **99.99%** | **22,37,189** | **99.99%** |
| | 25.04.2016ರಂದು ಷೇರುಗಳ ಹಂಚಿಕೆ | **1,00,000** | – | **23,37,189** | **99.99%** |
| | 18.08.2016ರಂದು ಷೇರುಗಳ ಹಂಚಿಕೆ | **50,000** | – | **23,87,189** | **99.99%** |
| | 14.12.2016ರಂದು ಷೇರುಗಳ ಹಂಚಿಕೆ | **50,000** | – | **24,37,200** | **99.99%** |
| | 19.01.2017ರಂದು ಷೇರುಗಳ ಹಂಚಿಕೆ | **50,000** | – | **24,87,189** | **99.99%** |
| | ವರ್ಷಾಂತ್ಯದಲ್ಲಿ | **24,87,189** | **99.99%** | **24,87,189** | **99.99%** |

ಎ) ಮೊದಲ ಶ್ರೇಣಿಯಲ್ಲಿನ ಹತ್ತು ಷೇರುದಾರರು ಹೊಂದಿರುವ ಷೇರುಗಳ ಸ್ವರೂಪ (ನಿರ್ದೇಶಕರು, ಪ್ರವರ್ತಕರು ಮತ್ತು ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಧಾರಕರುಗಳು ಹೊರತಾಗಿ) : ಇಲ್ಲ.

| ಕ್ರ ಸಂ. | ಮೊದಲ 10 ಸ್ಥಾನದಲ್ಲಿರುವ ಪ್ರತಿಯೊಬ್ಬರು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | ವರ್ಷದಲ್ಲಿ ಹೊಂದಿದ್ದ ಸಂಚಿತ ಷೇರುಗಳು | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ % | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ % |
| 01 | ವರ್ಷದ ಆರಂಭದಲ್ಲಿ | ಅನ್ವಯವಾಗುವುದಿಲ್ಲ | | | |
| | ವರ್ಷದ ಅವಧಿಯಲ್ಲಿ ಪ್ರವರ್ಧಕರ ಷೇರುದಾರಿಕೆಯಲ್ಲಿ ದಿನಾಂಕವಾರು ಹೆಚ್ಚಳ/ಇಳಿಕೆ/ಹೆಚ್ಚಳ/ಇಳಿಕೆಗೆ ಕಾರಣ ತಿಳಿಸಿ (ಉದಾ: ಹಂಚಿಕೆ / ವರ್ಗಾವಣೆ / ಬೋನಸ್ / ಸ್ವೆಟ್ ಈಕ್ವಿಟಿ ಇತ್ಯಾದಿ) | | | | |
| | ವರ್ಷದ ಅಂತ್ಯದಲ್ಲಿ (ಅಥವಾ ಪ್ರತ್ಯೇಕವಾಗಿದ್ದೇ ಆದರೆ, ಆ ಪ್ರತ್ಯೇಕಗೊಂಡ ದಿನಾಂಕದಂದು) | | | | |

**i) <u>ನಿರ್ದೇಶಕರು ಮತ್ತು ಪ್ರಮುಖ ಆಡಳಿತ ವರ್ಗದ ಸಿಬ್ಬಂದಿ ಹೊಂದಿರುವ ಷೇರುಗಳು</u>**

| ಕ್ರ ಸಂ. | ವಿವರಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | ವರ್ಷದಲ್ಲಿ ಹೊಂದಿದ್ದ ಸಂಚಿತ ಷೇರುಗಳು | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ % | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ % |
| **01** | **ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್** | | | | |
| | ವರ್ಷದ ಆರಂಭದಲ್ಲಿ | **04** | **0.01%** | **04** | **0.01%** |
| | ವರ್ಷದ ಅವಧಿಯಲ್ಲಿ ಪ್ರವರ್ಧಕರು ಹೊಂದಿರುವ ಷೇರಿನಲ್ಲಿ ಹೆಚ್ಚಳ/ಇಳಿಕೆ, ಹೆಚ್ಚಳ/ಇಳಿಕೆಗೆ ಕಾರಣಗಳನ್ನು ತಿಳಿಸಿ (ಉದಾ: ಹಂಚಿಕೆ/ವರ್ಗಾವಣೆ/ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ) : | – | – | – | – |
| | ವರ್ಷಾಂತ್ಯದಲ್ಲಿ | **04** | **0.01%** | **04** | **0.01%** |

**V. ಋಣಭಾರ :**

(ಬಾಕಿಯಿರುವ/ಸಂಚಯವಾಗಿರುವ ಆದರೆ ಪಾವತಿಗೆ ಸಮಯ ಬಂದಿಲ್ಲದ ಕಂಪನಿಯ ಋಣಭಾರ)

| | ಭದ್ರತೆಯುಳ್ಳ ಸಾಲಗಳು ಠೇವಣಿಗಳು ಹೊರತಾಗಿ | ಭದ್ರತೆಯಿಲ್ಲದ ಸಾಲಗಳು | ಠೇವಣಿಗಳು | ಒಟ್ಟು ಋಣಭಾರ |
|---|---|---|---|---|
| **ಹಣಕಾಸಿನ ವರ್ಷದ ಆರಂಭದಲ್ಲಿ ಋಣಭಾರ** | – | – | – | – |
| i) ಅಸಲು ಮೊತ್ತ | – | – | – | – |
| ii) ಪಾವತಿ ಮಾಡಬೇಕಾಗಿರುವ ಬಡ್ಡಿ ಆದರೆ ಪಾವತಿ ಮಾಡಿಲ್ಲದ್ದು | – | – | – | – |
| iii) ಸಂಚಯನವಾಗಿರುವ ಆದರೆ ಪಾವತಿಗೆ ಸಮಯವಾಗಿಲ್ಲದ ಬಡ್ಡಿ | – | – | – | – |
| **ಒಟ್ಟು (i+ii+iii)** | – | – | – | – |
| **ಹಣಕಾಸಿನ ವರ್ಷದಲ್ಲಿ ಋಣಭಾರದಲ್ಲಿನ ಬದಲಾವಣೆ** | – | – | – | – |
| * ಸೇರ್ಪಡೆ | – | – | – | – |
| * ಇಳಿಕೆ | – | – | – | – |
| **ನಿವ್ವಳ ಬದಲಾವಣೆ** | – | – | – | – |
| **ಹಣಕಾಸಿನ ವರ್ಷದ ಅಂತ್ಯದಲ್ಲಿದ್ದ ಋಣಭಾರ** | – | – | – | – |
| i) ಅಸಲು ಮೊತ್ತ | – | – | – | – |
| ii) ಪಾವತಿ ಮಾಡಬೇಕಿರುವ ಆದರೆ ಪಾವತಿ ಮಾಡಿಲ್ಲದ್ದು | – | – | – | – |
| iii) ಸಂಚಯನವಾಗಿರುವ ಆದರೆ ಪಾವತಿಗೆ ಸಮಯವಾಗಿಲ್ಲದ ಬಡ್ಡಿ | – | – | – | – |
| **ಒಟ್ಟು (i+ii+iii)** | – | – | – | – |

**VI. ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸಂಭಾವನೆ :**

**ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು / ಅಥವಾ ವ್ಯವಸ್ಥಾಪಕರು:**

| ಕ್ರ ಸಂ. | ಸಂಭಾವನೆಯ ವಿವರ | ವ್ಯವಸ್ಥಾಪಕ ನಿರ್ದೇಶಕರು/ಪೂರ್ಣಾವಧಿ ನಿರ್ದೇಶಕರು / ವ್ಯವಸ್ಥಾಪಕರ ಹೆಸರು | ಒಟ್ಟು ಮೊತ್ತ |
|---|---|---|---|
| | | ಎ) ಶ್ರೀ ರಾಜ್ ಕುಮಾರ್ ಶ್ರೀ ವಾಸ್ತವ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು | |
| | | ಬಿ) ಶ್ರೀ ಡಿ.ಸುಧಾಕರ್, ಅಧ್ಯಕ್ಷರು | |
| 01 | ಒಟ್ಟು ಸಂಬಳ | | |
| | (ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇದ 17(1)ರಲ್ಲಿ ಒಳಗೊಂಡಿರುವ ಉಪಬಂಧಗಳ ಅನ್ವಯ ಸಂಬಳ | ಎ) ರೂ.25,76,808/– ಬಿ) ರೂ.6,34,666/– | ರೂ.32,11,471/– |
| | (ಬಿ) ಆದಾಯ–ತೆರಿಗೆ ಕಾಯ್ದೆ, 1961ರ ಪರಿಚ್ಛೇದ 17(2)ರ ಅನ್ವಯದ ಅನುಷಂಗಿಕ ಸೌಲಭ್ಯಗಳ ಮೌಲ್ಯ | – | – |
| | (ಸಿ) ಆದಾಯ–ತೆರಿಗೆ ಕಾಯ್ದೆ, 1961ರ ಪರಿಚ್ಛೇದ 17(3)ರ ಅನ್ವಯ ಸಂಬಳಕ್ಕೆ ಬದಲಾಗಿ ಲಾಭ | – | – |
| 02 | ಸ್ಟಾಕ್‌ಆಪ್ಷನ್ | – | – |
| 03 | ಸ್ವೆಟ್ ಈಕ್ವಿಟಿ | – | – |
| 04 | ಕಮಿಷನ್ – ಲಾಭದ % ಆಗಿ | – | – |
| 05 | ಇತರೆ, ನಿರ್ದಿಷ್ಟಪಡಿಸಿ (ಖರ್ಚುಗಳ ಮರುಪಾವತಿ, ರಜೆ, ಸಂಬಳ ಮತ್ತು ಪಿಂಚಣಿ ಕೊಡುಗೆ) | ಎ) 8,06,132/– ಬಿ) 2,80,991/– | ರೂ.10,87,123/– |
| | ಒಟ್ಟು (ಎ) ಕಾಯ್ದೆಯ ಅನ್ವಯ ಮಿತಿ | ಎ) ರೂ.33,82,937/– ಬಿ) ರೂ.9,15,657/– | ರೂ.42,98,594/– |

ಬಿ. ಇತರೆ ನಿರ್ದೇಶಕರುಗಳಿಗೆ ಸಂಭಾವನೆ

| ಕ್ರ ಸಂ. | ನಿರ್ದೇಶಕರ ಹೆಸರು | ಸಂಭಾವನೆಯ ವಿವರ | | | | ಒಟ್ಟು ಮೊತ್ತ |
|---|---|---|---|---|---|---|
| | | ಸ್ವತಂತ್ರ ನಿರ್ದೇಶಕರು | ಮಂಡಳಿಯ ಸಭೆಗಳಿಗೆ ಹಾಜರಾಗುವುದಕ್ಕೆ ಶುಲ್ಕ | ಕಮಿಷನ್ | ಮಂಡಳಿ ಉಪಸಮಿತಿ ಸಭೆಗಳಿಗೆ ಹಾಜರಾಗುವುದಕ್ಕೆ ಶುಲ್ಕ | |
| 1 | ಶ್ರೀ ಯು.ಬಿ. ವೆಂಕಟೇಶ್,ಅಧ್ಯಕ್ಷರು | – | 3,000 | – | – | 3,000 |
| 2 | ಶ್ರೀ ಡಿ. ಸುಧಾಕರ್, ವಿಧಾನಸಭಾ ಸದಸ್ಯರು ಮತ್ತು ಅಧ್ಯಕ್ಷರು | – | 2,000 | – | – | 2,000 |
| 3 | ಶ್ರೀಮತಿ ವಿ. ಮಂಜುಳ, ಭಾ.ಆ.ಸೇ | – | 1,000 | – | – | 1,000 |
| 4 | ಶ್ರೀಮತಿ. ತನುಶ್ರೀ ದೇಬ್ ಬರ್ಮ, ಭಾ.ಆ.ಸೇ | – | 2,000 | – | – | 2,000 |
| 5 | ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ | – | 2,000 | – | – | 2,000 |

| | | | | | | |
|---|---|---|---|---|---|---|
| 6 | ಪ್ರೊ. ಎಸ್. ಸದಗೋಪನ್ | – | 1,000 | – | – | 1,000 |
| 7 | ಶ್ರೀ ಶೈಲೇಂದರ್ ಕುಮಾರ್ ತ್ಯಾಗಿ | – | 1,000 | – | – | 1,000 |
| 8 | ಶ್ರೀ ಎಸ್.ಸಿ.ಶಶಿಧರ್ | – | 4,000 | | | 4,000 |
| 9 | ಶ್ರೀ ಎ.ಮಂಜುನಾಥ್ | – | 5,000 | – | – | 5,000 |
| 10 | ಶ್ರೀ ಡಿ.ಎಸ್.ರಘು | – | 5,000 | – | – | 5,000 |
| 11 | ಶ್ರೀ ಕೆ. ವೆಂಕಟಸುಬ್ಬರಾಜು | – | 5,000 | – | – | 5,000 |
| 12 | ಶ್ರೀ ಬಸವಣ್ಣ | – | 4,000 | – | – | 4,000 |
| 13 | ಶ್ರೀ ಬಿ.ಆರ್. ಅವಿನಾಶ್ ಬಾಬು | – | 4,000 | – | – | 4,000 |
| 14 | ಶ್ರೀ ಎಂ.ಎ.ಅಕ್ಬರ್ ಪಾಷ | – | 4,000 | – | – | 4,000 |
| 15 | ಶ್ರೀ ಭೀಮರಾಯ | – | 4,000 | – | – | 4,000 |
| 16 | ಶ್ರೀ ರಾಮಣ್ಣ ಕೆ ಕಲ್ಲಣ್ಣವರ್ | – | 3,000 | – | – | 3,000 |
| | ಒಟ್ಟು | | 50,000 | | – | 50,000 |

ಸಿ. ವ್ಯವಸ್ಥಾಪಕ ನಿರ್ದೇಶಕರು/ ವ್ಯವಸ್ಥಾಪಕರು/ಪೂರ್ಣಾವಧಿ ನಿರ್ದೇಶಕರು ಹೊರತಾಗಿ ಇತರೆ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಗೆ ಸಂಭಾವನೆ : ಇಲ್ಲ

| ಕ್ರ. ಸಂ. | ಸಂಭಾವನೆಯ ವಿವರ | ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ | | | |
|---|---|---|---|---|---|
| | | ಸಿಇಓ | ಸಿಎಸ್ | ಸಿಎಫ್ಓ | ಒಟ್ಟು |
| 01 | ಒಟ್ಟು ಸಂಬಳ | – | – | – | – |
| | (ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇದ 17(1)ರ ರಲ್ಲಿ ಒಳಗೊಂಡಿರುವ ಉಪಬಂಧಗಳ ಅನ್ವಯ ಸಂಬಳ | – | – | – | – |
| | (ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇದ 17(2)ರ ಅನ್ವಯ ಅನುಷಂಗಿಕಗಳ ಮೌಲ್ಯ | – | – | – | – |
| | (ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇದ 17(3)ರ ಅನ್ವಯ ಸಂಬಳಕ್ಕೆ ಬದಲಾಗಿ ಲಾಭಗಳು | – | – | – | – |
| 02 | ಸ್ಟಾಕ್ ಆಪ್ಷನ್ | – | – | – | – |
| 03 | ಸ್ವೆಟ್ ಈಕ್ವಿಟಿ | – | – | – | – |
| 04 | ಕಮಿಷನ್ | – | – | – | – |
| | – ಲಾಭದ % ಆಗಿ | – | – | – | – |
| | ಇತರೆ, ನಿರ್ದಿಷ್ಟಪಡಿಸಿ.... | – | – | – | – |
| 05 | ಇತರೆ, ನಿರ್ದಿಷ್ಟಪಡಿಸಿ.... | – | – | – | – |
| | ಒಟ್ಟು | – | – | – | – |

**VII.** ಅಪರಾಧಗಳಿಗೆ ದಂಡಗಳು / ಶಿಕ್ಷೆ / ಇವೆರಡೂ ಸೇರಿ

| ವಿಧ | ಕಂಪನಿಗಳ ಕಾಯ್ದೆಯ ಪರಿಚ್ಛೇದ | ಸಂಕ್ಷಿಪ್ತ ವಿವರ | ವಿಧಿಸಿರುವ ದಂಡ/ ಶಿಕ್ಷೆ /ಇವರೆಡೂ ಸೇರಿದ ಶುಲ್ಕಗಳ ವಿವರಗಳು | ಪ್ರಾಧಿಕಾರ [ಆರ್‌ಡಿ / ಎನ್‌ಸಿಎಲ್‌ಟಿ ನ್ಯಾಯಾಲಯ] | ಯಾವುದೇ ಮೇಲ್ಮನವಿ ಸಲ್ಲಿಸಲಾಗಿದೆಯೇ (ವಿವರ ನೀಡಿ) |
|---|---|---|---|---|---|
| ಎ. ಕಂಪನಿ | | | | | |
| ದಂಡ | – | – | – | – | – |
| ಶಿಕ್ಷೆ | – | – | – | – | – |
| ಇವರೆಡೂ ಸೇರಿ | – | – | – | – | – |
| ಬಿ. ನಿರ್ದೇಶಕರು | | | | | |
| ದಂಡ | – | – | – | – | – |
| ಶಿಕ್ಷೆ | – | – | – | – | – |
| ಇವರೆಡೂ ಸೇರಿ | – | – | – | – | – |
| ಸಿ. ತಪ್ಪಿತಸ್ಥರಾಗಿರುವ ಇತರೆ ಅಧಿಕಾರಿಗಳು | | | | | |
| ದಂಡ | – | – | – | – | – |
| ಶಿಕ್ಷೆ | – | – | – | – | – |
| ಇವೆರಡೂ ಸೇರಿ | – | – | – | – | – |

ನಿರ್ದೇಶಕರ ಮಂಡಳಿಯ ಪರವಾಗಿ

ಸಹಿ/ –
(ಡಿ.ಸುಧಾಕರ್)
ಅಧ್ಯಕ್ಷರು
ಡಿನ್: 01536333

ಸ್ಥಳ : ಬೆಂಗಳೂರು
ದಿನಾಂಕ : 15ನೇ ಸೆಪ್ಟೆಂಬರ್, 2017

## ಅನುಬಂಧ–III

**ಮಂಡಳಿಯ ವರದಿಯಲ್ಲಿ ಸೇರಿಸಬೇಕಾಗಿರುವ ಸಿಎಸ್‌ಆರ್ ಚಟುವಟಿಕೆಗಳ ಮೇಲಿನ ವಾರ್ಷಿಕ ವರದಿಯ ನಮೂನೆ ಕೈಗೊಳ್ಳಲು ಉದ್ದೇಶಿಸಲಾಗಿರುವ ಯೋಜನೆಗಳು ಅಥವಾ ಕಾರ್ಯಕ್ರಮಗಳ ಅವಲೋಕನ ಮತ್ತು ಸಿಎಸ್‌ಆರ್ ನೀತಿ ಮತ್ತು ಯೋಜನೆಗಳು ಅಥವಾ ಕಾರ್ಯಕ್ರಮಗಳ ಉಲ್ಲೇಖನ ಸೇರಿದಂತೆ ಕಂಪನಿಯ ಸಿಎಸ್‌ಆರ್ ನೀತಿಯ ಸಂಕ್ಷಿಪ್ತ ನೋಟಧ್ಯೇಯ**

ಧ್ಯೇಯ

1. **ಈ ಕೆಳಕಂಡವುಗಳ ಪ್ರವರ್ಧನೆಗೆ ಸಿಎಸ್‌ಆರ್ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ನಮ್ಮ ವ್ಯವಹಾರ ಕಾರ್ಯಚರಣೆಯ ಆಸುಪಾಸಿನಲ್ಲಿನ ಸಮುದಾಯದ ಒಳಿತನ್ನು ಕಾಪಾಡುವುದಕ್ಕೆ ಕಿಯೋನಿಕ್ಸ್ ಬದ್ಧವಾಗಿರುವುದು**

   i) ಪ್ರಕಟಣೆ ಮತ್ತು ವರದಿಗಾರಿಕೆ ಕ್ರಮಾವಳಿಗಳಲ್ಲಿ ಪಾರದರ್ಶಕತೆ ಪಾಲನೆ ಮೂಲಕ ಸಾಂಸ್ಥಿಕ ಸಮಗ್ರತೆ ಮತ್ತು ನೈತಿಕ ವ್ಯವಹಾರ ಅಭ್ಯಾಸಗಳನ್ನು ಪ್ರವರ್ಧನೆ ಮಾಡುವುದು.

   ii) ಸಾಮಾಜಿಕ ಮತ್ತು ಪರಿಸರ ರಕ್ಷಣೆಗೆ ಕೊಡುಗೆ ನೀಡುವ ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸಲು ನೆರವಾಗುವ ಹಸಿರು ತಂತ್ರಜ್ಞಾನಗಳು, ಪ್ರಕ್ರಿಯೆಗಳು ಮತ್ತು ಗುಣಮಟ್ಟಗಳನ್ನು ಅಳವಡಿಸಿಕೊಳ್ಳುವುದು.

   iii) ಸಾಮರ್ಥ್ಯ ಬೆಳೆಸುವ ಕ್ರಮಗಳು, ಕಡೆಗಣಿಸಲ್ಪಟ್ಟಿರುವ ಮತ್ತು ಅವಕಾಶ ವಂಚಿತ ವರ್ಗಗಳು/ ಸಮುದಾಯಗಳ ಬಲವರ್ಧನೆ ಮಾಡುವ ಮೂಲಕ ಸಮಾಜದಲ್ಲಿ ಪ್ರಗತಿಗೆ ಪ್ರೇರಣೆ ನೀಡುವುದು ಮತ್ತುಸಮಾನ ಅಭಿವೃದ್ಧಿಗೆ ಶ್ರಮಿಸುವುದು.

   iv) ನೌಕರರು ಮತ್ತು ಕಾರ್ಮಿಕರ (ದಿನಗೂಲಿ ಅಥವಾ ಗುತ್ತಿಗೆ ಮೇಲಿನವರು) ಸುರಕ್ಷತೆ, ಭದ್ರತೆ, ವೃತ್ತಿ ಪ್ರವರ್ಧನೆ ಮತ್ತು ಆರೋಗ್ಯಕರ ಕೆಲಸದ ಪರಿಸ್ಥಿತಿ ಅವುಗಳು ಕಡ್ಡಾಯವಾಗಿರಬಹುದು ಅಥವಾ ಇಲ್ಲದಿರಬಹುದು ಏನೇ ಆದರು ಅವೆಲ್ಲವುಗಳಿಗೆ ಗಮನ ಹರಿಸಿ , ಯಾವುದೇ ತೊಂದರೆಗಳಿದ್ದಲ್ಲಿ ಅವುಗಳನ್ನು ನಿವಾರಿಸಿ ನೌಕರರುಗಳ ಮತ್ತು ಕಾರ್ಮಿಕರ ಕಲ್ಯಾಣವನ್ನು ಪ್ರವರ್ಧನೆ ಮಾಡುವುದು,. ಕಡ್ಡಾಯವಾದ ಚಟುವಟಿಕೆಗಳ ಬಗ್ಗೆ ಖರ್ಚು ಮಾಡಲು ಸಿಎಸ್‌ಆರ್‌ನ ಹಣಕಾಸಿನ ಚೌಕಟ್ಟಿನಲ್ಲಿ ಅರ್ಹತೆ ಪಡೆದಿಲ್ಲದವುಗಳು ಹೊರತಾಗಿ.

**ಗಮನಹರಿಸುವ ವಲಯ**

1. ಸಮಾಜದ ವಿಶೇಷ ಚೇತ**ನರು,** ತೃತೀಯ ಲಿಂಗಿಗಳು ಮತ್ತು ಇತರೆ ದುರ್ಬಲ ವರ್ಗಗಳ ಜೀವನೋಪಾಯಕ್ಕೆ ಮತ್ತು ಉದ್ಯೋಗ ಪಡೆಯುವಿಕೆಗೆ ಅನುವಾಗುವ ಶಿಕ್ಷಣ ಮತ್ತು ಕೌಶಲ್ಯ ಪ್ರವರ್ಧನೆ ಕಾರ್ಯಕ್ರಮಗಳು.
2. ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು ಸೇರಿದಂತೆ ಜನರಿಗೆ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕತೆಯ ಸೌಲಭ್ಯವನ್ನು ಒದಗಿಸುವುದು ಮತ್ತು ಸೌಲಭ್ಯಗಳನ್ನು ಬಲಗೊಳಿಸುವುದು.
3. ಸಾಮಾಜಿಕ ಬಂಡವಾಳ ಮತ್ತು ಮೂಲಸೌಲಭ್ಯಗಳನ್ನು ಹೆಚ್ಚಿಸುವುದು.
4. ಆರೋಗ್ಯಪೂರ್ಣ ಬೆಳವಣಿಗೆಗಾಗಿ ಪೋಷಣೆ ಮತ್ತು ಪಾಲನೆ.
5. ಉನ್ನತ ಸಾಮಾಜಿಕ ಪರಿಣಾಮ ಉಂಟು ಮಾಡುವ ತಂತ್ರಜ್ಞಾನಗಳ ಪ್ರವರ್ಧನೆ ಮಾಡುವುದು.

**ಕಿಯೋನಿಕ್ಸ್** ಕಾರ್ಪೋರೇಟ್ ಸಾಮಾಜಿಕ ಒತ್ತು ನೀಡಿಕೆ ವಲಯ ಮತ್ತು ಕಂಪನಿಗಳ ಕಾಯ್ದೆ, 2013ರ ನಡುವೆ ಇರುವ ಸೇತುಬಂಧ

**ಪ್ರಮುಖ ಚಟುವಟಿಕೆಗಳು**

1. ತೀವ್ರ ತರವಾದ ಹಸಿವು, ಬಡತನ ಮತ್ತು ಅಪೌಷ್ಠಿಕತೆ ನಿರ್ಮೂಲನೆ, ಅನಾರೋಗ್ಯ ತಡೆ ಮತ್ತು ಆರೋಗ್ಯ ಪೋಷಣೆ ಮತ್ತು ನೈರ್ಮಲ್ಯ ಪಾಲನೆಗೆ ಪ್ರೇರಣೆ ನೀಡುವುದು ಮತ್ತು ಸುರಕ್ಷಿತ ಕುಡಿಯುವ ನೀರು ದೊರೆಯುವಂತೆ ಅನುಕೂಲಕಲ್ಪಿಸುವುದು.
2. ಶಿಕ್ಷಣದ ಪ್ರವರ್ಧನೆ: ವಿಶೇಷವಾಗಿ ಮಕ್ಕಳು, ಮಹಿಳೆಯರು ಮತ್ತು ವಿಶೇಷ ಚೇತನರಿಗೆ ವಿಶೇಷ ಶಿಕ್ಷಣ ಸೌಲಭ್ಯ ಒದಗಿಸುವುದು ಮತ್ತು ಉದ್ಯೋಗಾವಕಾಶ ಲಭ್ಯವಾಗುವ ವೃತ್ತಿಪರ ಕೌಶಲ್ಯಬೆಳೆಸುವುದು ಮತ್ತು ಜೀವನ ಮಟ್ಟವನ್ನು ಉತ್ತಮಪಡಿಸುವ ಯೋಜನೆಗಳನ್ನು ರೂಪಿಸುವುದು.

3. ಲಿಂಗ ಸಮಾನತೆ ಉಂಟುಮಾಡುವುದು ಮತ್ತು ಮಹಿಳೆಯರ ಸಬಲೀಕರಣ, ಮಹಿಳೆಯರು ಮತ್ತು ಅನಾಥರಿಗೆ ವಸತಿಗಳು ಮತ್ತು ಅನಾಥಾಲಯಗಳು ಮತ್ತು ಹಾಸ್ಟಲ್‌ಗಳ ಸ್ಥಾಪನೆ, ಹಿರಿಯ ನಾಗರೀಕರಿಗೆ ವೃದ್ಧಾಶ್ರಮಗಳು, ಬೆಳಗಿನ ವೇಳೆ ರಕ್ಷಣಾಲಯಗಳು ಮತ್ತು ಇಂಥ ಇತರೆ ಸೌಲಭ್ಯಗಳನ್ನು ವ್ಯವಸ್ಥೆ ಮಾಡುವುದು ಹಾಗೂ ಹಿಂದುಳಿದ ವರ್ಗಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಎದುರಿಸುತ್ತಿರುವ ಅಸಮಾನತೆಯನ್ನು ಹೋಗಲಾಡಿಸುವುದು.

4. ಪರಿಸರದ ರಕ್ಷಣೆ ಮಾಡುವುದು, ಜೀವಿ ಪರಿಸರ ಸಮತೋಲನೆ ಕಾಪಾಡುವುದು, ಗಿಡ ಮರಗಳ ರಕ್ಷಣೆ ಮಾಡುವುದು, ಪ್ರಾಣಿಗಳ ಕ್ಷೇಮಾಭಿವೃದ್ಧಿ, ಕೃಷಿ ಅರಣ್ಯೀಕರಣ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಗಾಳಿ, ಮಣ್ಣು ಮತ್ತು ನೀರಿನ ಗುಣಮಟ್ಟ ಕಾಪಾಡುವುದು.

5. ಪಿಎಂಎ ಪರಿಹಾರ ನಿಧಿಗೆ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸಾಮಾಜಿಕ ಅಭಿವೃದ್ಧಿಗಾಗಿ ಮತ್ತು ಕಲ್ಯಾಣಕ್ಕಾಗಿ ಹಾಗೂ ಪ.ಜಾ ಮತ್ತು ಪ.ಪಂ, ಇತರೆ ಹಿಂದುಳಿದ ವರ್ಗಗಳು ಮತ್ತು ಮಹಿಳೆಯರ ಕ್ಷೇಮಾಭಿವೃದ್ಧಿಗಾಗಿ ಸ್ಥಾಪಿಸಿರುವ ಯಾವುದೇ ಇತರೆ ನಿಧಿಗಳಿಗೆ ಕೊಡುಗೆ ನೀಡುವುದು.

6. ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಾಪನೆಯಾಗಿರುವ ತಂತ್ರಜ್ಞಾನ ಪೋಷಣೆ ವ್ಯವಸ್ಥೆಗಳಿಗೆ ಕೊಡುಗೆ ನೀಡುವುದು ಅಥವಾ ನಿಧಿ ನೀಡುವುದು.

7. ಗ್ರಾಮೀಣಾಭಿವೃದ್ಧಿ ಯೋಜನೆಗಳು.

**2. ಸಿಎಸ್‌ಆರ್ ಸಮಿತಿಯ ಸಂಯೋಜನೆ:**

**ಈ ಕೆಳಕಂಡ ನಿರ್ದೇಶಕರುಗಳು ಸಿಎಸ್‌ಆರ್ ಸಮಿತಿಯ ಸದಸ್ಯರಾಗಿರುವರು :**

| | | |
|---|---|---|
| ವ್ಯವಸ್ಥಾಪಕ ನಿರ್ದೇಶಕರು | – | ಅಧ್ಯಕ್ಷರು |
| ಶ್ರೀ ರಾಮಣ್ಣ ಕೆ ಕಲ್ಲಣ್ಣವರ್ | – | ಸದಸ್ಯರು |
| ಶ್ರೀ ಎಂ.ಎ. ಅಕ್ಟರ್ ಪಾಷ | – | ಸದಸ್ಯರು |
| ಶ್ರೀ ಬಿ.ಆರ್. ಅವಿನಾಶ್ ಬಾಬು | – | ಸದಸ್ಯರು |
| ಶ್ರೀ ಎ.ಎಸ್. ಮಂಜುನಾಥ್ | – | ಸದಸ್ಯರು |
| ಶ್ರೀ ಬಸವಣ್ಣ | – | ಸದಸ್ಯರು |

**3. ಕಂಪನಿಯ ಕಳೆದ ಮೂರು ಹಣಕಾಸು ವರ್ಷಗಳಲ್ಲಿನ ಸರಾಸರಿ ನಿವ್ವಳ ಲಾಭ**

(ರೂ.ಲಕ್ಷಗಳಲ್ಲಿ)

| ವರ್ಷ | ನಿವ್ವಳ ಲಾಭ | 3 ವರ್ಷಗಳಲ್ಲಿನ ಸರಾಸರಿ | ಶೇಕಡ 2 ರಂತೆ ಸಿಎಸ್‌ಆರ್ ಯೋಜನೆಗೆ ದೊರೆಯುವ ಮೊತ್ತ |
|---|---|---|---|
| **2013–14** | **1132** | | |
| **2014–15** | **490** | | |
| **2015–16** | **965** | | |
| **ಒಟ್ಟು ರೂ.** | **2587** | **862.33** | **17.25** |

**4. ನಿಗದಿಪಡಿಸಿದ ಸಿಎಸ್‌ಆರ್ ಖರ್ಚು (ಮೇಲಿನ ಐಟಂ (3) ರಲ್ಲಿರುವಂತೆ ಮೊತ್ತದ ಶೇಕಡ ಎರಡರಷ್ಟು) :**

ನಿಗದಿಪಡಿಸಿದ ಸಿಎಸ್‌ಆರ್ ಖರ್ಚಿನ ಅನುಸಾರ, ಅಂದರೆ ಮೇಲಿನ ಐಟಂ(3)ರಲ್ಲಿರುವಂತೆ ಮೊತ್ತದ 2% ಅಂದರೆ ರೂ.862.33 ಲಕ್ಷದ 2%, ಮೊತ್ತ ರೂ.17.25ಲಕ್ಷ.

**5. ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿದ ಸಿಎಸ್‌ಆರ್‌ನ ಮೊತ್ತದ ವಿವರ**

(ಎ) ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಬೇಕಿರುವ ಒಟ್ಟು ಮೊತ್ತ : ರೂ.17.25 ಲಕ್ಷ

(ಬಿ) ಖರ್ಚಾಗದೇ ಉಳಿದಿರುವ ಮೊತ್ತ : ಇಲ್ಲ

(ಸಿ) ಹಣಕಾಸಿನ ವರ್ಷದ ಅವಧಿಯಲ್ಲಿ ಮೊತ್ತವನ್ನು ಖರ್ಚು ಮಾಡಿದ ರೀತಿಯನ್ನು ಕೆಳಗೆ ವಿವರಿಸಿದೆ.

| (1) | (2) | (3) | (4) | (5) | (6) | (7) | (8) |
|---|---|---|---|---|---|---|---|
| ಕ್ರ ಸಂ. | ಸಿಎಸ್‌ಆರ್ ಯೋಜನೆ ಅಥವಾ ಗುರುತಿಸಿದ ಚಟುವಟಿಕೆ | ಯೋಜನೆ ಒಳಪಡಿಸಿ ಕೊಳ್ಳುವ ವಲಯ | ಯೋಜನೆ ಅಥವಾ ಕಾರ್ಯಕ್ರಮ (1) ಸ್ಥಳೀಯ ಪ್ರದೇಶ ಅಥವಾ ಇತರೆ (2) ಯೋಜನೆ ಅಥವಾ ಕಾರ್ಯಕ್ರಮ ಕೈಗೊಳ್ಳಾಗಿದ್ದಿತೋ ಆ ರಾಜ್ಯ ಮತ್ತು ಜಿಲ್ಲೆಯನ್ನು | ಯೋಜನೆ ಅಥವಾ ಕಾರ್ಯಕ್ರಮ ವಾರು ಮೊತ್ತದ ಅಂದಾಜು (ಬಜೆಟ್) | ಯೋಜನೆಗಳು ಅಥವಾ ಕಾರ್ಯಕ್ರಮಗಳಿಗೆ ಖರ್ಚು ಮಾಡಿರುವ ಮೊತ್ತ ಉಪ ಶೀರ್ಷಿಕೆ : (1) ಯೋಜನೆಗಳು ಅಥವಾ ಕಾರ್ಯಕ್ರಮಗಳಿಗೆ ನೇರ ಖರ್ಚು (2) ಮೇಲ್ವೆಚ್ಚಗಳು | ವರದಿಯ ಅವಧಿವರೆಗೆ ಸಂಚಿತ ಖರ್ಚು | ಖರ್ಚು ಮಾಡಿದ ಮೊತ್ತ : ನೇರವಾಗಿ ಅಥವಾ ಅನುಷ್ಠಾನ ಏಜೆನ್ಸಿ ಮೂಲಕ |
| 1 | ಜಯನಗರಉಪ ವಿಭಾಗ ವಾರ್ಡ್ ನಂ. 171, ಗುರಪ್ಪನಪಾಳ್ಯ, ಸುದರ್ಶನ್ ಲೇ ಔಟ್‌ನಲ್ಲಿ ಸಾರ್ವಜನಿಕ ಶೌಚಾಲಯಗಳು ಮತ್ತು ಸ್ನಾನ ಗೃಹಗಳ ನಿರ್ಮಾಣ | ಸುರಕ್ಷಿತ ಕುಡಿಯುವ ನೀರು ಸೇರಿದಂತೆ ಆರೋಗ್ಯ, ನೈರ್ಮಲ್ಯ, ಪೌಷ್ಠಿಕಾಂಶಗಳ ಪೂರೈಕೆ ಸುಧಾರಣೆ ಸೌಲಭ್ಯಗಳ ಸ್ಥಾಪನೆ ಮತ್ತು ಬಲವರ್ಧನೆ | ಸ್ಥಳೀಯ ಪ್ರದೇಶ | ರೂ.16.00 ಲಕ್ಷಗಳು | ನೇರ ಖರ್ಚುಗಳು | ರೂ.16.00 ಲಕ್ಷಗಳು. | ನೇರ |
| 2 | ವಿಕಲಚೇತನ ಮತ್ತು ದುರ್ಬಲ ವರ್ಗದ 13 ವಿದ್ಯಾರ್ಥಿಗಳಿಗೆ ಸ್ಥಾನಿಕವಾಸಿ ತರಬೇತಿ ಚಟುವಟಿಕೆ ಏರ್ಪಡಿಸ ಲಾಗಿತ್ತು | ಸಮಾಜದ ಇತರೆ ದುರ್ಬಲ ವರ್ಗಗಳು ಮತ್ತು ವಿಶೇಷ ಚೇತನರು ಮತ್ತು ತೃತೀಯ ಲಿಂಗಿಗಳಿಗೆ ಜೀವನಾಧಾರ ಮತ್ತು ಉದ್ಯೋಗ ಪಡೆಯುವಿಕೆಗೆ ಅವಕಾಶವಾಗುವ ಶಿಕ್ಷಣ ಮತ್ತು ಕೌಶಲ್ಯ ಕಾರ್ಯಕ್ರಮ ಗಳನ್ನು ಹೆಚ್ಚಿಸುವುದು | ಸ್ಥಳೀಯ ಪ್ರದೇಶ | ರೂ.7.63 ಲಕ್ಷಗಳು | ನೇರ ಖರ್ಚುಗಳು | ರೂ.7.63 ಲಕ್ಷಗಳು. | ಅನುಷ್ಠಾನ ಏಜೆನ್ಸಿ ಮೂಲಕ |

**6. ಕಳೆದ ಮೂರು ಹಣಕಾಸಿನ ವರ್ಷಗಳ ಅಥವಾ ಅದರ ಯಾವುದೇ ಭಾಗದಲ್ಲಿನ ಸರಾಸರಿ ನಿವ್ವಳ ಲಾಭದ ಶೇಕಡ ಎರಡರಷ್ಟನ್ನು ಖರ್ಚು ಮಾಡಲು ಕಂಪನಿಯು ವಿಫಲವಾಗಿದ್ದಲ್ಲಿ ಆ ಹಣವನ್ನು ಖರ್ಚು ಮಾಡದಿರುವುದಕ್ಕೆ ಕಾರಣಗಳನ್ನು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ 135(5)ರ ಉಪಬಂಧಗಳ ಅನುಸಾರ ಮಂಡಳಿಯ ವರದಿಯಲ್ಲಿ ತಿಳಿಸತಕ್ಕದ್ದು.**

ವರದಿಯ ವರ್ಷದಲ್ಲಿ ಅರ್ಹವಾದ ಸಿಎಸ್‌ಆರ್ ಮೊತ್ತ ರೂ.17.25 ಲಕ್ಷಗಳಿಗಿಂತ ಮೇಲ್ಪಟ್ಟು ರೂ.23.63 ಲಕ್ಷಗಳನ್ನು ಕಂಪನಿ ಖರ್ಚು ಮಾಡಿದೆ.

**7. ಸಿಎಸ್‌ಆರ್ ನೀತಿಯ ಅನುಷ್ಠಾನ ಮತ್ತು ಉಸ್ತುವಾರಿಯ ಬಗ್ಗೆ ಸಿಎಸ್‌ಆರ್ ಸಮಿತಿಯ ಹೊಣೆಗಾರಿಕೆ ಹೇಳಿಕೆಯು ಸಿಎಸ್‌ಆರ್ ಧ್ಯೇಯಗಳು ಮತ್ತು ಕಂಪನಿಯ ನೀತಿ ಪರಿಪಾಲನೆ ಅನುಸಾರ ಇರುವುದೇ.**

ನಾವು ಈ ಮೂಲಕ ಘೋಷಿಸುವುದೇನೆಂದರೆ ಸಿಎಸ್‌ಆರ್ ನೀತಿಯ ಅನುಷ್ಠಾನ ಮತ್ತು ಉಸ್ತುವಾರಿಯು ಸಿಎಸ್‌ಆರ್ ಧ್ಯೇಯಗಳು ಮತ್ತು ಕಂಪನಿಯ ನೀತಿಯ ಪರಿಪಾಲನೆ ಅನುಸಾರ ಇರುವುದು.

**ನಿರ್ದೇಶಕರ ಮಂಡಳಿಯ ಪರವಾಗಿ**

**ಸಹಿ/ –**
**(ಡಿ.ಸುಧಾಕರ್)**
**ಅಧ್ಯಕ್ಷರು**
**ಡಿನ್: 01536333**

**ಸ್ಥಳ : ಬೆಂಗಳೂರು**
**ದಿನಾಂಕ : 15ನೇ ಸೆಪ್ಟೆಂಬರ್, 2017**

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇದರ 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ವಿವರಗಳ ಬಗ್ಗೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 143(6)(ಬಿ) ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟಿಪ್ಪಣಿಗಳು**

ಕಂಪನಿಗಳ ಅಧಿನಿಯಮ, 2013ರ ಅನ್ವಯ (ಅಧಿನಿಯಮ) ನಿಗದಿಪಡಿಸಿರುವ ಹಣಕಾಸಿನ ವರದಿಗಾರಿಕೆಯ ಚೌಕಟ್ಟಿನ ಅನುಸಾರ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇದರ ದಿನಾಂಕ 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ವಿವರವನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ಅಧಿನಿಯಮದ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಗುಣಮಟ್ಟಗಳ ಅನುಸಾರ ಸ್ವತಂತ್ರ ಲೆಕ್ಕ ಪರಿಶೋಧನೆ ಆಧಾರದ ಮೇಲೆ ಅಧಿನಿಯಮದ ಪ್ರಕರಣ 143ರ ಅನ್ವಯ ಹಣಕಾಸಿನ ವಿವರಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅಧಿನಿಯಮದ ಪ್ರಕರಣ 139(5)ರ ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕ ಪರಿಶೋಧಕರ ಜವಾಬ್ದಾರಿಯಾಗಿರುವುದು. ದಿನಾಂಕ 29ನೇ ಆಗಸ್ಟ್ 2017ರ ತಮ್ಮ ಲೆಕ್ಕಪರಿಶೋಧನಾ ವರದಿಯ ಅನ್ವಯ ಅವರು ಈ ಕಾರ್ಯವನ್ನು ಮಾಡಿರುವರು ಎಂಬುದಾಗಿ ತಿಳಿಸಿರುತ್ತಾರೆ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ "ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು" ಇದರ ದಿನಾಂಕ 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ವಿವರಗಳ ಬಗ್ಗೆ ಪೂರಕ ಲೆಕ್ಕ ಪರಿಶೋಧನೆಯನ್ನು ಅಧಿನಿಯಮದ ಪ್ರಕರಣ 143 (6) (ಎ) ಅನ್ವಯ ನಡೆಸದಿರಲು ನಾನು ತೀರ್ಮಾನಿಸಿದ್ದೇನೆ.

**ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/–**
**(ಬಿಜಿತ್ ಕುಮಾರ್ ಮುಖರ್ಜಿ)**
**ಮಹಾಲೇಖಪಾಲರು,**
**(ಆರ್ಥಿಕ ಮತ್ತು ರೆವೆನ್ಯೂ ವಿಭಾಗದ ಲೆಕ್ಕಪರಿಶೋಧನೆ),**
**ಕರ್ನಾಟಕ, ಬೆಂಗಳೂರು**

ಸ್ಥಳ: ಬೆಂಗಳೂರು
ದಿನಾಂಕ: 20.09.2017

ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್
ಲೆಕ್ಕ ಪರಿಶೋಧಕರು

ನಂ. 27, ಸರ್ವೀಸ್ ರಸ್ತೆ (2 ಮತ್ತು 3ನೇ ಕ್ರಾಸ್ ನಡುವೆ),
ಪಂಪಮಹಾಕವಿ ರಸ್ತೆ, ಶಂಕರಪುರಂ, ಬಸವನಗುಡಿ,
ಬೆಂಗಳೂರು–560 004. ದೂ: 080–43464700
ಇ–ಮೇಲ್: ssb@yukthi.co.in

# ಸ್ವತಂತ್ರ ಲೆಕ್ಕಪರಿಶೋಧಕರ ವರದಿ

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ,**
**ಬೆಂಗಳೂರು ಇದರ ಸದಸ್ಯರುಗಳಿಗೆ**

**ಹಣಕಾಸು ವಿವರಣೆಗಳ ಬಗ್ಗೆಗಿನ ವರದಿ**

ನಾವು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಕಂಪನಿಯ 31ನೇ ಮಾರ್ಚ್, 2017ರಂದು ಇದ್ದಂತೆ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ, ಇದೇ ಅವಧಿಗೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ವಿವರ, ನಗದು ಹರಿಯುವಿಕೆ ವಿವರ ಮತ್ತು ಇದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಪ್ರಮುಖವಾದ ಲೆಕ್ಕಪತ್ರಗಳ ನೀತಿಗಳ ಸಾರಾಂಶ ಹಾಗೂ ಇತರೆ ವಿವರಣಾತ್ಮಕ ಮಾಹಿತಿಯನ್ನು ಒಳಗೊಂಡ ಹಣಕಾಸು ವಿವರಣೆಗಳ ಲೆಕ್ಕ ಪರಿಶೋಧನೆ ಮಾಡಿದ್ದೇವೆ.

**ಹಣಕಾಸಿನ ವಿವರಣೆಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ**

ಕಂಪನಿಯ ನಿರ್ದೇಶಕರ ಮಂಡಳಿಯು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7 ಓದಿಕೊಂಡಂತೆ, ಅಧಿನಿಯಮದ ಪ್ರಕರಣ 133ರ ಅನ್ವಯ ಸೂಚಿಸಿರುವಂತೆ ಲೆಕ್ಕ ಪತ್ರಗಳ ಮಾನದಂಡಗಳು ಸೇರಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕಗಳ ನಿರ್ವಹಣೆ ನೀತಿಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿ, ಹಣಕಾಸಿನ ಕಾರ್ಯಕ್ಷಮತೆ ಮತ್ತು ನಗದು ಹರಿಯುವಿಕೆ ಬಗ್ಗೆ ನೈಜವಾದ ಮತ್ತು ನ್ಯಾಯಸಮ್ಮತವಾದ ಚಿತ್ರಣ ನೀಡುವ ಸದರಿ ಹಣಕಾಸಿನ ವಿವರಗಳನ್ನು ಸಿದ್ಧಪಡಿಸುವ ಹಾಗೂ ನಿರೂಪಿಸುವ ಸಂಬಂಧ ಕಂಪನಿಗಳ ಅಧಿನಿಯಮ, 2013ರ ("ಅಧಿನಿಯಮ") ಪ್ರಕರಣ 134(5)ರಲ್ಲಿ ತಿಳಿಸಿರುವ ವಿಚಾರಗಳಿಗೆ ಜವಾಬ್ದಾರರಾಗಿರುವರು. ಕಂಪನಿಯ ಸ್ವತ್ತುಗಳ ರಕ್ಷಣೆಗಾಗಿ ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು; ಸಮರ್ಪಕವಾದ ಸೂಕ್ತ ಲೆಕ್ಕ ನಿರ್ವಹಣೆ ನೀತಿಗಳ ಆಯ್ಕೆ ಮತ್ತು ಬಳಕೆಗಾಗಿ, ಸೂಕ್ತವಾದ ಹಾಗೂ ಯುಕ್ತವಾದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡಲು; ಮತ್ತು ನೈಜವಾದ ಮತ್ತು ನ್ಯಾಯೋಚಿತವಾದ ಚಿತ್ರಣ ನೀಡುವ ಮತ್ತು ವಂಚನೆ ಅಥವಾ ತಪ್ಪುಗಳ ಪ್ರಯುಕ್ತ ವಾಸ್ತವತೆಯನ್ನು ಮರೆ ಮಾಚಿ ತಪ್ಪು ಹೇಳಿಕೆಗಳನ್ನು ನೀಡದೆ ವಾಸ್ತವಿಕ ವಿಚಾರವನ್ನು ತಿಳಿಸುವ ಹಣಕಾಸಿನ ವಿವರಣೆಗಳನ್ನು ಸಿದ್ಧಪಡಿಸುವ ಮತ್ತು ನಿರೂಪಿಸುವುದಕ್ಕೆ ಸಂಬಂಧಿಸಿದಂತೆ ನಿಖರತೆಯನ್ನು ಖಾತರಿಪಡಿಸುವ ಮತ್ತು ಲೆಕ್ಕಪತ್ರಗಳನ್ನು ಪರಿಪೂರ್ಣವಾಗಿ ಹೊಂದಿರುವ ಬಗ್ಗೆ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಪರಿಪೂರ್ಣವಾದ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನಗೊಳಿಸುವ ಮತ್ತು ನಿರ್ವಹಣೆ ಮಾಡುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುವುದು.

**ಲೆಕ್ಕಪರಿಶೋಧಕರ ಜವಾಬ್ದಾರಿ**

ನಮ್ಮ ಲೆಕ್ಕಪರಿಶೋಧನೆಯ ಅಧಾರದ ಮೇಲೆ ಈ ಹಣಕಾಸು ವಿವರಣೆಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ನಾವು ಅಧಿನಿಯಮದ ಉಪಬಂಧಗಳು ಮತ್ತು ಇದರ ಅಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕಾಗಿರುವ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆಯ ಮಾನದಂಡಗಳು ಹಾಗೂ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡಿರುವೆವು.

ಅಧಿನಿಯಮದ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ನಾವು ನಮ್ಮ ಲೆಕ್ಕಪರಿಶೋಧನಾ ಕಾರ್ಯವನ್ನು ನಡೆಸಿದ್ದೇವೆ. ಈ ಗುಣಮಟ್ಟಗಳ ಅನುಸಾರ ನಾವು ಅಗತ್ಯ ನೈತಿಕ ವಿಚಾರಗಳನ್ನು ಮತ್ತು ಯೋಜನೆಯನ್ನು ಪರಿಪಾಲಿಸಬೇಕಾಗುತ್ತದೆ. ಹಣಕಾಸಿನ ವಿವರಣೆಗಳು ಯಾವುದೇ ವಾಸ್ತವಿಕ ತಪ್ಪುಗಳಿಲ್ಲದೇ ಮುಕ್ತವಾಗಿರುವವೇ ಎಂಬುದರ ಬಗ್ಗೆ ಸಮರ್ಪಕವಾದ ಭರವಸೆ ಪಡೆದುಕೊಳ್ಳಲು ಲೆಕ್ಕಪರಿಶೋಧನೆ ಯೋಜನೆ ಮಾಡಬೇಕು ಮತ್ತು ಪರಿಶೋಧನೆ ನಡೆಸಬೇಕು.

ಹಣಕಾಸಿನ ವಿವರಗಳಲ್ಲಿ ತಿಳಿಸಿರುವ ಮೊತ್ತಗಳು ಮತ್ತು ಮಾಹಿತಿಗಳ ಬಗ್ಗೆ ಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ಲೆಕ್ಕಪರಿಶೋಧನೆಯಲ್ಲಿ ಒಳಪಟ್ಟಿರುತ್ತದೆ. ಆಯ್ಕೆ ಮಾಡಿದ ಕ್ರಮಾವಳಿಗಳು, ಅಕ್ರಮಗಳು ಅಥವಾ ತಪ್ಪಿನಿಂದ ಆಗಲಿ ಹಣಕಾಸಿನ ವಿವರಣೆಗಳಲ್ಲಿ ತಪ್ಪು ಹೇಳಿಕೆಗಳು ಉಂಟಾಗುವ ಅಪಾಯಗಳನ್ನು ನಿರ್ಧರಣೆ ಮಾಡುವುದು ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನದ ಮೇಲೆ ಅವಲಂಬಿಸಿರುತ್ತವೆ. ಅಂತಹ ಅಪಾಯದ ನಿರ್ಧರಣೆ ಮಾಡುವಲ್ಲಿ, ಆ ಸಂದರ್ಭಗಳಲ್ಲಿ ಸೂಕ್ತವಾದ ಲೆಕ್ಕ ಪರಿಶೋಧನಾ ಕ್ರಮಾವಳಿಗಳನ್ನು ರೂಪಿಸುವುದಕ್ಕಾಗಿ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಹಣಕಾಸಿನ ವಿವರಣೆಗಳನ್ನು ಸಿದ್ಧಪಡಿಸಲು ಕಂಪನಿಯ ಸೂಕ್ತವಾದ ಆಂತರಿಕ ಹಣಕಾಸಿನ ನಿಯಂತ್ರಣಗಳಿರುವುದನ್ನು ಲೆಕ್ಕಪರಿಶೋಧಕರು ಪರಿಗಣಿಸುವರು. ಅಳವಡಿಸಿಕೊಂಡಿರುವ ಲೆಕ್ಕಪತ್ರದ ನೀತಿಗಳ ಸೂಕ್ತತೆಯನ್ನು ಮತ್ತು ಕಂಪನಿಯ ನಿರ್ದೇಶಕರುಗಳು ಮಾಡಿರುವ ಲೆಕ್ಕದ ಅಂದಾಜುಗಳನ್ನು ಹಾಗೂ ಹಣಕಾಸಿನ ವಿವರಣೆಗಳ ಒಟ್ಟಾರೆ ನಿರೂಪಣೆಯನ್ನು ಮೌಲ್ಯಮಾಪನ ಮಾಡುವ ಕಾರ್ಯವು ಸಹ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಯು ಪರಿಪೂರ್ಣವಾಗಿದೆ ಮತ್ತು ಹಣಕಾಸಿನ ವಿವರಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯ ಪಡೆಯಲು ಆಧಾರ ಒದಗಿಸಲು ಸೂಕ್ತವಾಗಿರುವುದೆಂದು ನಾವು ನಂಬಿರುತ್ತೇವೆ.

**ಅರ್ಹತಾ ಅಭಿಪ್ರಾಯಕ್ಕೆ ಆಧಾರ**

(i) ಹಣಕಾಸಿನ ವಿವರಣೆಯಲ್ಲಿ ಅತಿಸಣ್ಣ ಮತ್ತು ಸಣ್ಣ ಪ್ರಮಾಣದ ಉದ್ಯಮಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಮಾಹಿತಿಯನ್ನು ಪ್ರಕಟಿಸಲು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ (ಎಂಎಸ್ಎಂಇಡಿ) ಅಧಿನಿಯಮ, 2006ರ ಪ್ರಕರಣ 22ರ ಅನ್ವಯ ತಿಳಿಸಿರುವ ಸೂಚನೆಯನ್ನು ಕಂಪನಿಯು ಪರಿಪಾಲಿಸಿರುವುದಿಲ್ಲ.

(ii) ದೇಣಿಗಾರರ ಮತ್ತು ಲೇಣಿದಾರರ ಸಾಲಗಳು ಮತ್ತು ಮುಂಗಡಗಳ ಮತ್ತು ಠೇವಣಿಗಳ ಬಾಕಿಯನ್ನು ದೃಢೀಕರಣೆ ಪಡೆದಿರುವುದಿಲ್ಲ

(iii) ಕೈಗಾರಿಕಾ ಪಾರ್ಕ್‌ಗಳ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರದಿಂದ ಪಡೆದಿರುವ ಸುಮಾರು ರೂ.26,08,696/– ಮೊತ್ತದ ಅನುದಾನದ ಸಂಬಂಧ ಸೇವಾ ತೆರಿಗೆ ಹೊಣೆಗಾರಿಕೆಗೆ ವ್ಯವಸ್ಥೆ ಮಾಡಿರುವುದಿಲ್ಲ.

**<u>ಲೆಕ್ಕನಿರ್ವಹಣೆ ಗುಣಮಟ್ಟಗಳು</u>**

(iv) ಫ್ರಾಂಚೈಸಿಗಳಿಂದ ಬಂದ ಆದಾಯ/ಯುವ ಡಾಟ್ ಕಾಮ್ ಫ್ರಾಂಚೈಸಿ ಕಮಿಷನ್ ಮತ್ತು ಕಂಪನಿಯ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಂದ ಪಡೆದ ತರಬೇತಿ ಶುಲ್ಕಗಳನ್ನು ನಗದು ಆಧಾರದ ಮೇಲೆ ಪರಿಗಣಿಸಲಾಗಿರುವ ಮತ್ತು ಲೆಕ್ಕ ಮಾಡಲಾಗಿರುವ "ಆದಾಯ ಪರಿಗಣನೆ"ಯ ಕಂಪನಿಯ ಲೆಕ್ಕಗಾರಿಕೆ ನೀತಿಯು ಕಂಪನಿಗಳ ಅಧಿನಿಯುಮ 2013ರ ಪ್ರಕರಣ 128(1)ರ ಉಪಬಂಧಗಳು ಮತ್ತು ಲೆಕ್ಕಗಾರಿಕೆ ಗುಣಮಟ್ಟ–I – ಲೆಕ್ಕಗಾರಿಕೆ ನೀತಿಗಳ ಪ್ರಕಟಣೆಗೆ ವ್ಯತಿರಿಕ್ತವಾಗಿದೆ

(v) ಕಂಪನಿಯು ವಿಭಾಗದ ಆಸ್ತಿಗಳನ್ನು ಮತ್ತು ವಿಭಾಗದ ಹೊಣೆಗಾರಿಕೆಗಳನ್ನು ವಿಭಾಗಗಳಿಗೆ ನಿರ್ದಿಷ್ಟವಾಗಿ ಅಥವಾ ವಾಸ್ತವಿಕ ಆಧಾರದ ಮೇಲೆ ಹಂಚಿಕೆ ಮಾಡಿರುವುದಿಲ್ಲ/ಘೋಷಣೆ ಮಾಡಿರುವುದಿಲ್ಲ. ಇದು ಲೆಕ್ಕಗಾರಿಕೆ ಗುಣಮಟ್ಟ–17 – ವಿಭಾಗ ವರದಿಗಾರಿಕೆಗೆ ವಿರುದ್ಧವಾಗಿದೆ

**ಅರ್ಹತಾ ಅಭಿಪ್ರಾಯ**

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ತಿಳಿದಿರುವ ಮಾಹಿತಿಯಂತೆ ಹಾಗೂ ನಮಗೆ ನೀಡಿರುವ ವಿವರಣೆಗಳ ಅನುಸಾರ, ಮೇಲಿನ *ಪ್ಯಾರಾಗ್ರಾಫ್‌ನಲ್ಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರಗಳಲ್ಲಿ ವಿವರಿಸಿರುವ ವಿಚಾರಗಳ ಪರಿಣಾಮಗಳ ಹೊರತಾಗಿ,* ಮೇಲೆ ತಿಳಿಸಿರುವ ಹಣಕಾಸಿನ ವಿವರಣೆಗಳು ಅಧಿನಿಯಮದಲ್ಲಿ ಅಗತ್ಯವಾದಂತೆ ರೀತಿಯಲ್ಲಿ ಮಾಹಿತಿಯನ್ನು ಒದಗಿಸುತ್ತವೆ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ ನೈಜ ಮತ್ತು ನ್ಯಾಯಸಮ್ಮತ ಚಿತ್ರಣವನ್ನು ನೀಡುವುದು.

(ಎ) 31ನೇ ಮಾರ್ಚ್ 2017ರಂದು ಇದ್ದಂತೆ ಕಂಪನಿಯ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಮತ್ತು ವ್ಯವಹಾರಗಳು;

(ಬಿ) ಅದೇ ದಿನಾಂಕದಂದು ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ, ಹಾಗೂ ಆ ವರ್ಷದ ಲಾಭ ಮತ್ತು

(ಸಿ) ಅದೇ ದಿನಾಂಕದಂದು ಕೊನೆಗೊಂಡ ವರ್ಷದಲ್ಲಿನ ನಗದು ಹರಿಯುವಿಕೆ ವಿವರ, ನಗದು ಹರಿಯುವಿಕೆ ವಿಚಾರವಾಗಿ.

**ಗಮನಾರ್ಹ ವಿಚಾರ**

ನಮ್ಮ ಅಭಿಪ್ರಾಯಕ್ಕೆ ಅರ್ಹತೆ ಹೊಂದಿರದ ವಿಚಾರದಲ್ಲಿ ಹಣಕಾಸಿನ ವಿವರಗಳ ಟಿಪ್ಪಣಿಗಳಲ್ಲಿನ ಕೆಳಕಂಡ ವಿಚಾರಗಳ ಬಗ್ಗೆ ನಾವು ಗಮನ ಸೆಳೆಯುವೆವು:

(i) ಕಂಪನಿಯು 22.7275 ಎಕರೆಗಳ ಜಮೀನನ್ನು ಹೊಂದಿದ್ದು, ಈ ಇಡೀ ಜಮೀನನ್ನು ಕಂಪನಿಗಳಿಗೆ ಗುತ್ತಿಗೆ ಹಾಗೂ ಮಾರಾಟ ಆಧಾರದ ಮೇಲೆ ಈಗಾಗಲೇ ಹಂಚಿಕೆ ಮಾಡಿದೆ. ಇದರಿಂದ ಮುಂಬರುವ ವರ್ಷಗಳಲ್ಲಿ ಯಾವುದೇ ಹೆಚ್ಚುವರಿ ಆದಾಯ ಉತ್ಪತ್ತಿಯಾಗುವುದಿಲ್ಲ. ಬಾಡಿಗೆ, ಕಂಪನಿಯಿಂದ ಒದಗಿಸುವ ಐಟಿ ಸಂಬಂಧಿತ ಸೇವೆಗಳು, ಮಾನವಶಕ್ತಿ ಪೂರೈಕೆ ಮತ್ತು ತರಬೇತಿ ಸೇವೆಗಳಿಂದ ಮುಂದಿನ ದಿನಗಳಲ್ಲಿ ಉತ್ಪತ್ತಿಯಾಗಲಿರುವ ಹಣವು ಗಮನಾರ್ಹವಾದ ಆದಾಯವನ್ನು ತರುವಂತಹದಾಗಿರುವುದಿಲ್ಲ ಮತ್ತು ತೀವ್ರ ಸ್ವರೂಪದ ಹಣಕಾಸಿನ ವಿದ್ಯಮಾನವಾಗಿ ಪರಿಣಮಿಸಬಹುದಾಗಿರುವುದರಿಂದ ಕಂಪನಿಯು ಈ ಸಂಬಂಧ ಜರೂರಾಗಿ ಕ್ರಮ ಕೈಗೊಳ್ಳಬೇಕಾಗಿದೆ ಎಂಬುದು ನಮ್ಮ ಅಭಿಪ್ರಾಯ.

(ii) ಕಂಪನಿಯು ಷೇರು ಅರ್ಜಿ ಹಣವಾಗಿ ದಿನಾಂಕ: 21ನೇ ಜೂನ್ 2017ರಂದು ರೂ.50,00,000/– ಹಣ ಪಡೆದಿದೆ. ಸದರಿ ಹಂಚಿಕೆಯನ್ನು ಹಣ ಪಡೆದ ದಿನಾಂಕದಿಂದ 60 ದಿನಗಳ ನಂತರ ಮಾಡಲಾಗಿದೆ. ಇದು ಕಂಪನಿಗಳ (ಠೇವಣಿಗಳ ಅಂಗೀಕಾರ) ನಿಯಮಗಳು, 2014ರ 2(ಸಿ)ನ ಕಲಂ (vii) ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 73ರ ಉಪಬಂಧಗಳ ಅನುಸಾರ ಇರುವುದಿಲ್ಲ.

**ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ವರದಿ**

1. ಕೇಂದ್ರ ಸರ್ಕಾರವು ಅಧಿನಿಯಮದ ಪ್ರಕರಣ 143ರ ಉಪ ಪ್ರಕರಣ (11)ರ ಅನ್ವಯ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ("ಆದೇಶ") ಅನ್ವಯ ಅಗತ್ಯವಾದಂತೆ ನಾವು ಅನುಬಂಧ–ಎ ರಲ್ಲಿ ಆದೇಶದ ಪ್ಯಾರಾಗ್ರಾಫ್ 3 ಮತ್ತು 4ರಲ್ಲಿ ನಿಗದಿಪಡಿಸಿರುವ ವಿಚಾರಗಳ ಬಗ್ಗೆ ಅನ್ವಯವಾಗುವ ಪ್ರಮಾಣಕ್ಕೆ ವಿವರಣೆಯನ್ನು ನೀಡಿದ್ದೇವೆ.

2. ಅಧಿನಿಯಮದ ಪ್ರಕರಣ 143(5)ರ ಅನ್ವಯ ಅಗತ್ಯವಾದಂತೆ ಕಂಪನಿಗೆ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ಸೂಚಿಸಿರುವ ವಿಚಾರಗಳ ಬಗ್ಗೆ ವಿವರಣೆಯನ್ನು ನಾವು ಅನುಬಂಧ–ಬಿ ಯಲ್ಲಿ ನೀಡಿದ್ದೇವೆ.

3. ಅಧಿನಿಯಮದ ಪ್ರಕರಣ 143(3)ರ ಅನ್ವಯ ಅಗತ್ಯವಾದಂತೆ ನಾವು ತಿಳಿಸುವುದೇನೆಂದರೆ :

   (ಎ) ನಮ್ಮ ಲೆಕ್ಕಪರಿಶೋಧನೆಗೆ ಅಗತ್ಯವೆಂದು ನಮಗೆ ಗೊತ್ತಿರುವ ಮತ್ತು ನಂಬಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಕೇಳಿದ್ದು, ಅವುಗಳನ್ನು ಪಡೆದುಕೊಂಡಿದ್ದೇವೆ;

   (ಬಿ) ಮೇಲಿನ ಅರ್ಹತಾ ಅಭಿಪ್ರಾಯದ ಆಧಾರದ ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರದ ಪರಿಣಾಮದ ಹೊರತಾಗಿ, ನಮ್ಮ ಅಭಿಪ್ರಾಯದ ಪ್ರಕಾರ, ಕಾನೂನಿನ ಅನ್ವಯ ಅಗತ್ಯವಾದ ಸೂಕ್ತ ಲೆಕ್ಕದ ಪುಸ್ತಕಗಳನ್ನು ಕಂಪನಿಯು ಇಟ್ಟಿದೆ. ಈ ಪುಸ್ತಕಗಳನ್ನು ನಾವು ಪರಿಶೀಲಿಸಿದ್ದು ನಮಗೆ ಈ ಅಭಿಪ್ರಾಯ ಮೂಡಿದೆ;

   (ಸಿ) ಈ ವರದಿಯಲ್ಲಿ ಒಳಗೊಂಡಿರುವ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ, ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ನಗದು ಹರಿಯುವಿಕೆ ವಿವರವು ಲೆಕ್ಕ ನಿರ್ವಹಣೆ ಪುಸ್ತಕಗಳ ಅನುಸಾರ ಇರುವುವು;

   (ಡಿ) ಮೇಲಿನ ಅರ್ಹತಾ ಅಭಿಪ್ರಾಯದ ಆಧಾರದ ಪ್ಯಾರಾಗ್ರಾಫ್‌ನಲ್ಲಿ ತಿಳಿಸಿರುವ ವಿಚಾರದ ಪರಿಣಾಮ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ಮೇಲೆ ತಿಳಿಸಿರುವ ಹಣಕಾಸಿನ ವಿವರಣೆಗಳು ಕಂಪನಿಗಳ (ಲೆಕ್ಕಪತ್ರಗಳು) ನಿಯಮ, 2014ರ ನಿಯಮ 7 ಅನ್ನು ಓದಿಕೊಂಡಂತೆ ಅಧಿನಿಯಮದ ಪ್ರಕರಣ 133ರ ಅನ್ವಯ ನಿಗದಿಪಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳನ್ನು ಪರಿಪಾಲಿಸಿದೆ.

   (ಇ) ಕಂಪನಿಯು ಸರ್ಕಾರಿ ಕಂಪನಿಯಾಗಿದೆ. ಸರ್ಕಾರದ ಕಂಪನಿಗಳಿಗೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಉಲ್ಲೇಖ ಸಂಖ್ಯೆ : ಜಿ.ಎಸ್.ಆರ್. 463(ಇ) ದಿನಾಂಕ : 05ನೇ ಜೂನ್ 2015ರ ಅನ್ವಯ ನಿರ್ದೇಶಕರನ್ನು ಅನರ್ಹಗೊಳಿಸುವುದಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ 2013ರ ಪ್ರಕರಣ 164(2)ರ ಉಪಬಂಧಗಳು ಅನ್ವಯವಾಗುವುದಿಲ್ಲ. ಆದ್ದರಿಂದಾಗಿ ಈ ಬಗ್ಗೆ ನಮ್ಮ ಟೀಕೆಟಿಪ್ಪಣಿಗಳ ಪ್ರಮೇಯ ಉಂಟಾಗುವುದಿಲ್ಲ.

(ಎಫ್) ಕಂಪನಿಯ ಹಣಕಾಸಿನ ವರದಿ ಬಗ್ಗೆಗಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವಿಕೆ ಮತ್ತು ಈ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳಿಗಾಗಿ "ಅನುಬಂಧ ಸಿ"ನಲ್ಲಿರುವ ನಮ್ಮ ಪ್ರತ್ಯೇಕ ವರದಿಯನ್ನು ನೋಡಿ, ಮತ್ತು

(ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಒಳಪಡಿಸಿಕೊಳ್ಳಬೇಕಾದ ಇತರೆ ವಿಚಾರಗಳ ಸಂಬಂಧವಾಗಿ ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿ ಪ್ರಕಾರ ನಮಗೆ ಒದಗಿಸಿರುವ ವಿವರಣೆಗಳ ಅನುಸಾರ :

(i). ಇತ್ಯರ್ಥವಾಗದೇ ಉಳಿದಿರುವ ವಿವಾದಗಳು ಹಣಕಾಸಿನ ಪರಿಸ್ಥಿತಿಯ ಮೇಲೆ ಏನು ಪರಿಣಾಮ ಉಂಟು ಮಾಡುತ್ತದೆ ಎಂಬುದನ್ನು ಕಂಪನಿಯು ತನ್ನ ಹಣಕಾಸಿನ ತಃಖ್ತೆಗಳಲ್ಲಿ ತಿಳಿಸಿದೆ – ಹಣಕಾಸಿನ ವಿವರಣೆಯ ಲೆಕ್ಕಗಳ ಭಾಗವಾಗಿರುವ ಟಿಪ್ಪಣಿಗಳ ನಂ.36 ಮತ್ತು 37ನ್ನು ನೋಡಿ.

(ii). ಕಂಪನಿಯು ಬದಲಾವಣೆಯಾದ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿಯ ಗುತ್ತಿಗೆಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ವಾಸ್ತವಿಕ ಮುಂಗಾಣ್ಕೆಯ ನಷ್ಟಗಳಿಗೆ ಮುನ್ನೇರ್ಪಾಡಿನ ಬಗ್ಗೆ ಅಭಿಪ್ರಾಯ ತಿಳಿಸುವ ಪ್ರಮೇಯ ಉಂಟಾಗುವುದಿಲ್ಲ ಮತ್ತು

(iii). ಹೂಡಿಕೆದಾರರ ಶಿಕ್ಷಣಕ್ಕೆ ಮತ್ತು ರಕ್ಷಣಾ ನಿಧಿಗೆ ಕಂಪನಿಯಿಂದ ವರ್ಗಾವಣೆ ಮಾಡಬೇಕಾಗಿರುವ ಯಾವುದೇ ಮೊತ್ತವಿರುವುದಿಲ್ಲ.

(iv). ಕಂಪನಿಯು ನವೆಂಬರ್ 8, 2016 ರಿಂದ ಡಿಸೆಂಬರ್ 30, 2016ರವರೆಗಿನ ಅವಧಿಯಲ್ಲಿ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ದಿನಾಂಕ:30ನೇ ಮಾರ್ಚ್ 2017ರ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್.308(ಇ) ಅನ್ವಯ ಅಗತ್ಯವಾದಂತೆ ನಿರ್ದಿಷ್ಟಪಡಿಸಿದ ಬ್ಯಾಂಕ್ ಟಿಪ್ಪಣಿಗಳಲ್ಲಿನ ಹೋಲ್ಡಿಂಗ್ ಮತ್ತು ವ್ಯವಹಾರಗಳ ಬಗ್ಗೆ ಹಣಕಾಸಿನ ಹೇಳಿಕೆಗಳಲ್ಲಿ ಅಗತ್ಯವಾದ ಘೋಷಣೆಗಳನ್ನು ಒದಗಿಸಿದೆ. ನಡೆಸಿದ ಲೆಕ್ಕಪರಿಶೋಧನಾ ಕ್ರಮಾವಳಿಗಳು ಮತ್ತು ಆಡಳಿತ ವರ್ಗ ನಮಗೆ ಒದಗಿಸಿದ ಹೇಳಿಕೆಗಳ ಆಧಾರದ ಮೇಲೆ ನಾವು ವರದಿ ಮಾಡುವುದೇನೆಂದರೆ ಈ ಹೇಳಿಕೆಗಳು ಕಂಪನಿಯು ನಿರ್ವಹಣೆ ಮಾಡಿರುವ ಲೆಕ್ಕದ ಪುಸ್ತಕಗಳ ಅನುಸಾರ ಇರುವುದು.

ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್ ಪರವಾಗಿ
ಲೆಕ್ಕಪರಿಶೋಧಕರು
ಸಂಸ್ಥೆ ನೋಂದಣಿ ಸಂ. : 010372ಎಸ್
ಇವರ ಪರವಾಗಿ

**ಸಹಿ/–**
**ಕೆ. ಬಾಲಾಜಿ**
ಪಾಲುದಾರರು
ಸದಸ್ಯತ್ವ ಸಂಖ್ಯೆ : 207783

ಸ್ಥಳ : ಬೆಂಗಳೂರು
ದಿನಾಂಕ : 29.08.2017

ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್
ಲೆಕ್ಕ ಪರಿಶೋಧಕರು

ನಂ. 27, ಸರ್ವೀಸ್ ರಸ್ತೆ (2 ಮತ್ತು 3ನೇ ಕ್ರಾಸ್ ನಡುವೆ),
ಪಂಪಮಹಾಕವಿ ರಸ್ತೆ, ಶಂಕರಪುರಂ, ಬಸವನಗುಡಿ,
ಬೆಂಗಳೂರು–560 004. ದೂ: 080–43464700
ಇ–ಮೇಲ್: ssb@yukthi.co.in

## ಸಮ ದಿನಾಂಕದ ನಮ್ಮ ವರದಿಯ ಇತರೆ ಕಾನೂನು ಮತ್ತು ನಿಬಂಧನೆ ಅಗತ್ಯತೆಗಳ ಮೇಲಿನ ವರದಿಯ ಪ್ಯಾರಾಗ್ರಾಫ್ (1)ರಲ್ಲಿ ಪ್ರಸ್ತಾಪಿಸಿರುವ ದಿನಾಂಕ 31.03.2017ಕ್ಕೆ ಕೊನೆಗೊಂಡ ವರ್ಷದ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ ಲೆಕ್ಕಪತ್ರಗಳ ಮೇಲಿನ ಲೆಕ್ಕಪರಿಶೋಧನೆ ವರದಿಗೆ ಅನುಬಂಧ–ಎ

(i) (ಎ) ಕಂಪನಿಯು ಅಪೂರ್ಣ ವಿವರಗಳನ್ನು ತೋರಿಸುವ ಸ್ಥಿರಾಸ್ತಿಗಳ ರಿಜಿಸ್ಟರ್ ಅನ್ನು ನಿರ್ವಹಣೆ ಮಾಡುತ್ತಿದೆ.

(ಬಿ) ನಮಗೆ ವಿವರಿಸಿರುವಂತೆ, ಆಡಳಿತ ಮಂಡಳಿಯು ಸದರಿ ವರ್ಷಾವಧಿಯಲ್ಲಿ ಸ್ಥಿರಾಸ್ತಿಗಳನ್ನು ಭೌತಿಕವಾಗಿ ಪರಿಶೀಲನೆ ಮಾಡಿರುವುದಿಲ್ಲ. ಆದ ಪ್ರಯುಕ್ತ ವಾಸ್ತವಿಕ ವ್ಯತ್ಯಾಸಗಳ ಕಾರಣದಿಂದ ಲೆಕ್ಕದ ಪುಸ್ತಕಗಳಲ್ಲಿ ಉಂಟಾಗಿರುವ ಪರಿಣಾಮದ ಬಗ್ಗೆ ನಾವು ಟೀಕೆ ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗದು.

(ಸಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲಿಸಿದ ಆಧಾರದ ಮೇರೆಗೆ, ಸ್ಥಿರಾಸ್ತಿಗಳ ಕ್ರಯಪತ್ರಗಳು ಕಂಪನಿಯ ಹೆಸರಿನಲ್ಲಿವೆ.

(ii) ಕಂಪನಿಯು ಯಾವುದೇ ಕ್ರಮಾವಳಿಗಳನ್ನು ಹೊಂದಿರುವುದಿಲ್ಲ. ಇಲ್ಲವೇ ಈ ವರ್ಷಾವಧಿಯಲ್ಲಿ ಭೌತಿಕವಾಗಿ ಪರಿಶೀಲನೆ ಮಾಡಿದ ತಪಶೀಲನ್ನು ಹೊಂದಿರುವುದಿಲ್ಲ. ಆದ ಪ್ರಯುಕ್ತ ವಾಸ್ತವಿಕ ವ್ಯತ್ಯಾಸದ ಲೆಕ್ಕದ ಪುಸ್ತಕಗಳಲ್ಲಿ ಉಂಟಾಗುವ ಪರಿಣಾಮದ ಬಗ್ಗೆ ನಾವು ಟೀಕೆ–ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗದು.

(iii) ಸದರಿ ವರ್ಷದಲ್ಲಿ ಕಂಪನಿಯು, ಕಂಪನಿಗಳ ಅಧಿನಿಯಮ, 2013ರ ಪ್ರಕರಣ 189ರ ಅನ್ವಯ ನಿರ್ವಹಣೆ ಮಾಡಿರುವ ರಿಜಿಸ್ಟರ್‌ನಲ್ಲಿ ಒಳಪಟ್ಟಿರುವ ಕಂಪನಿಗಳು, ಸಂಸ್ಥೆಗಳು, ಸೀಮಿತವಾದ ಹೊಣೆಗಾರಿಕೆ, ಪಾಲುದಾರಿಕೆಗಳಿಗೆ ಅಥವಾ ಇತರೆ ವ್ಯಕ್ತಿಗಳಿಗೆ ಭದ್ರತೆಯುಳ್ಳ ಅಥವಾ ಭದ್ರತೆಯಿಲ್ಲದ ಯಾವುದೇ ಸಾಲಗಳನ್ನು ಮಂಜೂರು ಮಾಡಿರುವುದಿಲ್ಲ. ಆದ ಪ್ರಯುಕ್ತ ಈ ಬಗ್ಗೆ ನಾವು ಟೀಕೆ ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗುವುದಿಲ್ಲ.

(iv) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಅನ್ವಯ ಕಂಪನಿಯು ಕಂಪನಿಗಳ ಅಧಿನಿಯಮ, 2013ರ ಪ್ರಕರಣ 185 ಮತ್ತು 186ರ ಅನ್ವಯ ಯಾವುದೇ ವ್ಯವಹಾರ ನಡೆಸಿರುವುದಿಲ್ಲ. ಆದ ಪ್ರಯುಕ್ತ ಇದರ ಬಗ್ಗೆ ನಾವು ಟೀಕೆ ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗದು.

(v) ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ. ಆದ್ದರಿಂದಾಗಿ ಕಂಪನಿಗಳ ಅಧಿನಿಯಮ 2013ರ ಇತರೆ ಸಂಬಂಧಪಟ್ಟ ಉಪಬಂಧಗಳು ಮತ್ತು ಈ ಸಂಬಂಧ ರೂಪಿಸಿರುವ ನಿಯಮಗಳನ್ನು ಅಥವಾ ಪ್ರಕರಣ 73 ರಿಂದ 76ರವರೆಗಿನ ಉಪಬಂಧಗಳನ್ನು ಪರಿಪಾಲಿಸಿರುವ ಬಗ್ಗೆ ನಾವು ಯಾವುದೇ ಟೀಕೆ ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗದು.

ಕಂಪನಿ ಲಾ ಬೋರ್ಡ್ ಅಥವಾ ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ಯಾವುದೇ ನ್ಯಾಯಾಲಯ ಅಥವಾ ಯಾವುದೇ ಇತರೆ ಟ್ರಿಬ್ಯೂನಲ್ ಯಾವುದೇ ಆದೇಶ ಹೊರಡಿಸಿರುವುದಿಲ್ಲ. ಆದ್ದರಿಂದ ಈ ಬಗ್ಗೆ ನಾವು ಟೀಕೆ ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗದು.

(vi) ಕೇಂದ್ರ ಸರ್ಕಾರವು ಕಂಪನಿಯು ನಡೆಸುವ ಚಟುವಟಿಕೆಗಳಿಗೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 148ರ ಉಪ ಪ್ರಕರಣ (1)ರ ಅನ್ವಯ ವೆಚ್ಚದ ದಾಖಲೆಗಳನ್ನು ನಿರ್ವಹಣೆ ಮಾಡಲು ನಿಗದಿಪಡಿಸಿರುವುದಿಲ್ಲ.

(vii) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ನೌಕರರ ರಾಜ್ಯ ವಿಮೆ, ಸೀಮಾ ಸುಂಕ, ಮತ್ತು ಅಬಕಾರಿ ಸುಂಕವು ಪರಾಮರ್ಶನೆಯಲ್ಲಿರುವ ವರ್ಷಕ್ಕೆ ಸದರಿ ಕಂಪನಿಗೆ ಅನ್ವಯವಾಗುವುದಿಲ್ಲ.

ನಮ್ಮ ಪರಿಶೀಲನೆಯಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, 31ನೇ ಮಾರ್ಚ್, 2017 ರಂದು ಇದ್ದಂತೆ ಅವುಗಳನ್ನು ಪಾವತಿ ಮಾಡಬೇಕಿದ್ದ ದಿನಾಂಕದಿಂದ ಆರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಯವರೆಗೆ ಪಾವತಿಯಾಗದೆ ಬಾಕಿ ಉಳಿದಿರುವ ಶಾಸನಬದ್ಧ ಬಾಕಿಗಳ ಸಂಬಂಧ ಪಾವತಿ ಮಾಡಬೇಕಾಗಿರುವ ಯಾವುದೇ ವಿವಾದರಹಿತ ಮೊತ್ತಗಳು ಇರುವುದಿಲ್ಲ.

(ಬಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಈ ಕೆಳಕಂಡವುಗಳು ಹೊರತಾಗಿ ಆದಾಯ ತೆರಿಗೆ ಅಥವಾ ಮಾರಾಟ ತೆರಿಗೆ ಅಥವಾ ಸೇವಾ ತೆರಿಗೆ ಸಂಬಂಧ ಪಾವತಿ ಮಾಡಬೇಕಾಗಿರುವ ಯಾವುದೇ ವಿವಾದಿತ ಮೊತ್ತಗಳಿರುವುದಿಲ್ಲ.

| ಕಾಯ್ದೆ | ಬಾಕಿಯ ಸ್ವರೂಪ | ವಿವಾದವು ಇತ್ಯರ್ಥವಾಗದೆ ಉಳಿದಿರುವ ವೇದಿಕೆ | ಮೊತ್ತವು ಸಂಬಂಧಿಸಿರುವ ಅವಧಿ | ವಿವಾದಿತ ಮೊತ್ತ ರೂ. | ಷರಾ |
|---|---|---|---|---|---|
| ಆದಾಯ ತೆರಿಗೆ, ಅಧಿನಿಯಮ 1961 | ಆದಾಯ ತೆರಿಗೆ | ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) | ಅಸೆಸ್‌ಮೆಂಟ್ ವರ್ಷ 2014–15 | 31,96,002 | ಬರಬೇಕಾಗಿದ್ದ ಮರುಪಾವತಿಗೆ ವಿವಾದಿತ ಮೊತ್ತವನ್ನು ಹೊಂದಾಣಿಕೆ ಮಾಡಲಾಗಿದೆ |
| ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ಟ್ರಿಬ್ಯೂನಲ್ | ಅಕ್ಟೋಬರ್ 2008 ರಿಂದ ಮಾರ್ಚ್ 2013 ರವರೆಗೆ | 4,21,72,298 | ವಿವಾದಿತ ಮೊತ್ತದ ಬಗ್ಗೆ ಕಂಪನಿ ರೂ.15,80,674/– ಅನ್ನು ಠೇವಣಿ ಮಾಡಿದೆ. |

(viii) ಕಂಪನಿಯು ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. ಆದ ಪ್ರಯುಕ್ತ ಹಣಕಾಸು ಸಂಸ್ಥೆಗಳು ಅಥವಾ ಬ್ಯಾಂಕ್‌ಗೆ ಅಥವಾ ಡಿಬೆಂಚರ್ ಹೊಂದಿರುವವರಿಗೆ ಬಾಕಿಗಳ ಮರುಪಾವತಿಯಲ್ಲಿ ತಪ್ಪಿತಸ್ಥರಾಗಿರುವ ಬಗ್ಗೆ ಟೀಕೆ ಮಾಡುವ ಸಂಭವವಿರುವುದಿಲ್ಲ.

(ix) ಕಂಪನಿಯು ಸದರಿ ವರ್ಷದಲ್ಲಿ ಪ್ರಾರಂಭಿಕ ಸಾರ್ವಜನಿಕ ಕೊಡುಗೆಯ ರೂಪದಲ್ಲಿ (ಋಣ ಪತ್ರಗಳು ಸೇರಿದಂತೆ) ಯಾವುದೇ ಹಣವನ್ನು ಸಂಗ್ರಹಿಸಿರುವುದಿಲ್ಲ ಮತ್ತು ಅವಧಿ ಸಾಲಗಳನ್ನು ಪಡೆದಿರುವುದಿಲ್ಲ. ಆದ್ದರಿಂದಾಗಿ ಈ ವಿಚಾರವಾಗಿ ಟೀಕೆ ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗದು.

(x) ಹಣಕಾಸಿನ ವಿವರಗಳ ನೈಜ ಮತ್ತು ನ್ಯಾಯೋಚಿತ ಚಿತ್ರಣ ವರದಿ ಮಾಡುವ ಉದ್ದೇಶಕ್ಕಾಗಿ ಅನುಸರಿಸಲಾದ ಲೆಕ್ಕಪರಿಶೋಧನಾ ಕ್ರಮಾವಳಿಗಳ ಆಧಾರದ ಮೇಲೆ ಮತ್ತು ಆಡಳಿತ ಮಂಡಳಿ ಒದಗಿಸಿದ ಮಾಹಿತಿ ಮತ್ತು ನೀಡಿದ ನಿಯಮಗಳ ಅನ್ವಯ ಕಂಪನಿಯಿಂದಾಗಲಿ, ಅದರ ಅಧಿಕಾರಿಗಳು ಅಥವಾ ನೌಕರರಿಂದಾಗಲಿ ಯಾವುದೇ ವಂಚನೆ ಅಕ್ರಮ ನಡೆದಿರುವುದು ಕಂಡು ಬಂದಿಲ್ಲ ಅಥವಾ ನಮ್ಮ ಲೆಕ್ಕಪರಿಶೋಧನೆ ಅವಧಿಯಲ್ಲಿ ಯಾವುದೇ ಅಕ್ರಮ ನಡೆದಿರುವುದು ವರದಿಯಾಗಿರುವುದಿಲ್ಲ.

(xi) ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಉಲ್ಲೇಖ: ಸಂ.ಜಿಎಸ್.ಆರ್.463(ಇ) ದಿನಾಂಕ 05ನೇ ಜೂನ್ 2015ರ ಪರಿಣಾಮವಾಗಿ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 197ರ ಅನ್ವಯ ನಡೆದ ವ್ಯವಹಾರಗಳ ಅನುಪಾಲನೆಯು ಸರ್ಕಾರದ ಕಂಪನಿಗಳಿಗೆ ಅನ್ವಯವಾಗುವುದಿಲ್ಲ.

(xii) ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ್ದರಿಂದಾಗಿ ನಿಧಿ ನಿಯಮಗಳು 2014ರಲ್ಲಿ ತಿಳಿಸಿರುವ ಅನುಸರಣೆಯು ಅನ್ವಯವಾಗುವುದಿಲ್ಲ.

(xiii) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನ್ವಯ ಕಂಪನಿಯು ಕಂಪನಿಗಳ ಅಧಿನಿಯಮ, 2013ರ ಪ್ರಕರಣ 177 ಮತ್ತು 188ರ ಅನ್ವಯ ನಿಗದಿಪಡಿಸಿರುವ ಯಾವುದೇ ವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲ. ಅದ್ದರಿಂದ ಇದರ ಬಗ್ಗೆ ನಾವು ನಮ್ಮ ಟೀಕೆ ಟಿಪ್ಪಣಿ ಮಾಡುವ ಪ್ರಮೇಯ ಉಂಟಾಗುವುದಿಲ್ಲ.

(xiv) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ನಾವು ಕಂಪನಿಯ ದಾಖಲೆಗಳನ್ನು ಪರಿಶೀಲನೆ ಮಾಡಿದ ಆಧಾರದ ಮೇಲೆ ಸದರಿ ವರ್ಷದಲ್ಲಿ ಕಂಪನಿಯು ಷೇರುಗಳ ಆದ್ಯತಾ ಹಂಚಿಕೆಯನ್ನಾಗಲಿ ಅಥವಾ ಖಾಸಗಿ ನಿಯೋಜನೆಯನ್ನಾಗಲಿ ಅಥವಾ ಪೂರ್ಣವಾಗಿ ಅಥವಾ ಭಾಗಶಃವಾಗಿ ಪರಿವರ್ತಿಸಬಹುದಾದ ಡಿಬೆಂಚರುಗಳನ್ನಾಗಲಿ ಹಂಚಿಕೆ ಮಾಡಿರುವುದಿಲ್ಲ.

(xv) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ ಸದರಿ ವರ್ಷದಲ್ಲಿ ಕಂಪನಿಯು ಅದರ ನಿರ್ದೇಶಕರುಗಳು ಅಥವಾ ಅವರ ಜೊತೆ ಸಂಪರ್ಕ ಹೊಂದಿರುವ ವ್ಯಕ್ತಿಗಳ ಜೊತೆಯಲ್ಲಿ ಯಾವುದೇ ನಗದೇತರ ವ್ಯವಹಾರಗಳನ್ನು ಮಾಡಿರುವುದಿಲ್ಲ. ಅದ್ದರಿಂದ ಈ ವಿಚಾರದ ಬಗ್ಗೆ ಟೀಕೆ ಟಿಪ್ಪಣಿ ಮಾಡುವ ವಿಚಾರ ಉದ್ಭವಿಸುವುದಿಲ್ಲ.

(xvi) ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿನಿಯಮ 1934ರ ಪ್ರಕರಣ 45–I ಎ ಅನ್ವಯ ಕಂಪನಿಯನ್ನು ನೋಂದಣಿ ಮಾಡಬೇಕಾದ ಅಗತ್ಯತೆ ಇರುವುದಿಲ್ಲ.

ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್
ಲೆಕ್ಕಪರಿಶೋಧಕರು
ಸಂಸ್ಥೆ ನೋಂದಣಿ ಸಂ. : 010372ಎಸ್
ಇವರ ಪರವಾಗಿ

**ಸಹಿ/–**
**ಕೆ. ಬಾಲಾಜಿ**
ಪಾಲುದಾರರು
ಸದಸ್ಯತ್ವ ಸಂಖ್ಯೆ : 207783

ಸ್ಥಳ : ಬೆಂಗಳೂರು
ದಿನಾಂಕ : 29.08.2017

ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್
ಲೆಕ್ಕ ಪರಿಶೋಧಕರು

ನಂ. 27, ಸರ್ವೀಸ್ ರಸ್ತೆ (2 ಮತ್ತು 3ನೇ ಕ್ರಾಸ್ ನಡುವೆ),
ಪಂಪಮಹಾಕವಿ ರಸ್ತೆ, ಶಂಕರಪುರಂ, ಬಸವನಗುಡಿ,
ಬೆಂಗಳೂರು–560 004. ದೂ: 080–43464700
ಇ–ಮೇಲ್: ssb@yukthi.co.in

## ನಮ್ಮ ಸಮ ದಿನಾಂಕದ ವರದಿಯ ಇತರೆ ಕಾನೂನು ಮತ್ತು ನಿಬಂಧನೆ ಅಗತ್ಯತೆಗಳ ವರದಿಯ ಪ್ಯಾರಾಗ್ರಾಫ್ (2)ರಲ್ಲಿ ತಿಳಿಸಿರುವ 31.03.2017ಕ್ಕೆ ಕೊನೆಗೊಂಡ ವರ್ಷದ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ ಲೆಕ್ಕಗಳ ಬಗ್ಗೆಗಿನ ಲೆಕ್ಕ ಪರಿಶೋಧನಾ ವರದಿಗೆ ಅನುಬಂಧ–ಬಿ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ 2016–17ರ ವರ್ಷದ ವಾರ್ಷಿಕ ಲೆಕ್ಕಗಳ ಪರಿಶೋಧನೆಯ ಅವಧಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ಯಾವ ಯಾವ ವಿಚಾರಗಳನ್ನು ಪರಿಶೀಲಿಸಬೇಕು ಎಂದು ತಿಳಿಸಿ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ಕಂಪನಿಗಳ ಅಧಿನಿಯಮ, 2013ರ ಪ್ರಕರಣ 143(5)ರ ಅನ್ವಯ ನೀಡಲಾಗಿರುವ ನಿರ್ದೇಶನಗಳು ಮತ್ತು

ನಮಗೆ ಒದಗಿಸಿರುವ ಮಾಹಿತಿಗಳು ಮತ್ತು ನೀಡಿರುವ ವಿವರಣೆಗಳ ಅನುಸಾರ ನಾವು ಈ ಕೆಳಕಂಡಂತೆ ವರದಿ ಮಾಡಿರುವೆವು:

| ಕ್ರಸಂ. | ನಿರ್ದೇಶನಗಳು | ಉತ್ತರಗಳು |
|---|---|---|
| 1. | ಹೂಡಿಕೆ ಹಿಂತೆಗೆತಕ್ಕೆ ಕಂಪನಿಯು ಆಯ್ಕೆಯಾಗಿದ್ದಲ್ಲಿ, ಹೂಡಿಕೆ ಹಿಂತೆಗೆತ ಪ್ರಕ್ರಿಯೆಯ ವಿಧಾನ ಮತ್ತು ಪ್ರಸ್ತುತದಲ್ಲಿನ ಹಂತವನ್ನು ಒಳಗೊಂಡಂತೆ ಆಸ್ತಿಗಳ ಮೌಲ್ಯಮಾಪನ (ಅಗೋಚರ ಆಸ್ತಿಗಳು ಮತ್ತು ಜಮೀನು ಸೇರಿದಂತೆ) ಮತ್ತು ಹೊಣೆಗಾರಿಕೆಗಳ (ಬದ್ಧವಾಗಿರುವ ಮತ್ತು ಸಾಮಾನ್ಯ ಮೀಸಲುಗಳು ಒಳಗೊಂಡು) ಸಂಪೂರ್ಣ ಸ್ಥಿತಿಗತಿ ವರದಿಯನ್ನು ಪರಿಶೀಲಿಸುವುದು | ನಮಗೆ ತಿಳಿಸಿರುವಂತೆ ಕಂಪನಿಯು ಹೂಡಿಕೆ ಹಿಂಪಡೆಯಲು ಆಯ್ಕೆಗೊಂಡಿರುವುದಿಲ್ಲ. ಆದುದರಿಂದ ಈ ಬಗ್ಗೆ ನಾವು ನಮ್ಮ ಅಭಿಪ್ರಾಯ ನೀಡುವ ಅವಶ್ಯಕತೆ ಉಂಟಾಗುವುದಿಲ್ಲ. |
| 2. | ಋಣಗಳು/ಸಾಲಗಳು/ಬಡ್ಡಿ ಇತ್ಯಾದಿಯ ಮನ್ನಾ/ವಜಾ ಮಾಡಿದ್ದ ಪ್ರಕರಣಗಳು ಇರುವವೆ ಎಂಬುದನ್ನು ತಿಳಿಸಿ. ಹೌದಾದಲ್ಲಿ ಅದಕ್ಕೆ ಕಾರಣಗಳನ್ನು ಮತ್ತು ಒಳಪಟ್ಟಿರುವ ಮೊತ್ತವೆಷ್ಟು? ಎಂಬುದನ್ನು ತಿಳಿಸಿ | ಆರ್ಥಿಕ ವರ್ಷ 2016–17ರ ಅವಧಿಯಲ್ಲಿ ಕಂಪನಿಯು ರೂ.4,86,137/– ಮೊತ್ತದ ವಸೂಲಾಗದ ಋಣ ಸಾಲಗಳನ್ನು ವಜಾ ಮಾಡಿದೆ. ಆದರೂ, ಆರ್ಥಿಕ ವರ್ಷ 2016–17ರ ಅವಧಿಯಲ್ಲಿ ಸಾಲ/ಬಡ್ಡಿಯ ವ್ಯವಹಾರಗಳು ಯಾವುದೂ ನಡೆದಿರುವುದಿಲ್ಲ. |
| 3. | ಮೂರನೆ ವ್ಯಕ್ತಿಯ ಬಳಿ ಇರಿಸಿರುವ ತಪಶೀಲು ಸರಕುಗಳ ಬಗ್ಗೆ ಮತ್ತು ಸರ್ಕಾರದಿಂದ ಅಥವಾ ಇತರೆ ಪ್ರಾಧಿಕಾರಿಗಳಿಂದ ಉಡುಗೊರೆಯಾಗಿ ಪಡೆದಿರುವ ಸ್ವತ್ತುಗಳ ಬಗ್ಗೆ ಸೂಕ್ತವಾದ ದಾಖಲೆಗಳನ್ನು ನಿರ್ವಹಣೆ ಮಾಡಲಾಗಿದೆಯೇ? | ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಯಂತೆ ಮೂರನೆ ವ್ಯಕ್ತಿಗಳಲ್ಲಿ ಯಾವುದೇ ತಪಶೀಲು ಸರಕುಗಳನ್ನು ಇರಿಸಿರುವುದಿಲ್ಲ ಮತ್ತು ಸರ್ಕಾರದ ಅನುದಾನಗಳು ಹೊರತಾಗಿ, ಸರ್ಕಾರದಿಂದ ಅಥವಾ ಇತರೆ ಪ್ರಾಧಿಕಾರಿಗಳಿಂದ ಉಡುಗೊರೆಯಾಗಿ ಯಾವುದೇ ಆಸ್ತಿಗಳನ್ನು ಪಡೆದಿರುವುದಿಲ್ಲ. |
| 4. | ಇತ್ಯರ್ಥವಾಗದೆ ಉಳಿದಿರುವ ಕಾನೂನು/ಮಧ್ಯಸ್ಥಿಕೆ ಪ್ರಕರಣಗಳ ಬಗ್ಗೆ ಅವುಗಳು ಇತ್ಯರ್ಥವಾಗದೆ ಉಳಿದಿರುವುದಕ್ಕೆ ಕಾರಣಗಳನ್ನು ತಿಳಿಸುವುದು ಸೇರಿದಂತೆ ಅವಧಿವಾರು ವಿಶ್ಲೇಷಣೆ ಮತ್ತು ಎಲ್ಲಾ ಕಾನೂನು ಪ್ರಕರಣಗಳ ಮೇಲಿನ (ವಿದೇಶೀಯ ಮತ್ತು ಸ್ಥಳೀಯ) ಖರ್ಚುಗಳ ಮೇಲುಸ್ತುವಾರಿ ವ್ಯವಸ್ಥೆ ಇರುವಿಕೆ/ಅದರ ಪರಿಣಾಮದ ಬಗ್ಗೆ ವರದಿಯನ್ನು ನೀಡುವುದು | ಇತ್ಯರ್ಥವಾಗದೆ ಉಳಿದಿರುವ ಕಾನೂನು/ಮಧ್ಯಸ್ಥಿಕೆ ಪ್ರಕರಣಗಳ ಅವಧಿವಾರು ವಿಶ್ಲೇಷಣೆ ಮತ್ತು ಅವುಗಳ ಸ್ಥಿತಿಗತಿಯ ಬಗ್ಗೆ ವರದಿಯನ್ನು ಅನುಬಂಧ–Iರಲ್ಲಿ ಕೊಡಲಾಗಿದೆ. ಇದನ್ನು ಕಂಪನಿಯ ಹಣಕಾಸು ಇಲಾಖೆಯು ಕಂಪನಿಯ ಕಾನೂನು ಮತ್ತು ಇತರೆ ಇಲಾಖೆಯಿಂದ ಮಾಹಿತಿ ಸಂಗ್ರಹಿಸಿದ ನಂತರ ಒದಗಿಸಿದೆ. ಪ್ರತಿ ಪ್ರಕರಣಕ್ಕೆ ಪ್ರತ್ಯೇಕವಾಗಿ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಮೇರೆಗೆ ಕಂಪನಿಯು ಕಾನೂನು ವೆಚ್ಚಗಳನ್ನು ಮಾಡಿದೆ. |

| ಕ್ರಸಂ. | ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು | ಉತ್ತರಗಳು |
|---|---|---|
| (ಎ) | ಕಂಪನಿಯು ತಾನು ಹೊಂದಿರುವ, ಬಳಕೆಯಾಗದ ಹಾಗೆಯೇ ಬಿಟ್ಟಿರುವ ಜಮೀನನ್ನು ಬೇರೆಯವರು ಒತ್ತುವರಿ ಮಾಡುವುದನ್ನು ತಡೆಯಲು ಸಾಕಷ್ಟು ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಂಡಿರುವುದೇ. ಕಂಪನಿಯ ಯಾವುದೇ ಜಮೀನು ಒತ್ತುವರಿಯಾಗಿರುವುದೇ, ವಿವಾದದಲ್ಲಿ ಸಿಲುಕಿದೆಯೇ, ಉಪಯೋಗಕ್ಕೆ ಪಡೆದಿಲ್ಲವೇ ಅಥವಾ ಹೆಚ್ಚುವರಿ ಆಗಿರುವುದೆಂದು ಘೋಷಿಸಲಾಗಿದೆಯೇ? ವಿವರಗಳನ್ನು ಒದಗಿಸುವುದು. | ನಮಗೆ ತಿಳಿಸಿರುವಂತೆ ಕಂಪನಿಯು ಹೊಂದಿರುವ ಮತ್ತು ಬಳಕೆಯಾಗದೆ ಹಾಗೆಯೇ ಬಿಟ್ಟಿರುವ ಜಮೀನಿನ ಒತ್ತುವರಿಯನ್ನು ತಡೆಯುಲು ಸಾಕಷ್ಟು ಪ್ರಮಾಣದ ಕ್ರಮಗಳನ್ನು ಕಂಪನಿ ಕೈಗೊಂಡಿದೆ. ಕಂಪನಿಯ ಜಮೀನನ್ನು ಯಾರೂ ಒತ್ತುವರಿ ಮಾಡಿಕೊಂಡಿರುವುದಿಲ್ಲ.<br>ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಹಂಚಿಕೆಯಾಗಿರುವ ಆದರೆ ವಿವಾದದಲ್ಲಿ ಒಳಗೊಂಡಿರುವ ಜಮೀನಿನ ವಿವರಗಳು :<br>1. ಆ್ಯಂಕೊ ಕಮ್ಯುನಿಕೇಶನ್ ಲಿ. ಗೆ ಹಂಚಿಕೆಯಾಗಿರುವ 1.06 ಎಕರೆಗಳ ಜಮೀನು<br>2. ಕುಮಾನ್ ಎಂಟರ್‌ಟೈನ್‌ಮೆಂಟ್ಸ್ ಅಂಡ್ ಹಾಸ್ಪಿಟಾಲಿಟೀಸ್ ಪ್ರೈವೇಟ್ ಲಿಮಿಟೆಡ್‌ಗೆ ಹಂಚಿಕೆಯಾಗಿರುವ 0.25 ಎಕರೆಗಳ ವಿಸ್ತೀರ್ಣದ ಜಮೀನು<br>3. ಇನ್‌ಫೋಟೆಕ್ ಎಂಟರ್‌ಪ್ರೈಸಸ್ ಲಿ. (ಸೈಯೆಂಟ್ ಲಿ) ಇವರಿಗೆ ಹಂಚಿಕೆಯಾಗಿದ್ದ 2.00 ಎಕರೆ ಜಮೀನು<br>4. ಐಆರ್ ಮಲ್ಟಿ ಮೀಡಿಯಾ ಸಲ್ಯೂಷನ್ಸ್ ಪ್ರೈವೇಟ್ ಲಿ.ಗೆ ಹಂಚಿಕೆಯಾಗಿರುವ 1.00 ಎಕರೆ ಜಮೀನು<br>ಕಂಪನಿ ಹೊಂದಿರುವ ಆದರೆ ಬಳಕೆ ಮಾಡುತ್ತಿಲ್ಲದ ಜಮೀನುಗಳ ವಿವರ :<br>1. ಮಂಗಳೂರಿನಲ್ಲಿನ 3.25 ಎಕರೆ ಜಮೀನು<br>2. ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಎಸ್ಟೇಟ್‌ನಲ್ಲಿ 5.00 ಎಕರೆಗಳ ಜಮೀನು<br>3. ಬೆಂಗಳೂರಿನ ಸೂರ್ಯನಗರದಲ್ಲಿನ 1.72 ಎಕರೆಗಳ ಜಮೀನು.<br>ನಮಗೆ ತಿಳಿಸಿರುವಂತೆ ಕಂಪನಿಯು ಯಾವುದೇ ಹೆಚ್ಚುವರಿ ಜಮೀನನ್ನು ಹೊಂದಿರುವುದಿಲ್ಲ. |
| (ಬಿ) | ಕೈಗಾರಿಕಾ ನಿವೇಶನಗಳು/ಶೆಡ್‌ಗಳ ಹಂಚಿಕೆಯ ಪದ್ಧತಿ ಜೊತೆಗೆ ಹಂಚಿಕೆ ಪಡೆದವರಿಂದ ಜಮೀನಿನ ಬೆಲೆಯ ಕಂತುಗಳ ವಸೂಲಿಯನ್ನು ಪರಿಶೀಲಿಸಿ ಮತ್ತು ತಿಳಿಸಿ. ವ್ಯವಹಾರ ಸ್ಥಾಪನೆಯಲ್ಲಿ ಉಂಟಾಗಿರುವ ವಿಳಂಬಕ್ಕೆ ಅಥವಾ ಹಂಚಿಕೆ ಪಡೆದ ಉದ್ದೇಶವನ್ನು ಬಿಟ್ಟು ಬೇರೆ ವ್ಯವಹಾರ ಪ್ರಾರಂಭಿಸಿದ್ದರೆ ಅದಕ್ಕೆ ದಂಡ ವಿಧಿಸುವ ಯಾವ ವ್ಯವಸ್ಥೆಯಿದೆ? | ಆಡಳಿತ ಮಂಡಳಿಯು ನಮಗೆ ತಿಳಿಸಿರುವಂತೆ, ಎಲೆಕ್ಟ್ರಾನಿಕ್ ಸಿಟಿಯಲ್ಲಿ ಪ್ರಸಕ್ತದಲ್ಲಿ ಹಂಚಿಕೆ ಮಾಡಲು ಯಾವುದೇ ಜಮೀನು ಲಭ್ಯವಿರುವುದಿಲ್ಲ. ಲಭ್ಯವಿದ್ದ ಸಣ್ಣ ಪ್ರಮಾಣದ ಅಂಚಿನಲ್ಲುಳಿದಿದ್ದ ಜಮೀನನ್ನು ಬಹಿರಂಗ ಹರಾಜಿನಲ್ಲಿ ಹಂಚಿಕೆ ಮಾಡಲಾಗಿದೆ. ಉದ್ಯಮಿಗಳಿಗೆ ಈಗಾಗಲೇ ಹಂಚಿಕೆ ಮಾಡಿರುವ ಜಮೀನಿನ ಸಂಬಂಧದಲ್ಲಿ, ಜಮೀನಿನ ಶೇಕಡ 99ರಷ್ಟು ಬೆಲೆಯನ್ನು ಹಂಚಿಕೆಯ ಸಮಯದಲ್ಲೇ ಈಗಾಗಲೇ ವಸೂಲಿ ಮಾಡಲಾಗಿದೆ. ಉಳಿದ ಶೇಕಡ 1ರಷ್ಟು ಬಾಕಿ ಮೊತ್ತವನ್ನು ಶುದ್ಧ ಕ್ರಯಪತ್ರ ನೀಡುವ ಸಮಯದಲ್ಲಿ ವಸೂಲಿ ಮಾಡಲಾಗುತ್ತದೆ.<br>ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬ ಮಾಡಿರುವುದಕ್ಕೆ ಜಮೀನು ಹಂಚಿಕೆ ಪಡೆದಿರುವವರಿಗೆ ಕಾಲಕಾಲಕ್ಕೆ ನೋಟೀಸ್‌ಗಳನ್ನು ನೀಡಲಾಗಿದೆ. ಯೋಜನೆಯ ಅನುಷ್ಠಾನಕ್ಕೆ ತೀರಾ ವಿಳಂಬ ಮಾಡಿರುವ ಪ್ರಕರಣಗಳ ಸಂಬಂಧ ಅವರಿಗೆ ಹಂಚಿಕೆ ಮಾಡಿರುವ ಜಮೀನುಗಳನ್ನು ರದ್ದುಪಡಿಸುವ ಬಗ್ಗೆ ನೋಟೀಸ್‌ಗಳನ್ನು ನೀಡಲಾಗಿದೆ.<br>ಐಟಿ ಮತ್ತು ಎಲೆಕ್ಟ್ರಾನಿಕ್ ಘಟಕಗಳಿಗೆ ಹೊರತಾಗಿ ಬೇರೆ ಉದ್ದೇಶಗಳಿಗೆ ಜಮೀನನ್ನು ಬಳಕೆ ಮಾಡುತ್ತಿರುವ ಹಂಚಿಕೆದಾರರಿಂದ ಆ ಜಮೀನಿಗೆ ಕಂಪನಿಯು ಪ್ರಚಲಿತ ಮಾರುಕಟ್ಟೆ ದರವನ್ನು ವಸೂಲಿ ಮಾಡುತ್ತಿದೆ. |

| ಕ್ರಸಂ. | ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು | ಉತ್ತರಗಳು |
|---|---|---|
| (ಸಿ) | ತಪ್ಪಿತಸ್ಥ ಪ್ರಕರಣಗಳ ನಿರ್ವಹಣೆ ವ್ಯವಸ್ಥೆಯನ್ನು ಪರಿಶೀಲಿಸತಕ್ಕದ್ದು. ನಿಗದಿತ ಕಾಲಮಿತಿಯಲ್ಲಿ ಪರಿಸ್ಥಿತಿಯನ್ನು ಪರಿಹರಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ? ಜಾರಿಯಲ್ಲಿರುವ ವ್ಯವಸ್ಥೆಯನ್ನು ಅನುಸರಿಸದಿರುವ ಪ್ರಕರಣವನ್ನು ವಿವರಿಸತಕ್ಕದ್ದು | ತಪ್ಪಿತಸ್ಥರ ಮೇಲೆ ಪರಿಹಾರಿಕ ಕ್ರಮ ಕೈಗೊಳ್ಳಲು ಸಕಾಲಿಕ/ ನಿಯಮಿತ ಆಧಾರದ ಮೇಲೆ ಕೆಲವು ತಪ್ಪಿತಸ್ಥ ಪ್ರಕರಣಗಳನ್ನು ಕಂಪನಿಯು ಗಮನಿಸುತ್ತಿಲ್ಲ. |
| (ಡಿ) | ವಿವಿಧ ಏಜೆನ್ಸಿಗಳಿಗೆ ಮಾನವಶಕ್ತಿ ಪೂರೈಕೆಗೆ ಸಂಬಂಧಿಸಿದಂತೆ ಶುಲ್ಕಗಳು/ಸಂಭಾವನೆಗಳನ್ನು ವಸೂಲಿ ಮಾಡಲು ಯಾವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ? ವಸೂಲಿ ಆಗದಿರುವ ಮತ್ತು ಲೆಕ್ಕಕ್ಕೆ ತೆಗೆದುಕೊಂಡಿರದ ಪ್ರಕರಣಗಳ ಬಗ್ಗೆ ತಿಳಿಸಿ | ಆಡಳಿತ ಮಂಡಳಿಯು ತಿಳಿಸಿದಂತೆ, ಮಾರಾಟದ ನಿಯಮಿತ ಬಿಲ್ ಅನ್ನು ಸಿದ್ಧಪಡಿಸಿ ಮಾನವ ಶಕ್ತಿ ಸೇವೆಗಳನ್ನು ಒದಗಿಸಲಾದ ಇಲಾಖೆ/ಸಂಸ್ಥೆಗೆ ನೀಡಲಾಗುವುದು. ಹಾಗೂ ಇಲಾಖೆಗಳಿಂದ ಹಣವನ್ನು ಮಾಸಿಕ ಆಧಾರದ ಮೇಲೆ ವಸೂಲಿ ಮಾಡಲಾಗುವುದು ಹಾಗೂ ಬಾಕಿಯಿರುವ ಮೊತ್ತ ವಸೂಲು ಮಾಡಲು ಸಹ ನಿಯಮಿತವಾಗಿ ಕ್ರಮ ನಡೆಸಲಾಗಿದೆ. ಕಂಪನಿಯು ಯಾರಿಂದ ಮಾನವಶಕ್ತಿ ಸೇವೆಗಳನ್ನು ಪಡೆದಿದೆಯೋ ಅಂತಹ ಏಜೆನ್ಸಿಗಳಿಗೆ ಹಣ ಪಾವತಿಯನ್ನು ಬಿಡುಗಡೆ ಮಾಡುತ್ತಿದೆ. ಇಲಾಖೆಯಿಂದ ಹಣವನ್ನು ಪಡೆದ ನಂತರ ಮಾತ್ರ ಹಣ ಪಾವತಿಸಲಾಗುವುದು. ವಸೂಲಾಗದಿರುವ ಯಾವುದೇ ಪ್ರಕರಣಗಳ ಬಗ್ಗೆ ಆಡಳಿತ ಮಂಡಳಿ ತಿಳಿಸಿರುವುದಿಲ್ಲ. |
| (ಇ) | ಫ್ರಾಂಚೈಸಿಯಿಂದ ಗಳಿಕೆಯ ಪಾಲನ್ನು ಪಡೆಯುವ ಬಗ್ಗೆ ಯಾವ ವ್ಯವಸ್ಥೆಯಿರುವುದು? ತಂತ್ರಾಂಶ, ಹಾರ್ಡ್‌ವೇರ್ ಅಥವಾ ಐಟಿ ಬೆಂಬಲಿತ ವ್ಯವಸ್ಥೆಯು ಅವಶ್ಯಕತೆಗಿಂತ ಮಿಗಿಲಾಗಿರುವ/ಅನುಪಯುಕ್ತವಾಗಿರುವ ಪ್ರಕರಣಗಳ ಬಗ್ಗೆ ತಿಳಿಸಿ | ಆಡಳಿತ ಮಂಡಳಿಯು ತಿಳಿಸಿರುವಂತೆ ಕಂಪನಿಯು ಪಡೆದಿರುವ ಫ್ರಾಂಚೈಸೀ ಆದಾಯವು, ಫ್ರಾಂಚೈಸಿಗಳು ಸಂಗ್ರಹಿಸಿರುವ ಶುಲ್ಕದ 20% ಆಗಿರುವುದು. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡುವ ಸಂದರ್ಭದಲ್ಲಿ ಅದನ್ನು ಪರಾಮರ್ಶನೆ ಮಾಡಲಾಗುವುದು. ಕಂಪನಿಯು ಹೋಬಳಿ, ತಾಲ್ಲೂಕು, ಜಿಲ್ಲೆ ಮತ್ತು ಬೆಂಗಳೂರು ಪ್ರದೇಶದ ಆಧಾರದ ಮೇಲೆ ಫ್ರಾಂಚೈಸೀ ಕೇಂದ್ರದ ಅನುಸಾರ ಅನುಕ್ರಮವಾಗಿ ರೂ.35,000/–, ರೂ.52,000/–, ರೂ.86,000/– ಮತ್ತು ರೂ.90,000/– ಮೊತ್ತಗಳ ವಾರ್ಷಿಕ ಗುರಿಯ ಶುಲ್ಕವನ್ನು ನಿಗದಿಪಡಿಸಿದೆ. ಕಂಪನಿಯು ಹೊಸ ಫ್ರಾಂಚೈಸೀಗಳಿಗೆ ಹಂಚಿಕೆ ಮಾಡುವ ಸಮಯದಲ್ಲಿ ಹೋಬಳಿ, ತಾಲ್ಲೂಕು, ಜಿಲ್ಲೆ ಮತ್ತು ಬೆಂಗಳೂರು ಪ್ರದೇಶಕ್ಕೆ ಅನುಕ್ರಮವಾಗಿ ರೂ.50,000/–, ರೂ.1,00,000/–, ರೂ.1,50,000/– ಮತ್ತು ರೂ.1,50,000/– ರಾಜಧನದ ಶುಲ್ಕಗಳನ್ನು ಸಂಗ್ರಹಿಸುತ್ತಿದೆ. ಆಡಳಿತ ಮಂಡಳಿಯು ತಿಳಿಸಿರುವಂತೆ ಹೆಚ್ಚುವರಿಯಾಗಿ ಉಳಿದಿರುವ/ಕಾಲಕ್ಕೆ ಹೊಂದಿಕೆಯಾಗದೇ ಅನುಪಯುಕ್ತವಾದ ತಂತ್ರಾಂಶ, ಹಾರ್ಡ್‌ವೇರ್ ಅಥವಾ ಐಟಿ ಬೆಂಬಲಿತ ಸಿಸ್ಟಮ್‌ಗಳು ಕಂಪನಿಯಲ್ಲಿರುವುದಿಲ್ಲ. |
| ಎಫ್) | ಲೆಕ್ಕಪರಿಶೋಧಿತ ಕಂಪನಿಯು ತನ್ನ ಪೂರ್ಣ ಕಾರ್ಯಾಚರಣೆಯನ್ನು ಅಥವಾ ಕಾರ್ಯಾಚರಣೆಯ ಒಂದು ಭಾಗವನ್ನು ಗಣಕೀಕರಣಗೊಳಿಸಿದ್ದೇ ಆದರೆ ಅದನ್ನು ನಿರ್ಧರಣೆ ಮಾಡಿ ಮತ್ತು ವರದಿ ನೀಡಿ, ಕಂಪನಿಯ ಎಷ್ಟು ಪ್ರಮಾಣದ ಅಂಕಿಅಂಶವನ್ನು ವಿದ್ಯುನ್ಮಾನ ನಮೂನೆಗೆ ಅಳವಡಿಸಲಾಗಿದೆ, ಯಾವ ಕ್ಷೇತ್ರದಲ್ಲಿ ಅಂದರೆ ಲೆಕ್ಕಪತ್ರ ವಿಭಾಗ, ಮಾರಾಟ, ಸಿಬ್ಬಂದಿಯ ಮಾಹಿತಿ, ವೇತನ ಪಾವತಿ ರಿಜಿಸ್ಟ್ರಿ, ತಪಶೀಲು ಇತ್ಯಾದಿಯನ್ನು ಗಣಕೀಕರಣಗೊಳಿಸಲಾಗಿರುವುದೇ ಮತ್ತು ಅಂಕಿ ಅಂಶ/ ತಂತ್ರಾಂಶ/ಹಾರ್ಡ್‌ವೇರ್ ಬಗ್ಗೆ ಕಂಪನಿಯು ಸೂಕ್ತವಾದ ಭದ್ರತಾ ನೀತಿಯನ್ನು ರೂಪಿಸಿರುವುದೇ? | ಲೆಕ್ಕಪತ್ರದ ಪುಸ್ತಕಗಳು ಮತ್ತು ವೇತನ ಪಾವತಿ ರಿಜಿಸ್ಟ್ರಿಯನ್ನು ಗಣಕೀಕರಣಗೊಳಿಸಲಾಗಿದೆ. ಆದರೆ ಮಾರಾಟ ಸಿಬ್ಬಂದಿ ಮಾಹಿತಿ, ತಪಶೀಲು ಇತ್ಯಾದಿಯ ವಿಭಾಗದಲ್ಲಿ ಭಾಗಶಃ ಗಣಕೀಕರಣಗೊಳಿಸಲಾಗಿದೆ. ಅಂಕಿ ಅಂಶಗಳ ರಕ್ಷಣೆಗಾಗಿ ನಿಯತಕಾಲಿಕ ಪೂರಕ ಮಾಹಿತಿ ಪಡೆಯಲಾಗಿದೆ. ತಂತ್ರಾಂಶ ಮತ್ತು ಹಾರ್ಡ್‌ವೇರ್ ರಕ್ಷಣೆಗೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತ್ಯೇಕ ಇಡಿಪಿ ವಿಭಾಗವು ಅಸ್ತಿತ್ವದಲ್ಲಿದೆ. ಇದು ಅಂಕಿ ಅಂಶ, ಹಾರ್ಡ್‌ವೇರ್ ಮತ್ತು ತಂತ್ರಾಂಶದ ಮೇಲುಸ್ತುವಾರಿ ನೋಡಿಕೊಳ್ಳುವುದು. |

**ಅನುಬಂಧ–1**

**ಇತ್ಯರ್ಥವಾಗದೆ ಉಳಿದಿರುವ ಕಾನೂನು / ಮಧ್ಯಸ್ಥಿಕೆ ಪ್ರಕರಣಗಳ ವಿವರ**

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ ವಿರುದ್ಧ ಹೂಡಲಾಗಿರುವ ಮೊಕದ್ದಮೆಗಳು**

| ಕ್ರ. ಸಂ. | ಪ್ರಕರಣದ ಅವಧಿ | ಪ್ರಕರಣದ ಸಂಖ್ಯೆ | ಅರ್ಜಿದಾರರ ವಿವರಗಳು | ಪ್ರಕರಣದ ವಿವರ | ಯಾವ ನ್ಯಾಯಾಲಯದಲ್ಲಿ ಉಳಿದಿದೆ | ಷರಾ |
|---|---|---|---|---|---|---|
| 1 | 2005 | ಸಿಓಪಿ.ನಂ. 68/1997 | ಸ್ವೀಡೆ (ಇಂಡಿಯಾ) ಟೆಲ್‌ಟ್ರಾನಿಕ್ಸ್ ಲಿಮಿಟೆಡ್ | ಜಂಟಿ ಸಹಭಾಗಿತ್ವದ ಕಾರ್ಯಾಚರಣೆ ಪೂರ್ವ ಖರ್ಚು ರೂ.4,23,518/–ರ ವಿಚಾರವಾಗಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಧಿಕೃತ ಸಮಾಪಕರು ಪ್ರಕರಣ ದಾಖಲಿಸಿದ್ದಾರೆ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ದಿನಾಂಕ: 13.07.2017 ರಂದು ಕೊನೆಯ ಮಾಹಿತಿ ನೀಡಲಾಗಿತ್ತು. ಪ್ರಕರಣವು ಇನ್ನೂ ಇತ್ಯರ್ಥವಾಗಿಲ್ಲ |
| 2 | 2008 | ಓ.ಎಸ್.ನಂ. 1501/2008 | ಬೆರೋನ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ | 119 ಚದರ ಮೀಟರುಗಳ ವಿಸ್ತೀರ್ಣದ ಹೆಚ್ಚುವರಿ ಜಮೀನಿನ ಹಂಚಿಕೆ ವಿಚಾರವಾಗಿ | ಪ್ರಿನ್ಸಿಪಾಲ್–II ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಬೆಂಗಳೂರು | ದಿನಾಂಕ :26.07.2017ರಂದು ಕಡೆಯದಾಗಿ ಮಾಹಿತಿ ನೀಡಲಾಗಿದೆ. ಪ್ರಕರಣವು ಇತ್ಯರ್ಥವಾಗದೆ ಉಳಿದಿದೆ. |
| 3 | 2011 | ಎಲ್‌ಎಸಿ/6 2011 | ಮೆ॥ ಸಪ್ತಗಿರಿ ಎಂಟರ್‌ಪ್ರೈಸಸ್ ಬೆಂಗಳೂರು | ಕಿಯೋನಿಕ್ಸ್‌ಗೆ ಸುಮಾರು ರೂ.1.44 ಕೋಟಿಗಳ ಮೊತ್ತದ ಪರಿಹಾರ ಬಿಡುಗಡೆ ವಿಚಾರದ ಸಂಬಂಧ ಅರ್ಜಿದಾರರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಂದೆ ಆಕ್ಷೇಪಣೆ ಸಲ್ಲಿಸಿದ್ದಾರೆ | ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು | ದಿನಾಂಕ: 01.08.2017 ರಂದು ಕಡೆಯದಾಗಿ ಮಾಹಿತಿ ನೀಡಲಾಗಿದೆ. ಪ್ರಕರಣ ಇತ್ಯರ್ಥವಾಗದೆ ಉಳಿದಿದೆ. |
| 4 | 2011 | ಎ.ಎಸ್/3 2011 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ | ಜಮೀನು ಸ್ವಾಧೀನಪಡಿಸಿ–ಕೊಂಡಿರುವ ಬಗ್ಗೆ ಕಿಯೋನಿಕ್ಸ್‌ಗೆ ಸುಮಾರು ರೂ.8.84 ಕೋಟಿಗಳ ಮೊತ್ತದ ಪರಿಹಾರ ಪಾವತಿ ವಿಚಾರವಾಗಿ | ಪ್ರಧಾನ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ | ದಿನಾಂಕ: 14.07.2017 ರಂದು ಕಡೆಯದಾಗಿ ಮಾಹಿತಿ ನೀಡಲಾಗಿದೆ ಪ್ರಕರಣ ಇತ್ಯರ್ಥವಾಗದೆ ಉಳಿದಿದೆ. |

| ಕ್ರ. ಸಂ. | ಪ್ರಕರಣದ ಅವಧಿ | ಪ್ರಕರಣದ ಸಂಖ್ಯೆ | ಅರ್ಜಿದಾರರ ವಿವರಗಳು | ಪ್ರಕರಣದ ವಿವರ | ಯಾವ ನ್ಯಾಯಾಲಯದಲ್ಲಿ ಉಳಿದಿದೆ | ಷರಾ |
|---|---|---|---|---|---|---|
| 5 | 2012 | 24/2012 | ಕೆ.ಎನ್. ಉಮೇಶ್, ಸಿಐಟಿಯು | ಕನಿಷ್ಠ ವೇತನ ಕಾಯ್ದೆಯ ಅನ್ವಯ ಪ್ರಕರಣ ಹೂಡಲಾಗಿದೆ | ಹಿರಿಯ ಕಾರ್ಮಿಕ ನಿರೀಕ್ಷಕರು, ಬೆಂಗಳೂರು | ಹಾಲಿ ಯಾವ ಸ್ಥಿತಿಯಲ್ಲಿದೆ ಎಂಬುದು ಲಭ್ಯವಿಲ್ಲ |
| 6 | 2011 | 20/2011 | ಸಿಇಓ ಚಿತ್ರದುರ್ಗ | ಕಿಯೋನಿಕ್ಸ್‌ನಿಂದ ಯೋಜನೆಯನ್ನು ಅನುಷ್ಠಾನಗೊಳಿಸದಿರುವ ವಿಚಾರವಾಗಿ ಅರ್ಜಿದಾರರು ಚಿತ್ರದುರ್ಗ ಜಿಲ್ಲಾಧಿಕಾರಿಯವರ ಮುಂದೆ ಮಧ್ಯಸ್ಥಿಕೆ ಅರ್ಜಿ ಸಲ್ಲಿಸಿದ್ದಾರೆ ಮತ್ತು ರೂ.71,95,584/–ರ ಮೊತ್ತವನ್ನು ಮರುಪಾವತಿಗಾಗಿ ಕೋರಿ ಸಹ ಇವರಲ್ಲಿ ಅರ್ಜಿ ಸಲ್ಲಿಸಿದ್ದಾರೆ | ಮಧ್ಯಸ್ಥಿಕೆದಾರರು, ಚಿತ್ರದುರ್ಗ ಜಿಲ್ಲಾಧಿಕಾರಿಗಳು | ದಿನಾಂಕ: 25.03.2015 ರಂದು ಕಡೆಯದಾಗಿ ಮಾಹಿತಿ ನೀಡಿದೆ. ಪ್ರಕರಣದ ಮುಂದಿನ ಸ್ಥಿತಿಗತಿ ಮಾಹಿತಿಯಿಲ್ಲ. |
| 7 | 2012 | ಎಪಿಪಿ ನಂ. 24/2012 | ಬಿಬಿಎಂಪಿ ಗುತ್ತಿಗೆ ಕಾರ್ಮಿಕರು | ಕನಿಷ್ಠ ವೇತನ ಕಾಯ್ದೆಯ ಅನ್ವಯ ಪ್ರಕರಣ ಹೂಡಲಾಗಿದೆ | ಕನಿಷ್ಠ ವೇತನ ಕಾಯ್ದೆ, 1948ರ ಅನ್ವಯ ನೇಮಕವಾಗಿರುವ ಪ್ರಾಧಿಕಾರದ ನ್ಯಾಯಾಲಯದಲ್ಲಿ | ದಿನಾಂಕ:20.02.2013ರಂದು ಕಡೆಯದಾಗಿ ಮಾಹಿತಿ ನೀಡಲಾಗಿದೆ. ವಿವರಗಳನ್ನು ಸಲ್ಲಿಸುವಂತೆ ಕಂಪನಿಯನ್ನು ಕೇಳಲಾಗಿದೆ. ಪ್ರಸ್ತುತ ಸ್ಥಿತಿಗತಿ ಗೊತ್ತಿರುವುದಿಲ್ಲ. |
| 8 | 2012 | ಐಡಿಎ–2/ ಸಿಆರ್/278/ 2012–13 | ಬಿಬಿಎಂಪಿ ನೌಕರರ ಆಪರೇಟರ್ ಸಂಘ | ಬಿಬಿಎಂಪಿಯ ಗುತ್ತಿಗೆ ಕೆಲಸದಿಂದ ನೌಕರರನ್ನು ತೆಗೆದು ಹಾಕಿರುವ ಬಗ್ಗೆ | ಅಪರ ಕಾರ್ಮಿಕ ಆಯುಕ್ತರು | ಕೊನೆಯದಾಗಿ 28.03.2014 ರಂದು ಪತ್ರ ವ್ಯವಹಾರ ನಡೆಸಲಾಗಿತ್ತು. ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಾಹಿತಿ ಲಭ್ಯವಿಲ್ಲ |
| 9 | 2012 | ಆರ್‌ಎಫ್‌ಎ 1105/2012 | ಸ್ಪೈವೆಲ್ ಡಿಟೆಕ್ಟಿವ್ ಏಜೆನ್ಸಿ, ಬೆಂಗಳೂರು | ಅರ್ಜಿದಾರರು ಜೂನ್ 2008 ರಿಂದ ಆಗಸ್ಟ್ 2009ರವರೆಗೆ ತಮ್ಮ ಬಿಲ್‌ಗಳನ್ನು ಪಾವತಿಸದಿರುವುದಕ್ಕೆ ಮತ್ತು ಬಾಕಿ ವಸೂಲಿಗೆ ಮೊಕದ್ದಮೆ ಹೂಡಿದ್ದಾರೆ. | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ಕೊನೆಯದಾಗಿ 11.09.2013 ರಂದು ಮಾಹಿತಿ ನೀಡಿದೆ. ಪ್ರಕರಣವು ಇತ್ಯರ್ಥವಾಗದೆ ಉಳಿದಿದೆ. |
| 10 | 2013 | ಡಬ್ಲ್ಯೂಪಿ ನಂ.31903/ 2013 | ಮೆ॥ ಸಪ್ತಗಿರಿ ಎಂಟರ್‌ಪ್ರೈಸಸ್, ಬೆಂಗಳೂರು | ಎಲೆಕ್ಟ್ರಾನಿಕ್ ಸಿಟಿಯಲ್ಲಿ 0.75 ಎಕರೆಗಳ ವಿಸ್ತೀರ್ಣದ ಜಮೀನಿನ ಆದೇಶವನ್ನು ರದ್ದುಪಡಿಸಿ–ರುವುದನ್ನು ಪ್ರಶ್ನಿಸಿ ಅರ್ಜಿದಾರರು ರಿಟ್ ಅರ್ಜಿ ಸಲ್ಲಿಸಿರುವರು | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ದಿನಾಂಕ:16.06.2017ರಂದು ಕಡೆಯದಾಗಿ ಮಾಹಿತಿ ನೀಡಲಾಗಿದೆ. ಪ್ರಕರಣವು ಹಾಗೆಯೇ ಉಳಿದಿದೆ |
| | | | | | | |

| ಕ್ರ. ಸಂ. | ಪ್ರಕರಣದ ಅವಧಿ | ಪ್ರಕರಣದ ಸಂಖ್ಯೆ | ಅರ್ಜಿದಾರರ ವಿವರಗಳು | ಪ್ರಕರಣದ ವಿವರ | ಯಾವ ನ್ಯಾಯಾಲಯದಲ್ಲಿ ಉಳಿದಿದೆ | ಷರಾ |
|---|---|---|---|---|---|---|
| 11 | 2013 | ಎಪಿಪಿ2/ 2013 | ಡಿ.ಕೆ. ಕೃಷ್ಣ ಮತ್ತು ಉಮೇಶ್ | ಸಂಬಳ ನೀಡದೆ ಕೆಲಸದಿಂದ ತೆಗೆದುಹಾಕಿರುವಿಕೆ ಬಗ್ಗೆ (ಮಂಡ್ಯದ ಎಂಎಸ್ಐಎಲ್‌ನಲ್ಲಿ ಕೆಲಸ ಮಾಡುತ್ತಿದ್ದರು) | ಕಾರ್ಮಿಕ ನ್ಯಾಯಾಲಯ, ಮಂಡ್ಯ | ಕೊನೆಯದಾಗಿ 26.06.2013 ರಂದು ಪತ್ರ ವ್ಯವಹಾರ ನಡೆಸಲಾಗಿತ್ತು. ಈಗಿನ ಸ್ಥಿತಿಗತಿ ಬಗ್ಗೆ ಮಾಹಿತಿ ಲಭ್ಯವಿಲ್ಲ |
| 12 | 2015 | ಡಬ್ಲ್ಯೂಪಿ ನಂ.11800/ 2015 | ಅಮರೇಶ್ ಟಿ.ಎ. ಕಿಯೋನಿಕ್ಸ್ ತರಬೇತಿ ಕೇಂದ್ರ, ಚಿತ್ರದುರ್ಗ | ವರ್ಗಾವಣೆ ಆದೇಶ ರದ್ದುಗೊಳಿಸಿ ಅರ್ಜಿದಾರರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಿ ಸಂಬಳದ ಬಾಕಿ ಪಾವತಿ ಮಾಡುವಂತೆ ಪ್ರತಿವಾದಿಗೆ ಸೂಚಿಸಿರುವಿಕೆ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ದಿನಾಂಕ:25.07.2017ರಂದು ಕಡೆಯದಾಗಿ ಪತ್ರ ವ್ಯವಹಾರ ನಡೆದಿದೆ. ಪ್ರಕರಣ ಹಾಗೆಯೇ ಉಳಿದಿದೆ. |
| 13 | 2015 | ಡಬ್ಲ್ಯೂ.ಪಿ. 23669/ 2015(ಜಿಎಂ/ ಆರ್ಇಎಸ್) | ಮೆ॥ ಐ.ಆರ್ ಮಲ್ಟಿಮೀಡಿಯ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ | ಎಲೆಕ್ಟ್ರಾನಿಕ್ ಸಿಟಿಯಲ್ಲಿನ ನಿವೇಶನ ಸಂ.27 ಡಿ ಮತ್ತು 27 ಇ ನ ರದ್ದತಿ ಬಗ್ಗೆ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ದಿನಾಂಕ:10.06.2015ರಂದು ಕಡೆಯದಾಗಿ ಪತ್ರ ವ್ಯವಹಾರ ನಡೆದಿದೆ. ಈಗಿನ ಸ್ಥಿತಿಗತಿ ಮಾಹಿತಿ ಇಲ್ಲ. |
| 14 | 2015 | ಡಬ್ಲ್ಯೂ.ಪಿ. 28909/ 2015 | ಸಿಯಂಟ್ ಲಿಮಿಟೆಡ್ (ಇನ್‌ಪೋಟೆಕ್ ಎಂಟರ್‌ಪ್ರೈಸಸ್ ಲಿಮಿಟೆಡ್) | ಎಲೆಕ್ಟ್ರಾನಿಕ್ ಸಿಟಿಯಲ್ಲಿನ ಎರಡು ಎಕರೆ ವಿಸ್ತೀರ್ಣದ ಜಮೀನು ಒಳಗೊಂಡ ನಿವೇಶನ ಸಂ. 110 ಎ ಮತ್ತು 110 ಬಿ ನ ರದ್ದತಿ ಬಗ್ಗೆ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ಕಡೆಯದಾಗಿ ದಿನಾಂಕ: 14.07.2015ರಂದು ಪತ್ರ ವ್ಯವಹಾರ ನಡೆದಿದೆ. ಈಗಿನ ಸ್ಥಿತಿ ಗತಿ ಮಾಹಿತಿ ಲಭ್ಯವಿಲ್ಲ. |
| 15 | 2016 | ಡಬ್ಲ್ಯೂಪಿ 40329/ 2016 (ಎಪಿಎಂಸಿ–ಪಿಐಎಲ್) | ಶ್ರೀ ಮಟ್ಟರ್ ರತ್ನಾಕರ್ ಹೆಗಡೆ, ಉಡುಪಿ | ಕರ್ನಾಟಕ ರಾಜ್ಯದಲ್ಲಿನ ಎಪಿಎಂಸಿಯಲ್ಲಿ ಸಾಫ್ಟ್‌ವೇರ್ ಬಳಕೆ ಪ್ರಶ್ನಿಸಿ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | 27.03.2017ರಂದು ಕಡೆಯದಾಗಿ ಪತ್ರ ವ್ಯವಹಾರ ನಡೆದಿದೆ. ಪ್ರಕರಣ ಹಾಗೆಯೇ ಉಳಿದಿದೆ. |
| 16 | 2015 | ಡಬ್ಲ್ಯೂ.ಪಿ 17418/ 2015 | ಮೆ॥ ಸ್ಟ್ರಾಟಜಿಕ್ ಔಟ್‌ಸೋರ್ಸಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ | ರೂ.8,73,50,097/–ಕ್ಕೆ ಆದೇಶ ಸಂ.: ಪಿಓ ನಂ. ಕೆಎಸ್ಇಡಿಸಿ/ ಸಿಓಎಂಎಂಎಲ್/080/ 2014–15 ದಿನಾಂಕ 31.10.14ರ ರದ್ದತಿಯ ವಿರುದ್ಧ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ಕಡೆಯದಾಗಿ ದಿನಾಂಕ: 01.07.2016ರಂದು ಪತ್ರ ವ್ಯವಹಾರ ನಡೆದಿದೆ ಪ್ರಕರಣ ಹಾಗೆಯೇ ಉಳಿದಿದೆ. |

| ಕ್ರ. ಸಂ. | ಪ್ರಕರಣದ ಅವಧಿ | ಪ್ರಕರಣದ ಸಂಖ್ಯೆ | ಅರ್ಜಿದಾರರ ವಿವರಗಳು | ಪ್ರಕರಣದ ವಿವರ | ಯಾವ ನ್ಯಾಯಾಲಯದಲ್ಲಿ ಉಳಿದಿದೆ | ಷರಾ |
|---|---|---|---|---|---|---|
| 17 | 2016 | ಡಬ್ಲ್ಯೂ.ಪಿ. 56088/ 2016 | ಶ್ರೀ ಬಿ.ಜಿ.ಕುಮಾರ ಸ್ವಾಮಿ ಮೆ॥ ಸಿದ್ದಾರ್ಥ ಇನ್‌ಫೋಟೆಕ್ ಪ್ರೈವೇಟ್ ಲಿಮಿಟೆಡ್ | ಐಸಿಟಿ ಹಂತ–3 ರಲ್ಲಿ ಯೋಜನೆಗಳನ್ನು ಅನುಷ್ಠಾನ ಮಾಡದಿರುವುದು. | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | 31.01.2017 ಕಡೆಯದಾಗಿ ಪತ್ರ ವ್ಯವಹಾರ ನಡೆದಿದೆ. ಪ್ರಕರಣ ಹಾಗೆಯೇ ಉಳಿದಿದೆ. |
| 18 | 2016 | ಡಬ್ಲ್ಯೂ.ಪಿ. 62591/ 2016 | ಶ್ರೀ ಎಸ್.ಎನ್. ಶೇಖರ್ (ಕಿಯೋನಿಕ್ಸ್‌ನ ಮಾಜಿ ನೌಕರ) | ರಜೆ ನಗದು ಪಾವತಿಸದಿರುವುದಕ್ಕೆ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ದಿನಾಂಕ:05.01.2017ರಂದು ಕಡೆಯದಾಗಿ ಪತ್ರ ವ್ಯವಹಾರ ನಡೆದಿದೆ. ಪ್ರಕರಣ ಇತ್ಯರ್ಥವಾಗಿರುವುದಿಲ್ಲ. |
| 19 | 2017 | ಡಬ್ಲ್ಯೂ.ಪಿ 6513/ 2017 | ಎಸಿಸಿಪಿಎಲ್ ತರಬೇತಿ ವಿಭಾಗ (ಆದಿತ್ಯ ಕಾಲ್ ಸೆಂಟರ್ ಪ್ರೈವೇಟ್ ಲಿಮಿಟೆಡ್‌ನ ಒಂದು ಘಟಕ) | ಟೆಂಡರ್ ನಂ.ಕೆ.ಆರ್.ಐಇಎಸ್/ ಇನ್‌ಫ್ರಾ/ಸಿಆರ್–30/2016–17 ಅನ್ವಯ ಕಿಯೋನಿಕ್ಸ್‌ಗೆ ರೂ.1.15ಕೋಟಿಯ ಟೆಂಡರ್ ಹಂಚಿಕೆ ಪ್ರಶ್ನಿಸಿ. | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ದಿನಾಂಕ:15.02.2017ರಂದು ಕಡೆಯದಾಗಿ ಪತ್ರ ವ್ಯವಹಾರ ನಡೆದಿದೆ. ಪ್ರಕರಣ ಇತ್ಯರ್ಥವಾಗದೆ ಉಳಿದಿದೆ. |
| 20 | 2016 | ಡಬ್ಲ್ಯೂಪಿ (ಸಿ)ನಂ./ 41313/ 2016 | ಷಿಹಾಬುದೀನ್.ಕೆ | ವೆಂಡರ್‌ಗಳಿಂದ ಶುಲ್ಕ ವಸೂಲಿ ಮಾಡುವುದು, ಇದು ಒಪ್ಪಂದದ ನಿಯಮ ಮತ್ತು ನಿಬಂಧನೆಗೆ ವಿರುದ್ಧ ಎಂದು ಪ್ರಶ್ನಿಸಿ. | ಕೇರಳ ಉಚ್ಚ ನ್ಯಾಯಾಲಯ, ಎರ್ನಾಕುಲಂ | 30.12.2016ರಂದು ಕಡೆಯದಾಗಿ ಮಾಹಿತಿ ನೀಡಲಾಗಿತ್ತು. ಪ್ರಕರಣ ಇತ್ಯರ್ಥವಾಗದೆ ಉಳಿದಿದೆ. |

**ಇತ್ಯರ್ಥವಾಗದೆ ಉಳಿದಿರುವ ಕಾನೂನು/ ಮಧ್ಯಸ್ಥಿಕೆ ಪ್ರಕರಣಗಳ ವಿವರ**

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದಿಂದ ಹೂಡಿರುವ ಮೊಕದ್ದಮೆಗಳು**

| ಕ್ರ. ಸಂ | ಮೊಕದ್ದಮೆ ಅವಧಿ | ಮೊಕದ್ದಮೆ ಸಂಖ್ಯೆ | ಪಾರ್ಟಿಯ ಹೆಸರು | ಮೊಕದ್ದಮೆಯ ವಿವರ | ಯಾವ ನ್ಯಾಯಾಲಯದಲ್ಲಿ ಉಳಿದುಕೊಂಡಿದೆ | ಷರಾ |
|---|---|---|---|---|---|---|
| 1 | 1996 | ಓ.ಎಸ್.ನಂ. 6522/ 1996 | ಶ್ರೀ ಗೋಪಾಲಕೃಷ್ಣ | ರೂ.4,15,912/–ರ ವಸೂಲಿಗಾಗಿ ಜಾರಿ ಅರ್ಜಿ ಸಲ್ಲಿಸಲಾಗಿದ್ದು, ನಗರ ಸಿವಿಲ್ ನ್ಯಾಯಾಲಯದಿಂದ ತೀರ್ಪು ಪಡೆಯಲಾಗಿದೆ | ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು | ವ್ಯಕ್ತಿಯು ತಲೆಮರೆಸಿ ಕೊಂಡಿದ್ದಾರೆ, ಆದ್ದರಿಂದ ಜಪ್ತಿಗೆ ಸ್ವತ್ತಿನ ವಿವರಗಳನ್ನು ಸಲ್ಲಿಸಲು ಸಾಧ್ಯವಾಗಿಲ್ಲ |
| 2 | 2000 | ಎಪಿಪಿ ನಂ. 2322/ 2014 ಕಂಪನಿ ಅರ್ಜಿ ನಂ. 135/2000 ರಲ್ಲಿ | ಮೆ॥ ಆ್ಯಂಕೊ ಕಮ್ಯುನಿಕೇಶನ್ ಲಿ.ನ ಅಧಿಕೃತ ಪರಿಸಮಾಪಕರು | ಸಿಎ ನಂ.689/2004 ಅನ್ನು ರದ್ದುಪಡಿಸಿ ಮಾನ್ಯ ಕಂಪನಿ ನ್ಯಾಯಮೂರ್ತಿಯವರು ಹೊರಡಿಸಿದ್ದ ದಿನಾಂಕ : 26.08.2004ರ ಆದೇಶವನ್ನು ಸ್ಥಗಿತಗೊಳಿಸಲು. | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ದಿನಾಂಕ: 06.04.2017 ರಂದು ಕೊನೆಯದಾಗಿ ಮಾಹಿತಿ ನೀಡಲಾಗಿತ್ತು. ಪ್ರಕರಣ ಹಾಗೇ ಉಳಿದಿದೆ. |

| ಕ್ರ. ಸಂ. | ಮೊಕದ್ದಮೆ ಅವಧಿ | ಮೊಕದ್ದಮೆ ಸಂಖ್ಯೆ | ಪಾರ್ಟಿಯ ಹೆಸರು | ಮೊಕದ್ದಮೆಯ ವಿವರ | ಯಾವ ನ್ಯಾಯಾಲಯದಲ್ಲಿ ಉಳಿದುಕೊಂಡಿದೆ | ಷರಾ |
|---|---|---|---|---|---|---|
| 3 | 2009 | ಓ.ಎಸ್.ನಂ. 67/2009 (ಇಎಕ್ಸ್/ 777/2010) | ಮೆ॥ ರಾಯಲ್ ಆನ್‌ಲೈನ್ ಸಾಫ್ಟ್‌ವೇರ್ ಎನೇಬಲ್ಡ್ ಸರ್ವೀಸಸ್, ಮೈಸೂರು | ಮೈಸೂರು ಷೆಡ್‌ನ ಬಾಡಿಗೆ ಬಾಕಿಗಳ ಬಗ್ಗೆ ಸಂಸ್ಥೆ ವಿರುದ್ಧ ಜಾರಿ ಅರ್ಜಿ ಸಲ್ಲಿಸಲಾಗಿದೆ | ಪ್ರಧಾನ ಸಿವಿಲ್ ನ್ಯಾಯಾಲಯ, ಮೈಸೂರು | 01.07.2017ರಂದು ಕಡೆಯ ಮಾಹಿತಿ ನೀಡಿದೆ. ಪ್ರಕರಣ ಪ್ರಗತಿಯಲ್ಲಿದೆ. |
| 4 | 2011 | ಎಎಸ್ ನಂ. 67/2011 | ಮೆ॥ ಡೆಟಾಟಾಕ್ ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ | ವ್ಯಕ್ತಿಯು ಹಕ್ಕು ಕೇಳಿದ ಮೊತ್ತದ ಸಂಬಂಧ ಕಿಯೋನಿಕ್ಸ್ ವಿರುದ್ಧದ ಮಧ್ಯಸ್ಥಿಕೆದಾರರ ತೀರ್ಪನ್ನು ಪ್ರಶ್ನಿಸಲಾಗಿದೆ | ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು | ಈಗಿನ ಸ್ಥಿತಿಗತಿ ಮಾಹಿತಿ ಲಭ್ಯವಿಲ್ಲ. |
| 5 | 2013 | ಮೊಕದ್ದಮೆ ಸಂ.14/2013 (ಇಎಕ್ಸ್/ 933/2004) | ಮೆ॥ ಸಫಲ್ ಎಲೆಕ್ಟ್ರಾನಿಕ್ಸ್ ಅಂಡ್ ಎಲೆಕ್ಟ್ರಿಕಲ್ಸ್ ಕಂಪನಿ, ಮಂಗಳೂರು | ರೂ.56,02,393/–ರ ಮೊತ್ತದ ವಸೂಲಿಗಾಗಿ ಜಾರಿ ಮೊಕದ್ದಮೆ ಹೂಡಲಾಗಿದೆ | ಘನ 2ನೇ ಅಪರ ಹಿರಿಯ ಸಿವಿಲ್ ನ್ಯಾಯ ಮೂರ್ತಿಯವರ ನ್ಯಾಯಾಲಯ, ಮಂಗಳೂರು | ಕಡೆಯದಾಗಿ ದಿನಾಂಕ: 13.07.2016ರಂದು ಪತ್ರ ವ್ಯವಹಾರ ನಡೆದಿದೆ. ಪ್ರಕರಣ ಹಾಗೆಯೇ ಉಳಿದಿದೆ. |
| 6 | 2014 | ಡಬ್ಲ್ಯೂಬಿ ನಂ.423 (ಎಪಿ)/ 2014 (ಎಂಆರ್‌ಬಿ) ಉಲ್ಲೇಖ ಸಂ.8/2015 | ಅರುಣಾಚಲ ಪ್ರದೇಶ ರಾಜ್ಯ ಮತ್ತು ಇತರರು | ಒಪ್ಪಂದದ ನಿಯಮಗಳ ಅನುಸಾರ ಒಪ್ಪಿಗೆಯಾದ ಹಣ ಪಾವತಿ ಮಾಡಲು ವಿಫಲವಾಗಿರುವ ಬಗ್ಗೆ | ಮಧ್ಯಸ್ಥಿಕೆ ಸಂಧಾನದಲ್ಲಿದೆ | ಪ್ರಕರಣ ಕಡೆಯದಾಗಿ 19.07.2017ರಂದು ಮಾಹಿತಿ ಬಂದಿದೆ. |
| 7 | 2016 | ಆರ್‌ಎಫ್‌ಎ ನಂ.1012/ 2016 | ಸ್ಟೈವೆಲ್ ಸೆಕ್ಯೂರಿಟಿ ಏಜೆನ್ಸಿ ಬೆಂಗಳೂರು. | ಕಿಯೋನಿಕ್ಸ್ ಪರವಾಗಿ ತೀರ್ಪಾಗಿರುವ ರೂ.2,89,842/– ಮೊತ್ತ ವಸೂಲಿಗೆ ದಾವೆ ಹೂಡಿದೆ. ಇದನ್ನು ಉಚ್ಚ ನ್ಯಾಯಾಲಯ ದಲ್ಲಿ ಪ್ರಶ್ನಿಸಲಾಗಿದೆ. | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | 21.07.2017ರಂದು ಕಡೆಯ ಮಾಹಿತಿ ತಿಳಿಸಿದೆ. ಪ್ರಕರಣ ಇತ್ಯರ್ಥವಾಗದೆ ಉಳಿದಿದೆ. |
| 8 | 2017 | ಸಿವಿಲ್ ಕಂಟೆಂಪ್ಟ್ ಅರ್ಜಿ ನಂ. 1009/2017 | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಕಳೆದುಹೋಗಿರುವ ಚೆಕ್‌ಗೆ ಬದಲಾಗಿ ರೂ.17,79,036/–ರ ಮೊತ್ತಕ್ಕೆ ಹೊಸ ಚೆಕ್ ನೀಡದಿರುವ ಬಗ್ಗೆ | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು | ಕಡೆಯದಾಗಿ 12.07.2017 ರಂದು ಪತ್ರ ವ್ಯವಹಾರ ನಡೆದಿದೆ. ಪ್ರಕರಣ ಹಾಗೆಯೇ ಉಳಿದಿದೆ. |

ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಸಂಸ್ಥೆಯ ನೋಂದಣಿ ಸಂ. : 010372ಎಸ್

ಸಹಿ/–
ಕೆ. ಬಾಲಾಜಿ
ಪಾಲುದಾರರು
ಸದಸ್ಯತ್ವ ಸಂ.: 207783

ಸ್ಥಳ : ಬೆಂಗಳೂರು
ದಿನಾಂಕ : 29.08.2017

**ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್**
**ಲೆಕ್ಕ ಪರಿಶೋಧಕರು**

**ನಂ. 27, ಸರ್ವೀಸ್ ರಸ್ತೆ (2 ಮತ್ತು 3ನೇ ಕ್ರಾಸ್ ನಡುವೆ),**
**ಪಂಪಮಹಾಕವಿ ರಸ್ತೆ, ಶಂಕರಪುರಂ, ಬಸವನಗುಡಿ,**
**ಬೆಂಗಳೂರು–560 004. ದೂ: 080–43464700**
**ಇ–ಮೇಲ್: ssb@yukthi.co.in**

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ ಹಣಕಾಸಿನ ವಿವರಣೆಗಳ ಬಗ್ಗೆ ಸ್ವತಂತ್ರ ಲೆಕ್ಕಪರಿಶೋಧಕರ ಸಮ ದಿನಾಂಕದ ವರದಿಗೆ ಅನುಬಂಧ–ಸಿ**

**ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪ್ರಕರಣ 143ರ ಉಪ ಪ್ರಕರಣ 3ರ ಕಲಂ(1)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿ**

ನಾವು ದಿನಾಂಕ:31ನೇ ಮಾರ್ಚ್ 2017ರಂದು ಇದ್ದಂತೆ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ (**"ಕಂಪನಿ"**) ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಇದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಹಣಕಾಸು ವಿವರಗಳ ನಮ್ಮ ಲೆಕ್ಕಪರಿಶೋಧನೆ ಜೊತೆಗೆ ಲೆಕ್ಕಪರಿಶೋಧನೆ ಮಾಡಿದ್ದೇವೆ.

**ಆಂತರಿಕ ಹಣಕಾಸಿನ ನಿಯಂತ್ರಕಗಳ ಬಗ್ಗೆ ಆಡಳಿತ ಮಂಡಳಿಯ ಹೊಣೆಗಾರಿಕೆಗಳು:**

ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಪರಿಶೋಧನೆ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಘಟನಾಂಶಗಳನ್ನು ಪರಿಗಣಿಸಿ ಕಂಪನಿಯು ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣಗಳ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸುವ ಮತ್ತು ನಿರ್ವಹಣೆ ಮಾಡುವ ಜವಾಬ್ದಾರಿ ಕಂಪನಿಯ ಆಡಳಿತ ಮಂಡಳಿಯದಾಗಿರುತ್ತದೆ. ಕಂಪನಿಗಳ ಅಧಿನಿಯಮ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಪರಿಪಾಲನೆ, ಅದರ ಆಸ್ತಿಗಳ ಸಂರಕ್ಷಣೆ, ವಂಚನೆ ಮತ್ತು ತಪ್ಪುಗಳ ತಡೆ ಮತ್ತು ಪತ್ತೆ ಹಚ್ಚುವುದು, ಲೆಕ್ಕಪತ್ರಗಳ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ಸಕಾಲಿಕವಾಗಿ ವಿಶ್ವಾಸಾರ್ಹ ಹಣಕಾಸಿನ ಮಾಹಿತಿ ಸಿದ್ಧಪಡಿಸುವಿಕೆ ಒಳಗೊಂಡಂತೆ ಕಂಪನಿಯ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವ ಬಗ್ಗೆ ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುವ ಪರಿಪೂರ್ಣವಾದ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಮಾಡುವುದೂ ಸಹ ಈ ಜವಾಬ್ದಾರಿಯಲ್ಲಿ ಒಳಗೊಂಡಿರುತ್ತವೆ.

**ಲೆಕ್ಕಪರಿಶೋಧಕರ ಜವಾಬ್ದಾರಿಗಳು:**

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಅನ್ವಯ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಕಗಳ ಪರಿಶೋಧನೆ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿ ಮತ್ತು ಲೆಕ್ಕಪರಿಶೋಧನೆ ಗುಣಮಟ್ಟಗಳಿಗೆ ಅನುಸಾರವಾಗಿ ಆಂತರಿಕ ಹಣಕಾಸಿನ ನಿಯಂತ್ರಕಗಳ ಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ನಡೆಸಿದ್ದೇವೆ. ಸದರಿ ಮಾನದಂಡಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಯಂತೆ ನಾವು ಅಗತ್ಯ ನೈತಿಕ ಅಂಶಗಳನ್ನು ಅನುಸರಿಸಬೇಕಾಗಿದೆ ಹಾಗೂ ಹಣಕಾಸಿನ ವರದಿಗಾರಿಕೆಯ ಬಗ್ಗೆ ಸೂಕ್ತವಾದ ಆಂತರಿಕ ನಿಯಂತ್ರಣಗಳನ್ನು ರೂಪಿಸಲಾಗಿದೆಯೇ ಮತ್ತು ನಿರ್ವಹಣೆ ಮಾಡಲಾಗಿದೆಯೇ ಎಂಬುವ ಬಗ್ಗೆ ಸಕಾರಣ ಭರವಸೆ ಪಡೆಯಲು ನಾವು ಯೋಜನೆ ಮಾಡಬೇಕು ಮತ್ತು ಕಾರ್ಯಾಚರಣೆ ನಡೆಸಬೇಕು ಹಾಗೂ ಎಲ್ಲಾ ಸಾಮಗ್ರಿಗಳ ಸಂಬಂಧದಲ್ಲಿ ಈ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿರುವವೇ ಎಂಬುದನ್ನು ನಾವು ಗಮನಿಸಬೇಕು.

ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಸಾಕಷ್ಟು ಪ್ರಮಾಣದಲ್ಲಿ ಇರುವುದೇ ಮತ್ತು ಅದು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವುದೇ ಎಂಬುದರ ಬಗ್ಗೆ ಪರಿಶೋಧನಾ ಪುರಾವೆ ಪಡೆದುಕೊಳ್ಳಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಾವು ಪರಿಶೋಧನೆ ಮಾಡುವ ಕಾರ್ಯದಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಒಂದು ಅರ್ಥವಂತಿಕೆ ಅಭಿಪ್ರಾಯ ಪಡೆಯುವುದು, ಇರುವ ವಾಸ್ತವಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ಮತ್ತು ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ಪರೀಕ್ಷೆ ನಡೆಸುವುದು ಮತ್ತು ವಿನ್ಯಾಸ

ಹಾಗೂ ಕಾರ್ಯಾಚರಣೆ ಪರಿಣಾಮವನ್ನು ಮೌಲ್ಯಮಾಪನ ಮಾಡುವ ಕಾರ್ಯವೂ ಒಳಗೊಂಡಿರುವುದು. ಆಯ್ಕೆ ಮಾಡಿಕೊಂಡ ಕ್ರಮಾವಳಿಗಳು ವಂಚನೆ ಅಥವಾ ತಪ್ಪಿನಿಂದಾಗಿ ಹಣಕಾಸಿನ ವಿವರಣೆಗಳಲ್ಲಿನ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯವನ್ನು ನಿರ್ಧರಣೆ ಮಾಡುವುದು ಸೇರಿದಂತೆ ಲೆಕ್ಕಪರಿಶೋಧಕರ ತೀರ್ಮಾನದ ಮೇಲೆ ಅವಲಂಬಿತವಾಗಿರುವುದು.

ಹಣಕಾಸಿನ ವರದಿಗಾರಿಕೆಯ ಸಂಬಂಧ ಕಂಪನಿ ಹೊಂದಿರುವ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯ ತಿಳಿಸುವುದಕ್ಕೆ ಆಧಾರವಾಗಿ ನಾವು ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳು ಸಾಕಷ್ಟು ಪ್ರಮಾಣದಲ್ಲಿವೆ ಮತ್ತು ಸೂಕ್ತವಾಗಿವೆ ಎಂಬುದಾಗಿ ನಾವು ನಂಬಿದ್ದೇವೆ.

**ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಕಗಳು ಎಂಬುದರ ಅರ್ಥ:**

ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣವು, ಸಾಮಾನ್ಯವಾಗಿ ಅಂಗೀಕರಿಸಲಾಗಿರುವ ಲೆಕ್ಕಗಾರಿಕೆ ತತ್ವಗಳ ಅನುಸಾರ ಹಣಕಾಸಿನ ವರದಿಗಾರಿಕೆ ವಿಶ್ವಾಸಾರ್ಹತೆ ವಿಚಾರವಾಗಿ ಸೂಕ್ತವಾದ ಭರವಸೆ ಒದಗಿಸಲು ಮತ್ತು ಹೊರಗಿನ ಉದ್ದೇಶಕ್ಕಾಗಿ ಹಣಕಾಸಿನ ವಿವರಣೆಗಳನ್ನು ಸಿದ್ಧಪಡಿಸಲು ವಿನ್ಯಾಸಗೊಳಿಸಿರುವ ಒಂದು ಕ್ರಿಯೆ. ಒಂದು ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಈ ಕೆಳಕಂಡ ನೀತಿಗಳು ಮತ್ತು ಕ್ರಮಾವಳಿಗಳನ್ನು ಒಳಗೊಂಡಿರುವುದು:

1. ಕಂಪನಿಯ ವ್ಯವಹಾರಗಳು ಮತ್ತು ಸ್ವತ್ತುಗಳ ಸಜ್ಜುಗೊಳಿಸುವ ಬಗ್ಗೆ ನಿಖರವಾಗಿ ಮತ್ತು ನ್ಯಾಯಯುತವಾಗಿ ಗೋಚರವಾಗುವಂತೆ, ಸೂಕ್ತವಾದ ವಿವರಗಳನ್ನು ಒಳಗೊಂಡಂತೆ ದಾಖಲೆಗಳನ್ನು ನಿರ್ವಹಣೆ ಮಾಡುವುದು.
2. ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕಪತ್ರದ ನೀತಿಗಳ ಅನುಸಾರ ಹಣಕಾಸಿನ ವಿವರ ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ, ಮತ್ತು ಕಂಪನಿಯ ಸ್ವೀಕರಣೆಗಳು ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರಿಂದ ಪಡೆದ ಅಧಿಕಾರಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ಒದಗಿಸುವುದು; ಮತ್ತು
3. ಹಣಕಾಸಿನ ವಿವರಣೆಗಳ ಮೇಲೆ ವಾಸ್ತವಿಕ ಪರಿಣಾಮ ಉಂಟು ಮಾಡುವ, ಕಂಪನಿಯ ಸ್ವತ್ತುಗಳ ಅನಧಿಕೃತ ಪಡೆಯುವಿಕೆ, ಬಳಕೆ ಮಾಡುವುದು, ಅಥವಾ ವಿಲೇವಾರಿ ಮಾಡುವುದನ್ನು ತಡೆಯುವುದು ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವ ಬಗ್ಗೆ ಸೂಕ್ತವಾದ ಭರವಸೆ ಒದಗಿಸುವುದು.

**ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಪರಿಮಿತಿಗಳು:**

ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿ ಅಂತರ್ಗತ ಪರಿಮಿತಿಗಳಿರುವ ಕಾರಣ ಮೋಸದ ಒಳಸಂಚು ಅಥವಾ ಅಸಮರ್ಪಕ ನಿರ್ವಹಣೆಯು ನಿಯಂತ್ರಣಗಳ ಮೇಲೆ ಸವಾರಿ ಮಾಡುವ ಅಥವಾ ಅವುಗಳನ್ನು ಹಿಂದಿಕ್ಕುವ ಸಾಧ್ಯತೆ ಉಂಟಾಗುತ್ತದೆ. ವಂಚನೆ ಅಥವಾ ತಪ್ಪಿನಿಂದಾಗಿ ವಾಸ್ತವಿಕ ದುರುಪಯೋಗ ಉಂಟಾಗಬಹುದು. ಆದರೂ ಇವುಗಳನ್ನು ಪತ್ತೆ ಹಚ್ಚಲು ಆಗುವುದಿಲ್ಲ. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸುವುದು ಪರಿಸ್ಥಿತಿಯ ಬದಲಾವಣೆ ಕಾರಣದಿಂದ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಿಸುವ ಮಟ್ಟವು ಕ್ಷೀಣಿಸುವುದರಿಂದ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಕೊರತೆಯ ಅಪಾಯಕ್ಕೆ ಒಳಗಾಗುವುದು.

**ಅರ್ಹತೆ ಹೊಂದಿದ ಅಭಿಪ್ರಾಯ:**

ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆ ಅನುಸಾರ ಮತ್ತು ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ದಿನಾಂಕ 31ನೇ ಮಾರ್ಚ್ 2017ರಂದು ಇದ್ದಂತೆ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ಗುರುತಿಸಲಾಗಿದೆ:

ಎ) ಕಂಪನಿಯು ತನ್ನ ವ್ಯವಹಾರವನ್ನು ಮಂಡಳಿಯ ನಿರ್ದೇಶನಗಳು ಮತ್ತು ಕಚೇರಿ ಆದೇಶಗಳ ಅನುಸಾರ ನಡೆಸುತ್ತಿದ್ದರೂ, ಭಾರತದ ಚಾರ್ಟಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಪರಿಶೋಧನೆ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಗಳಲ್ಲಿ ತಿಳಿಸಿರುವಂತೆ ಗುಣಮಟ್ಟದ ಕಾರ್ಯಾಚರಣೆ ಕ್ರಮಾವಳಿಗಳ (ಎಸ್‌ಒಪಿಗಳು) ಪ್ರಮುಖ ಕೈಪಿಡಿಗಳ ಮತ್ತು ಕಾರ್ಯ ಚಟುವಟಿಕೆಗಳ ಆಂತರಿಕ ಹಣಕಾಸು ನಿಯಂತ್ರಣಗಳ ಅಂಶಗಳನ್ನು ದಾಖಲೀಕರಣ ಮಾಡಿರುವುದಿಲ್ಲ.

ಬಿ) ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆಗೆ ಭೌತಿಕ ನಿಯಂತ್ರಣಗಳನ್ನು ವಿನ್ಯಾಸಗೊಳಿಸುವ ಬಗ್ಗೆ ಯಾವುದೇ ನೀತಿಯನ್ನು ರೂಪಿಸಿರುವುದಿಲ್ಲ. ಇದರಿಂದ ಲೆಕ್ಕಪತ್ರದ ಪುಸ್ತಕದಲ್ಲಿ ಸ್ಥಿರಾಸ್ತಿಗಳ ಮೌಲ್ಯವನ್ನು ತಪ್ಪಾಗಿ ತಿಳಿಸುವ ಸಂಭವ ಹೆಚ್ಚಾಗಿರುತ್ತದೆ.

ಸಿ) ಬಾಡಿಗೆ ಮತ್ತು ಮಾನವ ಶಕ್ತಿ ಒಪ್ಪಂದದ ನವೀಕರಣ ಮತ್ತು ಫ್ರಾಂಚೈಸಿ ಪ್ರಮಾಣ ಪತ್ರಗಳ ನವೀಕರಣ/ನೀಡಿಕೆ ಮೇಲಿನ ನಿಯಂತ್ರಣಗಳ ಮೇಲುಸ್ತುವಾರಿಯ ಸ್ವರೂಪವು ಸಾಕಷ್ಟಿಲ್ಲದಿರುವುದರಿಂದ, ಅಂತಿಮ ಸಂಗ್ರಹಣೆಯ ಖಚಿತತೆ ಇಲ್ಲದೆ, ಲೆಕ್ಕಗಾರಿಕೆ ನೀತಿಯ ಆಧಾರದ ಮೇಲೆ ಆದಾಯ ಲೆಕ್ಕ ಮಾಡಲಾಗಿದೆ.

ಡಿ) ಪರಿಣಾಮಕಾರಿ ನಿಯಂತ್ರಣಕ್ಕಾಗಿ ಅನುದಾನವನ್ನು ಬಳಕೆ ಮಾಡುವಾಗ ನೀತಿಯ ಅನುಸಾರ ಬಳಕೆಯ ಮಾರ್ಗೋಪಾಯವನ್ನು ಸೃಷ್ಟಿಸುವುದರಲ್ಲಿ ವಿಫಲವಾಗಿದೆ.

ಇ) ಸಂಬಂಧಪಟ್ಟ ಲೆಕ್ಕಗಾರಿಕೆ ಅವಧಿಯ ವ್ಯವಹಾರಗಳನ್ನು ಸಕಾಲಿಕವಾಗಿ ತಿಳಿಯಲು ಮತ್ತು ದಾಖಲಿಸಲು ಮಾಹಿತಿ ವ್ಯವಸ್ಥೆಯಲ್ಲಿ ಸಾಕಷ್ಟು ಮಟ್ಟದ ಅನುಕೂಲವಿರುವುದಿಲ್ಲ.

ಎಫ್) ಹಿಂದಿನ ಅವಧಿಯ ಪ್ರಾರಂಭಿಕ ಶಿಲ್ಕುಗಳನ್ನು ಪರಿಶೀಲಿಸಲು, ಆದಾಯ ಗಣನೆ ಮತ್ತು ಖರ್ಚುಗಳ ವ್ಯವಸ್ಥೆ ಪರಿಶೀಲನೆಗೆ ಕಂಪನಿಯು ಮೇಲುಸ್ತುವಾರಿ ನಿಯಂತ್ರಣಗಳನ್ನು ರೂಪಿಸಿರುವುದಿಲ್ಲ.

ಜಿ) ವಿದ್ಯಾರ್ಥಿಗಳಿಗಾಗಿ ನಡೆಸುವ ವಿವಿಧ ತರಬೇತಿ ಕೇಂದ್ರಗಳಿಗೆ ಸಂಬಂಧಿಸಿದಂತೆ ಪಡೆಯಬೇಕಿರುವ ಮೊತ್ತದ ಬಗ್ಗೆ ನಿರ್ಧರಣೆ ಮಾಡಲು ಕಂಪನಿಯು ಸಾಕಷ್ಟು ದಾಖಲೆಗಳನ್ನು ಹೊಂದಿರುವುದಿಲ್ಲ.

ಹೆಚ್) ಗಮನಿಸಿರುವುದೇನೆಂದರೆ ಕಂಪನಿ ಮತ್ತು ವೆಂಡರುಗಳ ನಡುವೆ ಮಾಡಿಕೊಂಡ "ಒಪ್ಪಂದ ಪತ್ರದಲ್ಲಿ" ವೆಂಡರು ಕಂಪನಿ ಪರವಾಗಿ ಮತ್ತು ಕಂಪನಿ ಗ್ರಾಹಕರ ಪರವಾಗಿ ಬ್ಯಾಂಕ್ ಗ್ಯಾರಂಟಿ ತೆಗೆದುಕೊಳ್ಳಬೇಕು. ಆದರೂ ಕಂಪನಿಯು ಅಂತಿಮ ಗ್ರಾಹಕರ ಪರವಾಗಿ ಬ್ಯಾಂಕ್ ಗ್ಯಾರಂಟಿ ಒದಗಿಸುವಂತೆ ವೆಂಡರ್‌ಗೆ ಸೂಚಿಸುವ ರೂಢಿಯನ್ನು ಬೆಳೆಸಿಕೊಂಡಿದೆ. ಇದು ಅವರು ಮಾಡಿಕೊಂಡಿರುವ "ಒಪ್ಪಂದ ಪತ್ರದ" ಅನುಸಾರ ಇರುವುದಿಲ್ಲ.

'ವಾಸ್ತವಿಕ ದೌರ್ಬಲ್ಯವು' ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಕೊರತೆ, ಅಥವಾ ಕೊರತೆಯ ಸಂಯೋಜನೆಯಾಗಿರುತ್ತದೆ. ಇದರಿಂದಾಗಿ ಕಂಪನಿಯ ವಾರ್ಷಿಕ ಹಣಕಾಸಿನ ವಿವರಣೆಯಲ್ಲಿನ ತಪ್ಪು ಹೇಳಿಕೆಯ ಸಾಧ್ಯತೆಯನ್ನು ಸಕಾಲಿಕ ಆಧಾರದ ಮೇಲೆ ತಡೆಗಟ್ಟುವುದಕ್ಕಾಗಲಿ ಅಥವಾ ಪತ್ತೆ ಹಚ್ಚುವುದಕ್ಕಾಗಲಿ ಸಾಧ್ಯವಾಗದು.

ನಮ್ಮ ಅಭಿಪ್ರಾಯದ ಪ್ರಕಾರ, ನಿಯಂತ್ರಣ ವ್ಯವಸ್ಥೆಯ ಗುರಿಯನ್ನು ಸಾಧಿಸುವ ಬಗ್ಗೆ ಮೇಲೆ ವಿವರಿಸಿರುವ ವಾಸ್ತವಿಕ ದೌರ್ಬಲ್ಯದ ಸಾಧ್ಯವಿರುವ ಪರಿಣಾಮ ಹೊರತಾಗಿ ಕಂಪನಿಯು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆ ಸಾಕಷ್ಟು ಪ್ರಮಾಣದಲ್ಲಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಅಂತಹ ಆಂತರಿಕ ಹಣಕಾಸು ನಿಯಂತ್ರಣಗಳು ದಿನಾಂಕ 31ನೇ ಮಾರ್ಚ್, 2017ರಿಂದ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿವೆ, ಭಾರತದ ಚಾರ್ಟಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿಯು ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸು ನಿಯಂತ್ರಣದ ಆಧಾರದ ಮೇಲೆ ಇವು ಕಾರ್ಯಾಚರಣೆಯಲ್ಲಿವೆ.

ಕಂಪನಿಯ ದಿನಾಂಕ 31ನೇ ಮಾರ್ಚ್ 2017ರ ಹಣಕಾಸಿನ ವಿವರಣೆಗಳು ನಮ್ಮ ಲೆಕ್ಕಪರಿಶೋಧನೆಯಲ್ಲಿ ಅನ್ವಯಿಸಿರುವ ಲೆಕ್ಕಪರಿಶೋಧನೆಯ ಸ್ವರೂಪ, ಸಮಯ ಮತ್ತು ಪ್ರಮಾಣ ನಿರ್ಧರಣೆಯಲ್ಲಿ ಮೇಲೆ ಗುರುತಿಸಿರುವ ಮತ್ತು ವರದಿ ಮಾಡಿರುವ ವಾಸ್ತವಿಕ ದೌರ್ಬಲ್ಯಗಳನ್ನು ನಾವು ಪರಿಗಣಿಸಿದ್ದೇವೆ. ಸದರಿ ವಾಸ್ತವಿಕ ದೌರ್ಬಲ್ಯವು ಕಂಪನಿಯ ಹಣಕಾಸಿನ ವಿವರಣೆಗಳ ಮೇಲಿನ ನಮ್ಮ ಅಭಿಪ್ರಾಯದ ಮೇಲೆ ಪರಿಣಾಮ ಬೀರುವುದಿಲ್ಲ.

ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್
ಲೆಕ್ಕಪರಿಶೋಧಕರು ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ: 010372S
ಸಹಿ/–
ಕೆ.ಬಾಲಾಜಿ,
ಪಾಲುದಾರರು
ಸದಸ್ಯತ್ವ ಸಂಖ್ಯೆ: 207783

ಸ್ಥಳ : ಬೆಂಗಳೂರು
ದಿನಾಂಕ: 29.08.2017

## ಹಣಕಾಸಿನ ವರ್ಷ 2016–17ರ ಲೆಕ್ಕಗಳ ಭಾಗವಾಗಿರುವ ಟಿಪ್ಪಣಿಗಳು

### ಹಿನ್ನೆಲೆ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ಕಂಪನಿಯು ಸಾರ್ವಜನಿಕ ನಿಯಮಿತ ಕಂಪನಿಯಾಗಿ ಸೆಪ್ಟೆಂಬರ್ 1976ರಲ್ಲಿ ಸ್ಥಾಪನೆಯಾಗಿದೆ. ರಾಜ್ಯದಲ್ಲಿ ವಿದ್ಯುನ್ಮಾನ ಕೈಗಾರಿಕೆ ಅಭಿವೃದ್ಧಿ ಪ್ರವರ್ಧನೆ ಮಾಡುವುದು, ವಿದ್ಯುನ್ಮಾನ ಕೈಗಾರಿಕೆಗಳ ತ್ವರಿತ ಪ್ರಗತಿಗೆ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸುವುದು ಕಂಪನಿಯ ಧ್ಯೇಯವಾಗಿರುವುದು. ಈಗ ಸೌಲಭ್ಯ ವ್ಯವಸ್ಥೆಗಾರರ ಕಾರ್ಯನಿರ್ವಹಣೆ ಜವಾಬ್ದಾರಿ ಹೊತ್ತಿದೆ. ರಾಜ್ಯದಲ್ಲಿ ವಿದ್ಯುನ್ಮಾನ ಮತ್ತು ಐಟಿ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೇರಕವಾಗಿ ಕಾರ್ಯನಿರ್ವಹಿಸುವುದು.

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ ಚಟುವಟಿಕೆಗಳು**

**1. ಐಟಿ ಶಿಕ್ಷಣ**

ಕಂಪನಿಯು ಕರ್ನಾಟಕದಾದ್ಯಂತ ಸರಿಸುಮಾರು 209 ಫ್ರಾಂಚೈಸೀ ತರಬೇತಿ ಕೇಂದ್ರಗಳ ಜಾಲಬಂಧವನ್ನು ಹೊಂದಿರುವುದು.

**2. ಮೂಲಭೂತ ಸೌಕರ್ಯ ಸೇವೆಗಳು :**

ಕಿಯೋನಿಕ್ಸ್, ಬೆಂಗಳೂರಿನ ಹೊಸೂರು ರಸ್ತೆಯಲ್ಲಿ 332 ಎಕರೆಗಳ ವಿಶಾಲವಾದ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ಸ್ ಸಿಟಿಯನ್ನು ನಿರ್ಮಿಸಿದೆ. ಇಂದು ಈ ಎಲೆಕ್ಟ್ರಾನಿಕ್ಸ್ ಸಿಟಿ ಮಾಹಿತಿ ತಂತ್ರಜ್ಞಾನ ಚಟುವಟಿಕೆಗಳಿಗೆ ಪ್ರಮುಖ ಕೇಂದ್ರವಾಗಿದೆ. ಕಂಪನಿಯು ರಾಜ್ಯದಲ್ಲಿನ ಎರಡನೇ ದರ್ಜೆ ನಗರಗಳಲ್ಲಿ ಐಟಿ ಪಾರ್ಕ್‌ಗಳನ್ನು ಸ್ಥಾಪಿಸುವ ಕಾರ್ಯವನ್ನು ಸಹ ಕೈಗೊಂಡಿದೆ.

**3. ಐಟಿ ಸೇವೆಗಳು :**

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗೆ ಐಟಿ ತಂತ್ರಾಂಶ ಒದಗಿಸುವಿಕೆ ಮತ್ತು ಪ್ರೋಗ್ರಾಮಿಂಗ್‌ನ ವಿವಿಧ ಯೋಜನೆಗಳನ್ನು ಕೈಗೊಂಡಿದೆ. ಕಿಯೋನಿಕ್ಸ್ ಸರ್ಕಾರದ ವಿವಿಧ ಸಂಸ್ಥೆಗಳಿಗೆ ಕಂಪ್ಯೂಟರ್ ಹಾರ್ಡ್‌ವೇರ್, ತಂತ್ರಾಂಶ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ಮಾರಾಟ ಮಾಡುತ್ತಿದೆ. ಇದಲ್ಲದೇ ಕಿಯೋನಿಕ್ಸ್ ಸರ್ಕಾರದ ಸಂಸ್ಥೆಗಳಿಗೆ ಇ–ಟೆಂಡರಿಂಗ್ ಪರಿಹಾರ 'ಟೆಂಡರ್ ವಿಜಾರ್ಡ್' ಅನ್ನು ಒದಗಿಸುತ್ತಿದೆ. ಅವರ ಉತ್ಪನ್ನಗಳು ಮತ್ತು ಸೇವೆಗಳ ಮಾರಾಟಕ್ಕಾಗಿ ಕಿಯೋನಿಕ್ಸ್ ವಿವಿಧ ಏಜೆನ್ಸಿಗಳ ಜೊತೆ ಒಪ್ಪಂದ ಮಾಡಿಕೊಂಡಿದೆ.

ನೆಟ್‌ವರ್ಕಿಂಗ್, ವೆಬ್ ಕ್ರಿಯೇಶನ್, ತಂತ್ರಾಂಶ ಅಭಿವೃದ್ಧಿ ಮತ್ತು ಗಣಕೀಕರಣ ಯೋಜನೆಗಳ ಕ್ಷೇತ್ರದಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಗೆ ಯೋಜನಾ ಅನುಷ್ಠಾನ ವಿಚಾರದಲ್ಲಿ ಸಲಹೆ ನೀಡಿಕೆಯ ಆಂತರಿಕ ಸಾಮರ್ಥ್ಯತೆಯನ್ನು ಅಭಿವೃದ್ಧಿಪಡಿಸಿಕೊಂಡಿದೆ.

**4. ಮಾನವ ಸಂಪನ್ಮೂಲ ಪೂರೈಕೆ ಸೇವೆಗಳು :**

ಕಿಯೋನಿಕ್ಸ್, ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ನುರಿತ, ಕೌಶಲ್ಯವಂತ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಕ್ಷೇತ್ರಕ್ಕೂ ಅಡಿಯಿಟ್ಟಿದೆ.

**ಹಣಕಾಸಿನ ವರ್ಷ 2016–17ರ ಲೆಕ್ಕಗಳ ಭಾಗವಾಗಿರುವ ಟಿಪ್ಪಣಿಗಳು**

**ಎ. ಲೆಕ್ಕಪತ್ರದ ಮಹತ್ವದ ನೀತಿಗಳು**

**ಹಣಕಾಸಿನ ವಿವರಣೆಗಳ ಸಿದ್ಧತೆಗೆ ಆಧಾರಗಳು :**

ಈ ಕೂಡ ಲಗತ್ತಿಸಿರುವ ಹಣಕಾಸಿನ ವಿವರಗಳನ್ನು ಭಾರತೀಯರು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ (ಜಿಎಎಪಿ) ಅನುಸಾರ ಸಂಚಯನ ವ್ಯವಸ್ಥೆಯಲ್ಲಿ ಲೆಕ್ಕ ನಿರ್ವಹಣೆಯ ಪ್ರಗತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ಐತಿಹಾಸಿಕ ಬೆಲೆ ನಿರ್ಣಯದ ಅನ್ವಯ ಸಿದ್ಧಪಡಿಸಲಾಗಿದೆ. ಕಂಪನಿಗಳ (ಲೆಕ್ಕಗಳು) ನಿಯಮಗಳು, 2014ರ ನಿಯಮ 7 ಓದಿಕೊಂಡಂತೆ ಕಂಪನಿಗಳ ಅಧಿನಿಯಮ, 2013ರ ಪ್ರಕರಣ 133 ಮತ್ತು ಕಂಪನಿಗಳ ಅಧಿನಿಯಮ, 2013ರ ಸಂಬಂಧಪಟ್ಟ ಉಪಬಂಧಗಳ ಅನ್ವಯ ನಿಗದಿಪಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳನ್ನು ಕಂಪನಿ ಪರಿಪಾಲಿಸಿದೆ.

**ಅಂದಾಜುಗಳ ಬಳಕೆ :**

ಜಿಎಎಪಿಗೆ ಅನುಗುಣವಾಗಿ ಹಣಕಾಸಿನ ವಿವರಣೆಗಳನ್ನು ಸಿದ್ಧಪಡಿಸುವಿಕೆಯಲ್ಲಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟ ಮೊತ್ತಗಳು ಹಾಗೂ ಹಣಕಾಸಿನ ವಿವರಗಳ ದಿನಾಂಕದಂದು ಇದ್ದ ಅನುಷಂಗಿಕ ಹೊಣೆಗಾರಿಕೆಗಳ ಪ್ರಕಟಣೆಗಳ ಬಗ್ಗೆ ಮತ್ತು ಆ ಅವಧಿಯ ತಿಳಿಸಲ್ಪಟ್ಟ ಗಳಿಕೆಗಳು ಮತ್ತು ಖರ್ಚುಗಳ ಬಗ್ಗೆ ಅನ್ವಯವಾಗುವ ಅಂದಾಜುಗಳು ಮತ್ತು ಊಹೆಗಳನ್ನು ಆಡಳಿತ ಮಂಡಳಿಯು ಮಾಡಬೇಕಾಗುತ್ತದೆ. ವಾಸ್ತವಿಕ ಫಲಿತಾಂಶವು ಸದರಿ ಅಂದಾಜುಗಳಿಗಿಂತ ಭಿನ್ನವಾಗಿರುತ್ತದೆ. ಪ್ರಸಕ್ತ ಮತ್ತು ಮುಂದಿನ ಅವಧಿಗಳಲ್ಲಿ ಲೆಕ್ಕನಿರ್ವಹಣೆ ಅಂದಾಜುಗಳಲ್ಲಿ ಯಾವುದೇ ಪರಿಷ್ಕರಣೆಯಾಗಿದ್ದಲ್ಲಿ ಅದನ್ನು ಪ್ರಸ್ತುತ ಮತ್ತು ಮುಂದೆ ಪರಿಗಣಿಸಲಾಗುವುದು.

**ತಪಶೀಲುಗಳು :**

ತಪಶೀಲು ಐಟಂಗಳನ್ನು ಬೆಲೆಯ ಕೆಳಹಂತದಲ್ಲಿ ಅಥವಾ ನಿವ್ವಳ ಗಳಿಕೆಯ ಮೌಲ್ಯದಲ್ಲಿ ಬೆಲೆ ಕಟ್ಟಲಾಗಿದೆ. ತಪಶೀಲುಗಳ ಬೆಲೆಯು ಖರೀದಿ, ಪರಿವರ್ತನೆ ವೆಚ್ಚ ಮತ್ತು ಪ್ರಸಕ್ತ ಸ್ಥಳಕ್ಕೆ ಅವುಗಳನ್ನು ತರುವ ಮತ್ತು ಸುಸ್ಥಿತಿಗೊಳಿಸುವ ಇತರೆ ವೆಚ್ಚಗಳನ್ನು ಒಳಗೊಂಡಿರುವುದು.

**ನಗದು ಹರಿಯುವಿಕೆ ಹೇಳಿಕೆ :**

ನಗದು ಹರಿಯುವಿಕೆಗಳನ್ನು ಪರೋಕ್ಷ ವಿಧಾನವನ್ನು ಉಪಯೋಗಿಸಿ ವರದಿ ಮಾಡಿದೆ. ಅದರಂತೆ ತೆರಿಗೆಗೆ ಮೊದಲಿನ ನಿವ್ವಳ ಲಾಭವನ್ನು ಹಿಂದಿನ ಅಥವಾ ಮುಂದಿನ ಸಮಯದಲ್ಲಿನ ನಗದು ಸ್ವೀಕರಣೆಗಳು ಅಥವಾ ಪಾವತಿಗಳ ಯಾವುದೇ ವ್ಯತ್ಯಾಸಗಳ ಅಥವಾ ಸಂಚಯನದ ನಗದೇತರ ಸ್ವರೂಪದ ವ್ಯವಹಾರಗಳ ಪರಿಣಾಮಗಳಿಗೆ ಹೊಂದಾಣಿಕೆ ಮಾಡಲಾಗಿದೆ. ಕಂಪನಿಯ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆಗಳನ್ನು ಲಭ್ಯವಿರುವ ಮಾಹಿತಿ ಆಧಾರದ ಮೇಲೆ ಬೇರ್ಪಡಿಸಲಾಗಿದೆ.

**ಸದರಿ ಅವಧಿಯ ನಿವ್ವಳ ಲಾಭ ಅಥವಾ ನಷ್ಟ, ಹಿಂದಿನ ಅವಧಿಯ ಐಟಂಗಳು ಮತ್ತು ಲೆಕ್ಕನಿರ್ವಹಣೆ ನೀತಿಗಳಲ್ಲಿನ ಬದಲಾವಣೆಗಳು :**

ಈ ಅವಧಿಯಲ್ಲಿ ಮಾನ್ಯ ಮಾಡಿರುವ ಆದಾಯ ಮತ್ತು ಖರ್ಚುಗಳ ಎಲ್ಲಾ ಐಟಂಗಳನ್ನು ಸದರಿ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು ನಿರ್ಧರಣೆ ಮಾಡಲು ಸೇರ್ಪಡೆ ಮಾಡಲಾಗಿದೆ ಮತ್ತು ಕಂಪನಿಗಳ (ಲೆಕ್ಕಗಳು) ನಿಯಮಗಳು, 2014ರಲ್ಲಿ ನಿಗದಿಪಡಿಸಿರುವಂತೆ ಲೆಕ್ಕ ನಿರ್ವಹಣೆ ಗುಣಮಟ್ಟಗಳನ್ನು ಪರಿಪಾಲಿಸಲಾಗಿದೆ. ಹಿಂದಿನ ಅವಧಿಯ ಐಟಂಗಳನ್ನು ಹಿಂದಿನ ಒಂದು ಅಥವಾ ಹೆಚ್ಚಿನ ಅವಧಿಯ ಹಣಕಾಸಿನ ವಿವರಗಳನ್ನು ಸಿದ್ಧಪಡಿಸುವಲ್ಲಿ ಉಂಟಾಗುವ ತಪ್ಪುಗಳು ಅಥವಾ ಬಿಟ್ಟು ಹೋಗುವಿಕೆ ಪರಿಣಾಮವಾಗಿ ಪ್ರಸಕ್ತ ಅವಧಿಯಲ್ಲಿ ಉಂಟಾಗುವ ಆದಾಯ ಅಥವಾ ಖರ್ಚುಗಳು ಎಂಬುದಾಗಿ ಮಾನ್ಯ ಮಾಡಲಾಗಿದೆ.

**ಸ್ವತ್ತು, ಸ್ಥಾವರ ಮತ್ತು ಉಪಕರಣ**

(ಎ) ಸ್ಥಿರಾಸ್ತಿಗಳ ಮೌಲ್ಯವನ್ನು ಸಂಚಿತ ಸವಕಳಿಯನ್ನು ಕಳೆದು ನಮೂದಿಸಲಾಗಿದೆ. ಅವುಗಳ ಮೌಲ್ಯವು ಖರೀದಿ ಬೆಲೆ ಮತ್ತು ಅವುಗಳನ್ನು ಅಂತಿಮವಾಗಿ ಬಳಕೆಗಾಗಿ ಕಾರ್ಯಾಚರಣೆ ಸ್ಥಿತಿಗೆ ತರಲು ತಗಲುವ ಯಾವುದೇ ವೆಚ್ಚವನ್ನು ಒಳಗೊಂಡಿರುತ್ತದೆ. ಸ್ಥಿರಾಸ್ತಿಗಳನ್ನು ಪಡೆದುಕೊಳ್ಳಲು ಯಾವುದೇ ಹಣಕಾಸಿನ ವೆಚ್ಚ ಉಂಟಾಗಿದ್ದರೆ ಅಂತಹ ಸ್ವತ್ತುಗಳು ಬಳಕೆಗೆ ಸಿದ್ಧವಾಗುವ ಅವಧಿಯವರೆಗೆ ಅದನ್ನು ಸಹ ಸೇಪರ್ಡೆ ಮಾಡಲಾಗಿದೆ. ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿರುವ ಸ್ವತ್ತುಗಳು ಸದರಿ ಕಂಪನಿಗೆ ಸಂಬಂಧಿಸಿದಂತೆ ಅಂತಹ ಮೊತ್ತವನ್ನು ಒಳಗೊಂಡಿರುವುದು ಮತ್ತು ಅನುದಾನದಿಂದ ಪಡೆದ ಸ್ವತ್ತುಗಳನ್ನು ಒಳಗೊಂಡಿರುವುದು.

ದಿನಾಂಕ: 31.03.2004ರವರೆಗೆ ಅನುದಾನದಿಂದ ಪಡೆದುಕೊಂಡಿರುವ ಎಲ್ಲಾ ಸ್ವತ್ತುಗಳನ್ನು ಶೂನ್ಯ ಮೌಲ್ಯದ ಮೇಲೆ ಪರಿಗಣಿಸಲಾಗಿದೆ ಮತ್ತು ಯಾವುದೇ ಸವಕಳಿಯನ್ನು ಒದಗಿಸಿರುವುದಿಲ್ಲ. ದಿನಾಂಕ : 01.04.2004ರಂದು ಅಥವಾ ಆನಂತರದಂದು ಅನುದಾನದಿಂದ ಪಡೆದ ಸ್ವತ್ತುಗಳನ್ನು ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಯಲ್ಲಿ ಸಾಧಾರಣ ಮೌಲ್ಯದಲ್ಲಿ ತಿಳಿಸಲಾಗಿದೆ.

(ಬಿ) ಪ್ರಗತಿಯಲ್ಲಿರುವ ಕಾಮಗಾರಿಯನ್ನು ಅದರ ಬೆಲೆಯ ಆಧಾರದ ಮೇಲೆ ತಿಳಿಸಲಾಗಿದೆ.

**ಸವಕಳಿ :**

**ಎ) ಗೋಚರಿತ ಆಸ್ತಿಗಳು :**

ಗೋಚರಿತ ಸ್ವತ್ತುಗಳ ಮೇಲಿನ ಸವಕಳಿಯನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ–2 ರ ಅನ್ವಯ ನಿಗದಿಪಡಿಸಿರುವ ಆಸ್ತಿಗಳ ಉಪಯುಕ್ತ ಅವಧಿಯ ಅನುಸಾರ ನೇರ ಮಾರ್ಗದ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ.

**ಬಿ) ಅಗೋಚರ ಸ್ವತ್ತುಗಳು :**

ಅಗೋಚರ ಸ್ವತ್ತುಗಳ ಸಂಬಂಧದಲ್ಲಿ ಕಂಪನಿಯು ಕೆಳಕಂಡಂತೆ ಸ್ವತ್ತುಗಳ ಉಪಯುಕ್ತ ಅವಧಿಯನ್ನು ಅಂದಾಜು ಮಾಡಿದೆ :

| **ವಿವರಣೆ** | **ಅಂದಾಜು ಮಾಡಲಾದ ಉಪಯುಕ್ತ ಅವಧಿ** |
|---|---|
| ಅಗೋಚರ ಆಸ್ತಿಗಳು | |
| ತಂತ್ರಾಂಶಗಳು | 3 ವರ್ಷಗಳು |

ಸಿ) ಗುತ್ತಿಗೆದಾರಿಕೆ ಜಮೀನಿನ ಬಗ್ಗೆ ಗುತ್ತಿಗೆ ಅವಧಿಯಲ್ಲಿನ ವೆಚ್ಚಗಳನ್ನು ಕಳೆದು ಮೂಲ ಬೆಲೆಯನ್ನು ನಮೂದಿಸಲಾಗಿದೆ.

**ಆದಾಯ ಗುರುತಿಸುವಿಕೆ :**

ಫ್ರಾಂಚೈಸೀಗಳಿಂದ ಪಡೆದ ಫ್ರಾಂಚೈಸೀ/ಯುವ.ಕಾಮ್ ಫ್ರಾಂಚೈಸೀ ಕಮಿಷನ್ ಮತ್ತು ಕಂಪನಿಯ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಂದ ಪಡೆದ ತರಬೇತಿ ಶುಲ್ಕಗಳನ್ನು ನಗದು ಆಧಾರದ ಮೇಲೆ ಗಣನೆ ಮಾಡಿ ಮಾನ್ಯ ಮಾಡಲಾಗಿದೆ ಇದನ್ನು ಹೊರತಾಗಿ ಆದಾಯ ಮತ್ತು ವೆಚ್ಚಗಳನ್ನು ಸಾಮಾನ್ಯವಾಗಿ ಗಳಿಸಿದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ.

– ಮಾರಾಟವು ವ್ಯಾಪಾರದ ರಿಯಾಯಿತಿ ನಂತರದ ನಿವ್ವಳ ಮೊತ್ತವಾಗಿದೆ

– ನಿರ್ವಹಣೆ ಒಪ್ಪಂದದಿಂದ ಬಂದ ಗಳಿಕೆಯನ್ನು ಅಂತಹ ಸೇವೆಯನ್ನು ಸಲ್ಲಿಸಿದ ಅವಧಿಯ ದಮಾಷ ಆಧಾರದ ಮೇಲೆ ಪರಿಗಣಿಸಲಾಗಿದೆ.

– ಕೈಗಾರಿಕಾ ಶೆಡ್‌ಗಳು ಮತ್ತು ಜಮೀನುಗಳ ಮಾರಾಟವನ್ನು ಅಂತಿಮ ಕ್ರಯಪತ್ರ ಬರೆದುಕೊಟ್ಟ ನಂತರ ಮಾನ್ಯ ಮಾಡಲಾಗಿದೆ.

– ನಿರ್ವಹಣೆ ಕಾರ್ಯದಿಂದ ಮತ್ತು ಯೋಜನಾ ಕಾರ್ಯದಿಂದ ಉದ್ಭವಿಸಿದ ನಿರುಪಯೋಗಿ ವಸ್ತುಗಳ ಮಾರಾಟದಿಂದ ಬಂದ ಹಣವನ್ನು ಮಾರಾಟ ಮಾಡಿದ ವರ್ಷದಲ್ಲಿನ ಇತರೆ ಆದಾಯವೆಂದು ಪರಿಗಣಿಸಲಾಗಿದೆ.

– ಲಾಭಾಂಶದ ಆದಾಯವನ್ನು ಲಾಭಾಂಶ ಪಡೆಯುವ ಹಕ್ಕನ್ನು ದೃಢಪಡಿಸಿದಾಗ ಮಾನ್ಯ ಮಾಡಲಾಗಿದೆ.

– ಎಲೆಕ್ಟ್ರಾನಿಕ್ ಸಿಟಿಯಲ್ಲಿ ಸರ್ಕಾರದ ಪ್ರಾಧಿಕಾರಿಗಳು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ನೀಡಿದ ಪರಿಹಾರವನ್ನು ಸ್ವೀಕರಿಸಿದ ವರ್ಷದ ಅವಧಿಯಲ್ಲಿ ಮಾನ್ಯ ಮಾಡಿದೆ.

– ವಿಶೇಷ ಆರ್ಥಿಕ ವಲಯದಲ್ಲಿನ ಗುತ್ತಿಗೆಗೆ ನೀಡಿರುವ ಜಮೀನಿನ ಸಂಬಂಧ ಪಡೆದ ಗುತ್ತಿಗೆ ಕಂತನ್ನು ಗುತ್ತಿಗೆ ಅವಧಿಯ ಅನುಪಾತದಲ್ಲಿ ಗುತ್ತಿಗೆ ಬಾಡಿಗೆ ಎಂದು ಗುರುತಿಸಲಾಗಿದೆ.

**ವಿದೇಶಿ ಹಣದ ವ್ಯವಹಾರಗಳು :**

(i) *ಆರಂಭಿಕವಾಗಿ ಗುರುತಿಸುವಿಕೆ*

ವರದಿಯಾದ ಹಣ ಮತ್ತು ವಿದೇಶಿ ಹಣದ ನಡುವಿನ ವಿನಿಮಯ ದರದಲ್ಲಿನ ವಿದೇಶಿ ಹಣದ ಮೊತ್ತವನ್ನು ವ್ಯವಹಾರ ದಿನದಂದು ಇದ್ದಂತೆ ವಿದೇಶಿ ಹಣದ ವ್ಯವಹಾರಗಳನ್ನು ದಾಖಲಿಸಲಾಗಿದೆ.

(ii) *ಪರಿವರ್ತನೆ*

ವಿದೇಶಿ ಹಣದ ಹಣಕಾಸಿನ ಬಾಬತ್ತುಗಳನ್ನು ಆಖೈರು ದರದಲ್ಲಿ ವರದಿ ಮಾಡಿಕೊಳ್ಳಲಾಗಿದೆ. ಹಣಕಾಸಿನದಲ್ಲದ ಬಾಬತ್ತುಗಳನ್ನು ವಿದೇಶಿ ಹಣದಲ್ಲಿನ ಐತಿಹಾಸಿಕ ದರ ನಮೂದಿಸಿ ವ್ಯವಹಾರದ ದಿನಾಂಕದಲ್ಲಿದ್ದ ವಿನಿಮಯ ದರದಲ್ಲಿ ವರದಿ ಮಾಡಲಾಗಿದೆ; ಮತ್ತು ಹಣಕಾಸಿನದಲ್ಲದ ಬಾಬತ್ತುಗಳು ನ್ಯಾಯಸಮ್ಮತ ಮೌಲ್ಯ ಒಳಗೊಂಡಿರುವ ಅಥವಾ ವಿದೇಶಿ ಹಣದಲ್ಲಿನ ಇದೇ ರೀತಿಯ ಮೌಲ್ಯಮಾಪನ ಎಣಿಕೆಯಲ್ಲಿದ್ದು ಅವುಗಳನ್ನು ಮೌಲ್ಯ ನಿರ್ಧರಣೆ ಮಾಡುವಾಗ ಇದ್ದಂತಹ ವಿನಿಮಯ ದರಗಳಲ್ಲಿ ವರದಿ ಮಾಡಲಾಗಿದೆ.

(iii) *ವಿನಿಮಯ ವ್ಯತ್ಯಾಸಗಳು*

ಹಣಕಾಸಿನ ಬಾಬತ್ತುಗಳನ್ನು ಇತ್ಯರ್ಥಪಡಿಸಿದ ಸಂದರ್ಭದಲ್ಲಿ ಅಥವಾ ಕಂಪನಿಯ ಹಣಕಾಸಿನ ಬಾಬತ್ತುಗಳನ್ನು ಸದರಿ ವರ್ಷಾವಧಿಯಲ್ಲಿ ಪ್ರಾರಂಭಿಕವಾಗಿ ದಾಖಲಾಗಿರುವ, ಅಥವಾ ಹಿಂದಿನ ಹಣಕಾಸಿನ ವಿವರಗಳಲ್ಲಿ ವರದಿಯಾಗಿರುವ ದರಕ್ಕಿಂತ ಬೇರೆಯಾಗಿರುವ ದರಗಳಲ್ಲಿ ಉಂಟಾಗಿರುವ ವಿನಿಮಯ ವ್ಯತ್ಯಾಸಗಳನ್ನು ಸಮಗ್ರವಲ್ಲದ ಕಾರ್ಯಾಚರಣೆಯಿಂದ ಉದ್ಭವವಾದವುಗಳು ಹೊರತಾಗಿ ಉದ್ಭವವಾದ ವರ್ಷದಲ್ಲಿನ ಆದಾಯ ಅಥವಾ ಖರ್ಚು ಎಂಬುದಾಗಿ ಗುರುತಿಸಲಾಗಿದೆ.

**ಅನುದಾನಗಳು :**

ಅನುದಾನಗಳನ್ನು ವಾಸ್ತವವಾಗಿ ಖರ್ಚು ಮಾಡಿದ ಪ್ರಮಾಣದವರೆಗೆ ಆ ವರ್ಷದ ಆದಾಯವೆಂದು ಪರಿಗಣಿಸಲಾಗಿದೆ ಮತ್ತು ವರ್ಷದ ಅವಧಿಯ ಲಾಭ ಮತ್ತು ನಷ್ಟದ ಲೆಕ್ಕದ ಪಟ್ಟಿಯಲ್ಲಿ ಕಾಂಟ್ರ ಎಂದು ತೋರಿಸಲಾಗಿದೆ. ಬಾಕಿ ಮೊತ್ತವನ್ನು ಖರ್ಚು ಮಾಡಿರದ ಅನುದಾನವಾಗಿ ಮುಂದಿನ ವರ್ಷಕ್ಕೆ ತೆಗೆದುಕೊಳ್ಳಲಾಗಿದೆ.

**ಹೂಡಿಕೆಗಳು :**

ಹೂಡಿಕೆಗಳನ್ನು ದೀರ್ಘಾವಧಿ ಹೂಡಿಕೆಗಳು ಮತ್ತು ಚಾಲ್ತಿ ಹೂಡಿಕೆಗಳೆಂದು ವರ್ಗೀಕರಿಸಲಾಗಿದೆ. ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಹೊಂದಿದ್ದ / ಹೊಂದಲು ಉದ್ದೇಶಿಸಿರುವ ಹೂಡಿಕೆಗಳನ್ನು ದೀರ್ಘಾವಧಿ ಹೂಡಿಕೆಗಳೆಂದು ವರ್ಗೀಕರಿಸಲಾಗಿದೆ. ಚಾಲ್ತಿ ಹೂಡಿಕೆಗಳೆಂದರೆ ಸಿದ್ಧವಾಗಿ ನಗದೀಕರಿಸಬಹುದಾದ ಹೂಡಿಕೆಗಳು ಮತ್ತು ಹಣವನ್ನು ತೊಡಗಿಸಿದ ದಿನಾಂಕದಿಂದ ಒಂದಕ್ಕಿಂತ ಹೆಚ್ಚು ವರ್ಷದ ಅವಧಿಗೆ ಹೊಂದದಿರಲು ಬಯಸಿರುವ ಹೂಡಿಕೆಗಳು. ದೀರ್ಘಾವಧಿ ಹೂಡಿಕೆಗಳನ್ನು ತಾತ್ಕಾಲಿಕ ಇಳಿಕೆಗಳನ್ನು ಹೊರತುಪಡಿಸಿ, ಇಂತಹ ಹೂಡಿಕೆಗಳ ಮೌಲ್ಯದಲ್ಲಿನ ಯಾವುದೇ ಇಳಿಕೆಯನ್ನು ಗುರುತಿಸಲು ಇಳಿಕೆಗಾಗಿ ಏರ್ಪಾಡನ್ನು ಕಳೆದ ನಂತರ ತೋರಿಸಲಾಗಿದೆ. ಚಾಲ್ತಿ ಹೂಡಿಕೆಗಳನ್ನು ಮುಖ ಬೆಲೆಯ ಕಡಿಮೆ ಬೆಲೆಯಲ್ಲಿ ಅಥವಾ ನಿವ್ವಳ ನಗದೀಕರಿಸಬಹುದಾದ ಮೌಲ್ಯದಲ್ಲಿ ತೋರಿಸಲಾಗಿದೆ. ಹೀಗೆ ತೋರಿಸಿರುವ ಮೌಲ್ಯದಲ್ಲಿನ ಯಾವುದೇ ಇಳಿಕೆಯನ್ನು ಗುರುತಿಸಲು ಏರ್ಪಾಡು ಮಾಡಲಾಗಿದೆ.

**ನೌಕರರ ನಿವೃತ್ತಿ ಸೌಲಭ್ಯಗಳು :**

ಭವಿಷ್ಯ ನಿಧಿಗೆ ನೀಡಲಾದ ಕಂಪನಿಯ ವಂತಿಗೆಯನ್ನು ಲಾಭ ಮತ್ತು ನಷ್ಟದ ಖಾತೆಗೆ ಖರ್ಚು ಹಾಕಲಾಗಿದೆ. ಗ್ರಾಚ್ಯುಯಿಟಿ, ಗಳಿಕೆ ರಜೆಗೆ ನಗದು ನೀಡಿಕೆ ಮತ್ತು ಅನಾರೋಗ್ಯ ರಜೆಯ ಸೌಲಭ್ಯಗಳನ್ನು ವಾಸ್ತವಿಕ ಮೌಲ್ಯಮಾಪನದ ಆಧಾರದ ಮೇಲೆ ಲಾಭ ಮತ್ತು ನಷ್ಟದ ತಃಖ್ತೆಗೆ ಖರ್ಚು ಹಾಕಲಾಗಿದೆ. ಗ್ರಾಚ್ಯುಯಿಟಿ ಹೊಣೆಗಾರಿಕೆಯನ್ನು ಅನುಮೋದಿತ ಗ್ರಾಚ್ಯುಯಿಟಿ ಟ್ರಸ್ಟ್ ಒಂದಕ್ಕೆ ನಿಧಿ ನೀಡುವ ಮುಖಾಂತರ ಅದರಿಂದ ಭರಿಸಲಾಗಿದೆ. ನಗದೀಕರಣಗೊಳ್ಳದ ಅನಾರೋಗ್ಯ ರಜೆಯ ಬಗ್ಗೆ ನೌಕರರು 100 ದಿನಗಳವರೆಗೆ ರಜೆಯನ್ನು ತಮ್ಮ ಖಾತೆಯಲ್ಲಿರಿಸಿಕೊಳ್ಳಬಹುದಾಗಿದೆ. ಬಳಸದೇ ಉಳಿಸಿದ ಅನಾರೋಗ್ಯ ರಜೆಗೆ ಲೆಕ್ಕದಲ್ಲಿ ಏರ್ಪಾಡು ಮಾಡಲಾಗಿದೆ.

**ಸಾಲದ ವೆಚ್ಚ :**

ಅರ್ಹತಾ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ಅಥವಾ ನಿರ್ಮಿಸುವಾಗ ತಗಲುವ ಸಾಲದ ವೆಚ್ಚಗಳನ್ನು ಬಂಡವಾಳೀಕರಿಸಲಾಗಿದ್ದು, ಅವುಗಳನ್ನು ಅಂತಹ ಆಸ್ತಿಗಳ ಬೆಲೆಯ ಭಾಗವೆಂದು ಪರಿಗಣಿಸಲಾಗುತ್ತದೆ. ಉದ್ದೇಶಿತ ಉಪಯೋಗಕ್ಕೆ ಬಳಕೆಯಾಗಲು ಗಣನೀಯ ಸಮಯವನ್ನು ಅವಶ್ಯವಾಗಿ ತೆಗೆದುಕೊಳ್ಳುವುದು ಅರ್ಹತಾ ಆಸ್ತಿಯಾಗಿರುವುದು. ಇನ್ನಿತರೆ ಎಲ್ಲಾ ಸಾಲದ ಮೇಲಿನ ವೆಚ್ಚಗಳನ್ನು ಗಳಿಕೆಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

**ವಿಭಾಗೀಯ ವರದಿ :**

ಕಂಪನಿಯು ವ್ಯವಹಾರವನ್ನು ಮತ್ತು ಭೌಗೋಳಿಕ ವಿಭಾಗಗಳನ್ನು ಸಾಂಸ್ಥಿಕ ಘಟಕಗಳನ್ನಾಗಿ ಗುರುತಿಸಿದೆ. ಪ್ರತಿ ಘಟಕದ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಉದ್ದೇಶಕ್ಕಾಗಿ ಮತ್ತು ಮುಂದಿನ ದಿನಗಳಲ್ಲಿ ಸಂಪನ್ಮೂಲಗಳ ಹಂಚಿಕೆ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ನಿರ್ದೇಶಕರ ಮಂಡಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾಹಿತಿಯನ್ನು ತಿಳಿಸಲಾಗಿದೆ. ಆದ್ದರಿಂದಾಗಿ, ಕಂಪನಿಯ ಸಮಗ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ಮಂಡಿಸಲು ಅಳವಡಿಸಿಕೊಂಡಿರುವ ಲೆಕ್ಕನಿರ್ವಹಣೆ ನೀತಿಗಳಿಗೆ ಅನುಗುಣವಾಗಿ ವಿಭಾಗದ ಮಾಹಿತಿಯನ್ನು ಸಿದ್ಧಪಡಿಸಲಾಗಿದೆ.

ಕಂಪನಿಯು ಆಡಳಿತ ಮಂಡಳಿಯ ಮಾಹಿತಿ ವ್ಯವಸ್ಥೆಯ ಆಧಾರದ ಮೇಲೆ ಪ್ರಾಥಮಿಕ ವಿಭಾಗಗಳನ್ನು ಗುರುತಿಸಿದೆ. ಅವುಗಳೆಂದರೆ ಐಟಿ ಸೇವೆಗಳು, ಮೂಲಭೂತ ಸೌಕರ್ಯ, ಮಾನವ ಸಂಪನ್ಮೂಲ ಸೇವೆಗಳು ಮತ್ತು ಐಟಿ ಶಿಕ್ಷಣ. ಉತ್ಪನ್ನಗಳು ಮತ್ತು ಸೇವೆಗಳ ಲೆಕ್ಕದ ಸ್ವರೂಪವನ್ನು, ವ್ಯತ್ಯಯವುಳ್ಳ ಹೊಣೆಗಾರಿಕೆಗಳು ಮತ್ತು ಗಳಿಕೆಗಳು ಹಾಗೂ ಆಂತರಿಕ ವ್ಯವಹಾರವನ್ನು ತಿಳಿಸುವ ವ್ಯವಸ್ಥೆಯನ್ನು ಗಣನೆಗೆ ತೆಗೆದುಕೊಂಡು ವಿಭಾಗಗಳನ್ನು ಗುರುತಿಸಲಾಗಿದೆ ಮತ್ತು ವರದಿ ಮಾಡಲಾಗಿದೆ. ವಿಭಾಗದ ವರದಿ ಮಾಡಲು ಅಳವಡಿಸಿಕೊಂಡಿರುವ ಲೆಕ್ಕ ನಿರ್ವಹಣೆ ನೀತಿಗಳು ವಿಭಾಗಗಳ ವರದಿ ಮಾಡಲು ಅನುಸರಿಸಬೇಕಾದ ಈ ಕೆಳಕಂಡ ಹೆಚ್ಚುವರಿ ನೀತಿಗಳ ಜೊತೆಗೆ ಕಂಪನಿಯ ಲೆಕ್ಕ ನಿರ್ವಹಣೆ ನೀತಿಯನುಸಾರ ಇರುವುದು.

ಎ. ವಿಭಾಗಕ್ಕೆ ಗಳಿಕೆ ಮತ್ತು ಖರ್ಚುಗಳನ್ನು ಆ ವಿಭಾಗದ ಕಾರ್ಯಾಚರಣೆ ಚಟುವಟಿಕೆಗಳಿಗೆ ಸಂಬಂಧಿಸಿದ ಆಧಾರದ ಮೇಲೆ ಗುರುತಿಸಲಾಗಿದೆ. ಇಡೀ ಸಂಸ್ಥೆಗೆ ಸಂಬಂಧಿಸಿದ ಗಳಿಕೆ ಮತ್ತು ಖರ್ಚುಗಳನ್ನು ಸೂಕ್ತವಾದ ಆಧಾರದ ಮೇಲೆ ವಿಭಾಗಕ್ಕೆ ಹಂಚಿಕೆ ಮಾಡಲಾಗದವುಗಳನ್ನು "ಹಂಚಿಕೆ ಮಾಡಲಾಗದವು" ಎಂಬುದಾಗಿ ತಿಳಿಸಲಾಗಿದೆ.

ಬಿ. ವಿಭಾಗದ ಆಸ್ತಿಗಳು ಮತ್ತು ವಿಭಾಗದ ಹೊಣೆಗಾರಿಕೆಗಳು ಆ ವಿಭಾಗಗಳ ಆಸ್ತಿಗಳು ಮತ್ತು ಹೊಣೆಗಾರಿಕೆಗಳಾಗಿ ಪ್ರತಿನಿಧಿಸುವವು. ಸಕಾರಣ ಆಧಾರದ ಮೇಲೆ ವಿಭಾಗಕ್ಕೆ ಹಂಚಿಕೆ ಮಾಡಲಾಗದ ಹೂಡಿಕೆಗಳು, ತೆರಿಗೆಗೆ ಸಂಬಂಧಿಸಿದ ಆಸ್ತಿಗಳು ಮತ್ತು ಇತರೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು "ಹಂಚಿಕೆ ಮಾಡಲಾಗದವು" ಎಂಬುದಾಗಿ ತಿಳಿಸಲಾಗಿದೆ.

**ದ್ವಿತೀಯ ಹಂತದ ವಿಭಾಗೀಯ ವರದಿ :**

ಕಂಪನಿಯ ವ್ಯವಹಾರವು ಭಾರತೀಯ ಮಾರುಕಟ್ಟೆಗೆ ಸೀಮಿತವಾಗಿರುವುದರಿಂದ ಭೌಗೋಳಿಕ ವಿಭಾಗೀಯ ವರದಿಯನ್ನು ಮಾಡಿರುವುದಿಲ್ಲ.

**ಗುತ್ತಿಗೆಗೆ ನೀಡಿರುವ ಆಸ್ತಿಗಳು :**

*i.* *ಹಣಕಾಸು ಗುತ್ತಿಗೆಗಳು :*

ಗುತ್ತಿಗೆಗೆ ನೀಡಿರುವ ಬಾಬಿನ ಮಾಲೀಕತ್ವಕ್ಕೆ ಅನ್ವಯವಾಗುವ ಎಲ್ಲಾ ಹೊಣೆಗಾರಿಕೆಗಳು ಮತ್ತು ಸೌಲಭ್ಯಗಳನ್ನು ಹಣಕಾಸಿನ ಗುತ್ತಿಗೆಗಳು ಕಂಪನಿಗೆ ಪರಿಣಾಮಕಾರಿಯಾಗಿ ವರ್ಗಾವಣೆ ಮಾಡುವವು. ಅವುಗಳನ್ನು ಗುತ್ತಿಗೆ ಅವಧಿಯ ಪ್ರಾರಂಭದಲ್ಲಿದ್ದ ಕಡಿಮೆಯಾಗಿದ್ದ ನ್ಯಾಯ ಬೆಲೆ ಮತ್ತು ಕನಿಷ್ಠ ಗುತ್ತಿಗೆ ಪಾವತಿಯ ಪ್ರಸ್ತುತ ಮೌಲ್ಯದ ಮೇಲೆ ಬಂಡವಾಳೀಕರಿಸಲಾಗಿದೆ ಮತ್ತು ಅದನ್ನು ಗುತ್ತಿಗೆಯ ಆಸ್ತಿಯಾಗಿ ತಿಳಿಸಲಾಗಿದೆ. ಗುತ್ತಿಗೆ ಪಾವತಿಗಳನ್ನು ಗಳಿಕೆಯ ಸೂಚಿತ ದರದ ಆಧಾರದ ಮೇಲೆ ಗುತ್ತಿಗೆ ಹೊಣೆಗಾರಿಕೆಯ ಇಳಿಕೆ ಮತ್ತು ಹಣಕಾಸಿನ ಪ್ರಭಾರಗಳ ನಡುವೆ ವಿಭಾಗ ಮಾಡಲಾಗಿದೆ. ಹಣಕಾಸಿನ ಖರ್ಚುಗಳನ್ನು ಆದಾಯದ ಎದುರಾಗಿ ನೇರವಾಗಿ ವಿಧಿಸಲಾಗಿದೆ. ಗುತ್ತಿಗೆ ನಿರ್ವಹಣೆ ಶುಲ್ಕಗಳು, ಕಾನೂನು ಶುಲ್ಕಗಳು ಮತ್ತು ಇತರೆ ಪ್ರಾರಂಭಿಕ ನೇರ ವೆಚ್ಚಗಳನ್ನು ಮೂಲಧನಕ್ಕೆ ಸೇರಿಸಲಾಗಿದೆ.

*ii. ಕಾರ್ಯಾಚರಣೆ ಗುತ್ತಿಗೆಗಳು :*

ಗುತ್ತಿಗೆದಾರ ಗುತ್ತಿಗೆ ಅವಧಿಯ ಮಾಲೀಕತ್ವದ ಎಲ್ಲಾ ಹೊಣೆಗಾರಿಕೆಗಳು ಮತ್ತು ಸೌಲಭ್ಯಗಳನ್ನು ತನ್ನಲ್ಲೇ ಗಣನೀಯವಾಗಿ ಉಳಿಸಿಕೊಂಡಿರುವಂತಹ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಕಾರ್ಯಾಚರಣೆ ಗುತ್ತಿಗೆ ಪಾವತಿಗಳನ್ನು ಲಾಭ ಮತ್ತು ನಷ್ಟದ ಖಾತೆಯಲ್ಲಿ ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಖರ್ಚು ಎಂಬುದಾಗಿ ಗುರುತಿಸಲಾಗಿದೆ.

**ಷೇರು ಒಂದರ ಗಳಿಕೆ**

ಅನ್ವಯಿತ ಅವಧಿಯಲ್ಲಿ ಬಾಕಿಯಿರುವ ಪರಿಗಣಿತ ಸರಾಸರಿ ಈಕ್ವಿಟಿ ಷೇರುಗಳ ಸಂಖ್ಯೆಯಿಂದ ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು (ಪ್ರಿಫರೆನ್ಸ್ ಲಾಭಾಂಶಗಳು ಮತ್ತು ಅನ್ವಯವಾಗುವ ತೆರಿಗೆಗಳನ್ನು ಮುರಿದುಕೊಂಡ ನಂತರ) ವಿಭಾಗಿಸುವ ಮೂಲಕ ಷೇರು ಒಂದರ ಮೂಲ ಗಳಿಕೆಗಳನ್ನು ಲೆಕ್ಕ ಮಾಡಲಾಗಿದೆ. ಭಾಗಶಃ ಪಾವತಿಸಿರುವ ಈಕ್ವಿಟಿ ಷೇರುಗಳನ್ನು ವರದಿ ಮಾಡುವ ಅವಧಿಯಲ್ಲಿ ಪೂರ್ಣ ಪಾವತಿಸಿರುವ ಈಕ್ವಿಟಿ ಷೇರಿಗೆ ಸಂಬಂಧಿಸಿದಂತೆ ಲಾಭಾಂಶಗಳಲ್ಲಿ ಭಾಗವಹಿಸಲು ಅರ್ಹವಾಗಿರುವ ಪ್ರಮಾಣದವರೆಗೆ ಈಕ್ವಿಟಿ ಷೇರು ಒಂದರ ಭಾಗವನ್ನಾಗಿ ಪರಿಗಣಿಸಲಾಗಿದೆ. ಅನ್ವಯಿತ ಅವಧಿಯಲ್ಲಿ ಬಾಕಿಯಿರುವ ಪರಿಗಣಿತ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಬೋನಸ್ ನೀಡಿಕೆಗೆ ಹೊಂದಾಣಿಕೆ ಮಾಡಲಾಗಿದೆ; ಹಾಲಿಯಿರುವ ಷೇರುದಾರರಿಗೆ ಹಕ್ಕಿನ ನೀಡಿಕೆಯ ಬೋನಸ್ ಅಂಶವಾಗಿ; ಷೇರುಗಳ ವಿಭಾಗವಾಗಿ; ಮತ್ತು ವ್ಯತಿರಿಕ್ತ ಷೇರಿನ ವಿಭಾಗಕ್ಕೂ ಸಹ (ಷೇರುಗಳ ಸಂಯೋಜನೆ) ಹೊಂದಾಣಿಕೆ ಮಾಡಿದೆ.

**ಆದಾಯದ ಮೇಲಿನ ತೆರಿಗೆಗಳು**

ತೆರಿಗೆ ಖರ್ಚು ಪ್ರಸಕ್ತದ ಮತ್ತು ಮುಂದೂಡಿದ ತೆರಿಗೆಗಳೆರಡನ್ನೂ ಒಳಗೊಂಡಿರುವುದು. ಮುಂದೂಡಲಾದ ಆದಾಯ ತೆರಿಗೆಗಳು ಆ ವರ್ಷದ ತೆರಿಗೆ ವಿಧಿಸಬಹುದಾದ ಆದಾಯ ಮತ್ತು ಲೆಕ್ಕ ಮಾಡಲಾದ ಆದಾಯದ ನಡುವಿನ ಪ್ರಸಕ್ತ ವರ್ಷದ ಸಮಯದ ವ್ಯತ್ಯಾಸದ ಮತ್ತು ಹಿಂದಿನ ವರ್ಷಗಳ ಸಮಯದ ವ್ಯತ್ಯಾಸದ ವ್ಯತಿರಿಕ್ತದ ಪರಿಣಾಮಗಳನ್ನು ಸೂಚಿಸುವುದು. ಮುಂದೂಡಲಾದ ತೆರಿಗೆಯನ್ನು ತೆರಿಗೆಯ ದರಗಳ ಆಧಾರದ ಮೇಲೆ ಮತ್ತು ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಯ ದಿನಾಂಕದಂದು ಜಾರಿಗೊಳಿಸಿದ್ದ ತೆರಿಗೆ ಕಾನೂನು ಅಥವಾ ಸಂಪೂರ್ಣವಾಗಿ ಜಾರಿಗೊಳಿಸಿದ್ದ ಕಾನೂನಿನ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ. ಕಾರ್ಯಾಚರಣೆಯ ವಿವಿಧ ದೇಶಗಳಲ್ಲಿನ ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಹೊಣೆಗಾರಿಕೆಗಳನ್ನು ಪ್ರತಿಯೊಂದರ ಮುಂದೆ ಪರಸ್ಪರ ನಮೂದಿಸಿರುವುದಿಲ್ಲ. ಏಕೆಂದರೆ ಆ ರೀತಿ ಮಾಡಲು ಕಂಪನಿಯು ಕಾನೂನಾತ್ಮಕ ಹಕ್ಕುಗಳನ್ನು ಹೊಂದಿರುವುದಿಲ್ಲ. ಮುಂದೂಡಲಾದ ತೆರಿಗೆ ಆಸ್ತಿಗಳನ್ನು ಅವುಗಳನ್ನು ನಗದೀಕರಣ ಮಾಡಿಕೊಳ್ಳಲು ದೊರೆಯತಕ್ಕ ಮುಂದಿನ ತೆರಿಗೆ ವಿಧಿಸಬಹುದಾದ ಸಾಕಷ್ಟು ಆದಾಯದ ಸೂಕ್ತವಾದ ಅವಕಾಶವಿರುವ ಪ್ರಮಾಣದವರೆಗೆ ಮಾತ್ರ ಮಾನ್ಯ ಮಾಡಲಾಗಿದೆ. ಮುಂದೂಡಲಾದಂತಹ ತೆರಿಗೆ ಆಸ್ತಿಗಳನ್ನು ಮುಂದೆ ಬರುವ ತೆರಿಗೆ ವಿಧಿಸಬಹುದಾದ ಲಾಭಗಳಿಂದ ಭರಿಸಬಹುದೆಂಬ ಖಚಿತವಾದ ಕಲ್ಪನೆಯಿದ್ದರೆ ಮಾತ್ರ ಗಣನೆ ಮಾಡದಿರುವ ಸವಕಳಿ ಮತ್ತು ತೆರಿಗೆ ನಷ್ಟಗಳನ್ನು ಮುಂದಕ್ಕೆ ತೆಗೆದುಕೊಳ್ಳುವ ಮೂಲಕ ಮಾನ್ಯ ಮಾಡಿದೆ. ಹಿಂದಿನ ವರ್ಷಗಳಲ್ಲಿ ಮಾನ್ಯ ಮಾಡಿರದಂತಹ ಮುಂದೂಡಿದ ತೆರಿಗೆ ಆಸ್ತಿಗಳನ್ನು ಪುನರ್ ಲೆಕ್ಕಾಚಾರ ಮಾಡಲಾಗಿದೆ ಮತ್ತು ಮುಂದೂಡಿದ ತೆರಿಗೆ ಸ್ವತ್ತುಗಳನ್ನು ನಗದೀಕರಣ ಮಾಡಿಕೊಳ್ಳಬಹುದಾದ ಸೂಕ್ತವಾದ ಖಚಿತವಾದ ಮುಂದಿನ ತೆರಿಗೆ ವಿಧಿಸಬಹುದಾದ ಆದಾಯವಾಗಿ ಮಾರ್ಪಾಡಾಗುವ ಪ್ರಮಾಣದವರೆಗೆ ಮಾನ್ಯ ಮಾಡಲಾಗಿದೆ.

**ಸ್ವತ್ತುಗಳ ದುರ್ಬಲತೆ :**

ಸ್ವತ್ತುಗಳನ್ನು ನಿರ್ವಹಿಸುವ ವೆಚ್ಚವು ಅದರ ವಸೂಲಿ ಮಾಡಬಹುದಾದ ಮೌಲ್ಯಕ್ಕಿಂತ ಹೆಚ್ಚಾದಾಗ ಆ ಸ್ವತ್ತನ್ನು 'ದುರ್ಬಲಗೊಂಡ ಸ್ವತ್ತು' ಎಂಬುದಾಗಿ ಪರಿಗಣಿಸಲಾಗುತ್ತದೆ. ದುರ್ಬಲ ನಷ್ಟವನ್ನು ಸ್ವತ್ತು ದುರ್ಬಲಗೊಂಡಿರುವುದೆಂದು ಗುರುತಿಸಲಾಗುವ ವರ್ಷದಲ್ಲಿನ ಲಾಭ ಮತ್ತು ನಷ್ಟದ ತಃಖ್ತೆಗೆ ಹಾಕಲಾಗಿರುತ್ತದೆ. ವಸೂಲಿ ಮಾಡಬಹುದಾದ ಮೊತ್ತದ ಅಂದಾಜಿನಲ್ಲಿ ಬದಲಾವಣೆಗಳೇನಾದರೂ ಇದ್ದ ಪಕ್ಷದಲ್ಲಿ ಹಿಂದಿನ ಲೆಕ್ಕಪತ್ರದ ಅವಧಿಯಲ್ಲಿ ಮಾನ್ಯ ಮಾಡಿದ್ದ ದುರ್ಬಲತೆ ನಷ್ಟವನ್ನು ಪ್ರತಿವರ್ತಿಸಲಾಗುವುದು.

**ವ್ಯವಸ್ಥೆ, ಸಂಭಾವ್ಯ ಹೊಣೆಗಾರಿಕೆಗಳು ಮತ್ತು ಸಂಭಾವ್ಯ ಸ್ವತ್ತುಗಳು :**

ಹಿಂದಿನ ಘಟನಾವಳಿಗಳ ಕಾರಣದಿಂದ ಪ್ರಸಕ್ತದಲ್ಲಿ ಭರಿಸಬೇಕಾದ ಜವಾಬ್ದಾರಿ ಇದ್ದಲ್ಲಿ ಮತ್ತು ಸಂಪನ್ಮೂಲಗಳ ಹೊರಹರಿವು ಇರುವ ಸಾಧ್ಯತೆಯ ಸಂದರ್ಭದಲ್ಲಿ ಅಳತೆ ಮಾಡಿದ ಗಣನೀಯ ಪ್ರಮಾಣದ ಅಂದಾಜನ್ನು ಒಳಗೊಂಡ ಏರ್ಪಾಡನ್ನು ಮಾನ್ಯ ಮಾಡಿದೆ. ಸಂಭಾವ್ಯ ಹೊಣೆಗಾರಿಕೆಗಳನ್ನು ಮಾನ್ಯ ಮಾಡಿರುವುದಿಲ್ಲ. ಆದರೆ ಅವುಗಳನ್ನು ಟಿಪ್ಪಣಿಗಳಲ್ಲಿ ತಿಳಿಸಲಾಗಿದೆ. ಸಂಭಾವ್ಯ ಆಸ್ತಿಗಳನ್ನು ಮಾನ್ಯ ಮಾಡಿರುವುದೂ ಇಲ್ಲ ಅಥವಾ ಹಣಕಾಸಿನ ವಿವರಣೆಯಲ್ಲಿ ತಿಳಿಸಿರುವುದೂ ಇಲ್ಲ.

# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
## 31ನೇ ಮಾರ್ಚ್ 2017ರಂದು ಇದ್ದಂತೆ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ

| ವಿವರಗಳು | ಟಿಪ್ಪಣಿ ಸಂಖ್ಯೆ | 31 ಮಾರ್ಚ್ 2017ರಂದು ಇದ್ದಂತೆ ರೂ. | 31 ಮಾರ್ಚ್ 2016ರಂದು ಇದ್ದಂತೆ ರೂ. |
|---|---|---|---|
| **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | |
| **(1) ಷೇರುದಾರರ ನಿಧಿಗಳು** | | | |
| (ಎ) ಷೇರು ಬಂಡವಾಳ | 1 | 24,87,20,000 | 223,720,000 |
| (ಬಿ) ಮೀಸಲು ಮತ್ತು ಹೆಚ್ಚಳ | 2 | 81,13,33,161 | 767,617,978 |
| (2) **ಹಂಚಿಕೆಗಾಗಿ ಉಳಿದಿರುವ ಷೇರು ಅರ್ಜಿ ಹಣ** | 3 | 50,00,000 | 10,000,000 |
| **(3) ಚಾಲ್ತಿಯಲ್ಲದ ಹೊಣೆಗಾರಿಕೆಗಳು** | | | |
| (ಎ) ಇತರೆ ದೀರ್ಘಾವಧಿ ಹೊಣೆಗಾರಿಕೆಗಳು | 4 | 9,83,03,007 | 137,689,220 |
| (ಬಿ) ದೀರ್ಘಾವಧಿ ಏರ್ಪಾಡುಗಳು | 5 | 4,07,75,159 | 42,008,459 |
| **(4) ಚಾಲ್ತಿ ಹೊಣೆಗಾರಿಕೆಗಳು** | | | |
| (ಎ) ಕೊಡತಕ್ಕ ವ್ಯಾಪಾರಿ ಬಾಕಿಗಳು (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಕೊಡಬೇಕಾಗಿರುವುದು ಇಲ್ಲ) | 6 | 1,24,11,00,726 | 1,136,785,920 |
| (ಬಿ) ಇತರೆ ಚಾಲ್ತಿ ಹೊಣೆಗಾರಿಕೆಗಳು | 7 | 54,02,40,447 | 410,128,670 |
| (ಸಿ) ಅಲ್ಪಾವಧಿ ಏರ್ಪಾಡುಗಳು | 8 | 3,72,90,774 | 44,917,140 |
| **ಒಟ್ಟಾರೆ ಈಕ್ವಿಟಿ ಮತ್ತು ಹೊಣೆಗಾರಿಕೆ** | | **3,02,27,63,274** | **2,772,867,387** |
| **ಆಸ್ತಿಗಳು** | | | |
| **(1) ಚಾಲ್ತಿಯಲ್ಲದ ಆಸ್ತಿಗಳು** | | | |
| (ಎ) ಆಸ್ತಿ, ಸ್ಥಾವರ ಮತ್ತು ಉಪಕರಣ | | | |
| i) ಗೋಚರ ಆಸ್ತಿಗಳು | 9(a) | 41,68,50,227 | 42,68,98,554 |
| ii) ಅಗೋಚರ ಆಸ್ತಿಗಳು | 9(b) | 25,16,963 | 3,165,289 |
| iii) ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ | 9(c) | - | 1,48,89,632 |
| (ಬಿ) ಚಾಲ್ತಿಯಲ್ಲದ ಹೂಡಿಕೆಗಳು | 10 | 5 | 5 |
| (ಸಿ) ಮುಂದೂಡಿದ ತೆರಿಗೆ ಆಸ್ತಿಗಳು(ನಿವ್ವಳ) | | 22,17,397 | 69,86,092 |
| (ಡಿ) ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು | 11 | 20,70,83,210 | 20,54,61,630 |
| (ಇ) ಇತರೆ ಚಾಲ್ತಿಯಲ್ಲದ ಆಸ್ತಿಗಳು | 12 | 6,87,933 | 10,55,805 |

| | | | |
|---|---|---|---|
| **(2) ಚಾಲ್ತಿ ಆಸ್ತಿಗಳು** | | | |
| (ಎ) ತಪಶೀಲು ಸರಕುಗಳು | 13 | 76,24,080 | 1,07,84,329 |
| (ಬಿ) ಬರತಕ್ಕ ವ್ಯಾಪಾರಿ ಬಾಕಿಗಳು | 14 | 1,09,01,51,015 | 10,08,667,439 |
| (ಸಿ) ನಗದು ಮತ್ತು ಬ್ಯಾಂಕ್ ಶಿಲ್ಕುಗಳು | 15 | 96,98,16,463 | 77,05,04,625 |
| (ಡಿ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು | 16 | 32,10,62,610 | 31,97,14,579 |
| (ಇ) ಇತರೆ ಚಾಲ್ತಿ ಆಸ್ತಿಗಳು | 17 | 47,53,371 | 47,39,408 |
| **ಒಟ್ಟು ಆಸ್ತಿಗಳು** | | **3,02,27,63,274** | **2,77,28,67,387** |
| **ಮಹತ್ವದ ಲೆಕ್ಕಪತ್ರ ನೀತಿಗಳು ಮತ್ತು ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳು** | ಎ,ಬಿಮತ್ತುಸಿ | | |

**ಇದೇ ದಿನಾಂಕದ ನಮ್ಮ ವರದಿಯಂತೆ**

**ಎಸ್‌ಎಸ್‌ಬಿ ಮತ್ತು ಅಸೋಸಿಯೇಟ್ಸ್ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಸಂಸ್ಥೆಯ ನೋಂದಣಿ ಸಂಖ್ಯೆ: 010372ಎಸ್**
**ಸಹಿ/–**
**ಕೆ. ಬಾಲಾಜಿ**
**ಪಾಲುದಾರರು**
**ಸದಸ್ಯತ್ವ ಸಂಖ್ಯೆ: 207783**

**ಸ್ಥಳ: ಬೆಂಗಳೂರು**
**ದಿನಾಂಕ: 29.08.2017**

**ಮಂಡಳಿಯ ಹೆಸರಿನಲ್ಲಿ ಮತ್ತು ಪರವಾಗಿ**

| | |
|---|---|
| **ಸಹಿ/–** | **ಸಹಿ/–** |
| **ಡಿ.ಸುಧಾಕರ್** | **ರಂಗೇಗೌಡ** |
| **ಅಧ್ಯಕ್ಷರು** | **ವ್ಯವಸ್ಥಾಪಕ ನಿರ್ದೇಶಕರು** |
| **ಡಿಐಎನ್ : 01536333** | **ಡಿಐಎನ್ : 07603038** |

**ಸ್ಥಳ: ಬೆಂಗಳೂರು**
**ದಿನಾಂಕ: 29.08.2017**

# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ

## 31ನೇ ಮಾರ್ಚ್ 2017ಕ್ಕೆ ಮುಕ್ತಾಯಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ

| ವಿವರಗಳು | ಟಿಪ್ಪಣಿ ಸಂಖ್ಯೆ | 31 ಮಾರ್ಚ್ 2017<br>ರೂ. | 31 ಮಾರ್ಚ್ 2016<br>ರೂ. |
|---|---|---|---|
| **ಆದಾಯ :** | | | |
| ಕಾರ್ಯಾಚರಣೆಗಳಿಂದ ಬಂದ ಆದಾಯ | 18 | 2,04,50,50,379 | 2,367,087,227 |
| ಇತರೆ ಆದಾಯ | 19 | 6,19,74,457 | 58,874,726 |
| ಅನುದಾನ ಆದಾಯ– ಕಾಂಟ್ರಾ ನಮೂದು | | 7,47,41,578 | 170,933,264 |
| **ಒಟ್ಟು ಆದಾಯ** | | **2,18,17,66,414** | **2,59,68,95,217** |
| **ವೆಚ್ಚಗಳು:** | | | |
| ವ್ಯಾಪಾರದ ಸರಕುಗಳ ಖರೀದಿ | 20 | 8,18,53,615 | 72,42,30,986 |
| ನೇರ ವೆಚ್ಚಗಳು | 21 | 1,77,34,35,463 | 1,40,51,92,899 |
| ವ್ಯಾಪಾರದ ಸರಕುಗಳ ದಾಸ್ತಾನುಗಳಲ್ಲಿ ಏರಿಳಿತಗಳು | 22 | 31,60,249 | 9,43,045 |
| ನೌಕರರ ಸೌಲಭ್ಯ ವೆಚ್ಚಗಳು | 23 | 11,42,24,866 | 12,72,20,432 |
| ಸವಕಳಿ ಮತ್ತು ಋಣಮುಕ್ತ ವೆಚ್ಚಗಳು | 9(ಎ)&(ಬಿ) | 2,53,63,641 | 26,914,286 |
| ಇತರೆ ವೆಚ್ಚಗಳು | 24 | 4,43,37,687 | 4,42,41,175 |
| ಅನುದಾನ ವೆಚ್ಚ–ಕಾಂಟ್ರಾ ನಮೂದು | | 7,47,41,578 | 17,09,33,264 |
| **ಒಟ್ಟು ವೆಚ್ಚಗಳು** | | **2,11,71,17,099** | **2,49,96,76,087** |
| ಅಸಮಾನ್ಯ ಹಾಗೂ ವಿಶೇಷ ಬಾಬ್ತುಗಳು ಮತ್ತು ತೆರಿಗೆ ಪೂರ್ವದ ಲಾಭ | | 6,46,49,315 | 9,72,19,130 |
| ಕೂಡಿರಿ : ಹಿಂದಿನ ವರ್ಷದ – ಆದಾಯ/(ವೆಚ್ಚಗಳು) | 25 | **29,83,679** | **(7,57,179)** |
| ಅಸಮಾನ್ಯ ಬಾಬ್ತುಗಳು ಮತ್ತು ತೆರಿಗೆ ಪೂರ್ವದ ಲಾಭ | | **6,76,32,994** | **9,64,61,951** |
| **ಕಳೆಯಿರಿ : ಅಸಮಾನ್ಯ ಅಂಶಗಳು** | | - | - |
| ತೆರಿಗೆ ಪೂರ್ವದ ಲಾಭ | | **6,76,32,994** | **9,64,61,951** |
| **ತೆರಿಗೆ ವೆಚ್ಚ:–** | | | |
| 1) ಚಾಲ್ತಿ ತೆರಿಗೆ | | 2,25,00,000 | 30,000,000 |
| 2) ಮುಂದೂಡಿದ ತೆರಿಗೆ | | 47,68,695 | 49,27,254 |
| 3) ಹಿಂದಿನ ವರ್ಷಗಳಿಗೆ ಕಡಿಮೆ/(ಹೆಚ್ಚು) ಏರ್ಪಾಡುಗಳು | | (33,50,882) | (1,72,799) |
| **ತೆರಿಗೆ ಪಾವತಿ ನಂತರ ಮತ್ತು ಅಸಾಧಾರಣ ಬಾಬ್ತುಗಳ ಲಾಭ** | | **4,37,15,181** | **6,17,07,496** |

| | | | |
|---|---|---|---|
| ಪ್ರತಿ ಈಕ್ವಿಟಿ ಷೇರಿನ ಗಳಿಕೆ | | | |
| 1) ಮೂಲ ಬೆಲೆ | | 16.92 | 28.41 |
| 2) ಕುಗ್ಗಿದ ಬೆಲೆ | | 16.89 | 28.36 |
| **ಮಹತ್ವದ ಲೆಕ್ಕಪತ್ರನೀತಿಗಳು ಮತ್ತು ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳು** | ಎ,ಬಿ ಮತ್ತು ಸಿ | | |

**ಇದೇ ದಿನಾಂಕದ ನಮ್ಮ ವರದಿಯಂತೆ**

**ಎಸ್‌ಎಸ್‌ಬಿ ಮತ್ತು ಅಸೋಸಿಯೇಟ್ಸ್ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಸಂಸ್ಥೆಯ ನೋಂದಣಿ ಸಂಖ್ಯೆ: 010372ಎಸ್**
**ಸಹಿ/–**
**ಕೆ. ಬಾಲಾಜಿ**
**ಪಾಲುದಾರರು**
**ಸದಸ್ಯತ್ವ ಸಂಖ್ಯೆ: 207783**

**ಸ್ಥಳ: ಬೆಂಗಳೂರು**
**ದಿನಾಂಕ: 29.08.2017**

**ಮಂಡಳಿಯ ಹೆಸರಿನಲ್ಲಿ ಮತ್ತು ಪರವಾಗಿ**

| | |
|---|---|
| **ಸಹಿ/–** | **ಸಹಿ/–** |
| **ಡಿ.ಸುಧಾಕರ್** | **ರಂಗೇಗೌಡ** |
| **ಅಧ್ಯಕ್ಷರು** | **ವ್ಯವಸ್ಥಾಪಕ ನಿರ್ದೇಶಕರು** |
| **ಡಿಐಎನ್ : 01536333** | **ಡಿಐಎನ್ : 07603038** |

**ಸ್ಥಳ: ಬೆಂಗಳೂರು**
**ದಿನಾಂಕ: 29.08.2017**

# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
## 31ನೇ ಮಾರ್ಚ್ 2017ಕ್ಕೆ ಮುಕ್ತಾಯಗೊಳ್ಳುವ ವರ್ಷದ ನಗದು ಹರಿವು ಪಟ್ಟಿ

| ವಿವರಗಳು | ಟಿಪ್ಪಣಿ ಸಂಖ್ಯೆ | 31.03.2017ರಂದು ಇದ್ದಂತೆ (ರೂ) | | 31.03.2016ರಂದು ಇದ್ದಂತೆ (ರೂ) | |
|---|---|---|---|---|---|
| **ಎ) ಕಾರ್ಯಾಚರಣೆ ಚಟುವಟಿಕೆಗಳಿಂದ ನಗದು ಹರಿವು: ತೆರಿಗೆ ಮತ್ತು ಅಸಮಾನ್ಯ ಬಾಬ್ತುಗಳ ಮುನ್ನದ ನಿವ್ವಳ ಲಾಭ** | | | 6,76,32,994 | | 9,64,61,951 |
| **ಇವುಗಳಿಗೆ ಹೊಂದಾಣಿಕೆ :** | | | | | |
| ಸವಕಳಿ | 9(ಎ)&(ಬಿ) | 2,53,63,641 | | 2,69,14,286 | |
| ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ | 19 | (5,48,16,012) | | (5,58,63,441) | |
| ಇತರೆ ವೆಚ್ಚಗಳು ತೆಗೆದು ಹಾಕಿದ್ದು | | 1,53,819 | | 2,86,173 | |
| ಸ್ಥಿರಾಸ್ತಿಗಳ ಮಾರಾಟದಿಂದ ಆದ(ಲಾಭ/ನಷ್ಟ) | | (2,89,481) | (2,95,88,033) | (1,25,673) | (2,87,88,655) |
| **ದುಡಿಯುವ ಬಂಡವಾಳ ಬದಲಾವಣೆಗಳಿಗಿಂತ ಮುಂಚಿನ ಕಾರ್ಯಾಚರಣೆ ಲಾಭ** | | | **3,80,44,961** | | **6,76,73,296** |
| **ಇವುಗಳಿಗೆ ಹೊಂದಾಣಿಕೆ :** | | | | | |
| ತಪಶೀಲು ಸರಕಿನ ಇಳಿಕೆ | 13 | 31,60,249 | | 9,43,045 | |
| ವ್ಯಾಪಾರದಿಂದ ಬರಬೇಕಾದುದುರಲ್ಲಿ ಇಳಿಕೆ/ಹೆಚ್ಚಳ (ನಿವ್ವಳ) | 14 | (8,14,83,576) | | (19,20,18,422) | |
| ಇತರೆ ಚಾಲ್ತಿ ಮತ್ತು ಚಾಲ್ತಿಯಲ್ಲದ ಆಸ್ತಿಗಳಲ್ಲಿ ಇಳಿಕೆ | 12,17 | (27,69,521) | | (6,05,89,575) | |
| ಚಾಲ್ತಿ ಮತ್ತು ಚಾಲ್ತಿಯಲ್ಲದ ಹೊಣೆಗಳಲ್ಲಿ ಇಳಿಕೆ | 3 ರಿಂದ | 19,36,80,704 | (11,25,87,856) | 15,52,02,164 | (9,64,62,788) |
| ಅಸಮಾನ್ಯ ಅಂಶಗಳ ಮುನ್ನಿನ ನಗದು ಹರಿವು | 8 | | 15,06,32,817 | | (2,87,89,492) |
| ಕಳೆಯಿರಿ : ಅಸಮಾನ್ಯ ವೆಚ್ಚಗಳು | | | – | | – |
| ಆದಾಯ ತೆರಿಗೆ | | | 2,66,49,114 | | 1,48,27,202 |
| **ಕಾರ್ಯಾಚರಣೆ ಚಟುವಟಿಕೆಯಿಂದ ಬಂದ ನಿವ್ವಳ ನಗದು–I** | | | **12,39,83,703** | | **(4,36,16,694)** |
| **ಬಿ) ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | | | | |
| ಸ್ಥಿರಾಸ್ತಿಗಳ ಖರೀದಿ | 9(ಎ)&(ಬಿ) | (1,54,74,539 | | (1,75,41,094) | |
| ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 9(ಸಿ) | 1,48,89,632 | | (38,62,522) | |
| ನಿಶ್ಚಿತ ಸ್ವತ್ತುಗಳ ಮಾರಾಟದಿಂದ ಬಂದ ಹಣ | 9(ಎ)&(ಬಿ) | 10,97,030 | | – | |
| ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ | 19 | 5,48,16,012 | | 5,58,63,441 | |
| **ಹೂಡಿಕೆ ಚಟುವಟಿಕೆಗಳಿಂದ ಬಂದ ನಿವ್ವಳ ನಗದು–II** | | | **5,53,28,135** | | **3,44,59,825** |

| | | | | | |
|---|---|---|---|---|---|
| **ಸಿ) ಹಣಕಾಸು ಚಟುವಟಿಕೆಗಳಿಂದ ಬಂದ ನಗದು ಹರಿವು** | | | | | |
| ಷೇರು ಬಂಡವಾಳದಲ್ಲಿ ಹೆಚ್ಚಳ | 1 | 2,50,00,000 | | 1,00,00,000 | |
| ಹಂಚಿಕೆ ಆಗದೆ ಉಳಿದಿರುವ ಷೇರು ಅರ್ಜಿ ಹಣ | | (50,00,000) | | | |
| ಪಾವತಿಸಿದ ಲಾಭಾಂಶ | 3 | | | (1,06,86,000) | |
| ಪಾವತಿಸಿದ ಲಾಭಾಂಶ ವಿತರಣಾ ತೆರಿಗೆ ಪಾವತಿ | | – | | | |
| **ಹಣಕಾಸು ಚಟುವಟಿಕೆಗಳಿಗೆ ಬಳಸಿದ ನಿವ್ವಳ ನಗದು–III** | | | **(2,00,00,000)** | **(21,87,923)** | **(28,73,923)** |
| **ನಗದು ಮತ್ತು ನಗದು ಸಮಾನಗಳಲ್ಲಿನ ನಿವ್ವಳ ಹೆಚ್ಚಳ I + II+ III** | | | **19,93,11,838** | | **1,20,30,792** |
| **ವರ್ಷಾರಂಭದಲ್ಲಿನ ನಗದು ಮತ್ತು ನಗದು ಸಮಾನಗಳು** | | | 77,05,04,625 | | 78,25,35,417 |
| **ವರ್ಷಾಂತ್ಯದಲ್ಲಿನ ನಗದು ಮತ್ತು ನಗದು ಸಮಾನಗಳು** | | | **96,98,16,463** | | **77,05,04,625** |
| **ಮಹತ್ವದ ಲೆಕ್ಕಪತ್ರ ನೀತಿಗಳು ಮತ್ತು ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳು ಎ,ಬಿ ಮತ್ತು ಸಿ** | | | | | |

**ಇದೇ ದಿನಾಂಕದ ನಮ್ಮ ವರದಿಯಂತೆ**

**ಎಸ್‌ಎಸ್‌ಬಿ ಅಂಡ್ ಅಸೋಸಿಯೇಟ್ಸ್ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಸಂಸ್ಥೆಯ ನೋಂದಣಿ ಸಂಖ್ಯೆ: 010372ಎಸ್**
**ಸಹಿ/–**
**ಕೆ. ಬಾಲಾಜಿ**
**ಪಾಲುದಾರರು**
**ಸದಸ್ಯತ್ವ ಸಂಖ್ಯೆ: 207783**

**ಸ್ಥಳ: ಬೆಂಗಳೂರು**
**ದಿನಾಂಕ: 29.08.2017**

**ಮಂಡಳಿಯ ಹೆಸರಿನಲ್ಲಿ ಮತ್ತು ಪರವಾಗಿ**

**ಸಹಿ/–**
**ಡಿ.ಸುಧಾಕರ್**
**ಅಧ್ಯಕ್ಷರು**
**ಡಿಐಎನ್ : 01536333**

**ಸಹಿ/–**
**ರಂಗೇಗೌಡ**
**ವ್ಯವಸ್ಥಾಪಕ ನಿರ್ದೇಶಕರು**
**ಡಿಐಎನ್ : 07603038**

**ಸ್ಥಳ: ಬೆಂಗಳೂರು**
**ದಿನಾಂಕ: 29.08.2017**

## ಬಿ. 31ನೇ ಮಾರ್ಚ್ 2017ರಂದು ಇದ್ದಂತೆ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

**ಟಿಪ್ಪಣಿ : 1 ಷೇರು ಬಂಡವಾಳ**

| ವಿವರಗಳು | 31.03.2017ರಂದು ಇದ್ದಂತೆ–ರೂ. | 31.03.2016ರಂದು ಇದ್ದಂತೆ–ರೂ. |
|---|---|---|
| (ಎ) **ಅಧಿಕೃತ ಷೇರು ಬಂಡವಾಳ :**<br>ತಲಾ ರೂ.100/–ರ 27,50,000 ಈಕ್ವಿಟಿ ಷೇರುಗಳು | 27,50,00,000 | 27,50,00,000 |
| | 27,50,00,000 | 27,50,00,000 |
| **ನೀಡಿದ ಷೇರು ಬಂಡವಾಳ**<br>ತಲಾ ರೂ.100/–ರ ಪೂರ್ತಿ ಪಾವತಿಸಿದ 24,87,200 ಈಕ್ವಿಟಿ ಷೇರುಗಳು | 24,87,20,000 | 22,37,20,000 |
| **ಚಂದಾದಾರಿಕೆಯಾದ ಮತ್ತು ಪೂರ್ತಿ ಸಂದಾಯಿಸಿದ ಷೇರು ಬಂಡವಾಳ**<br>ತಲಾ ರೂ.100/–ರ ಪೂರ್ತಿ ಪಾವತಿಸಿದ 24,87,200 ಈಕ್ವಿಟಿ ಷೇರುಗಳು | 24,87,20,000 | 22,37,20,000 |
| (ತಲಾ ರೂ.100/–ರ ಪೂರ್ತಿ ಪಾವತಿಸಿದ 22,37,200 ಈಕ್ವಿಟಿ ಷೇರುಗಳು | 24,87,20,000 | 22,37,20,000 |
| ತಲಾ ರೂ.100/– ಪೂರ್ತಿ ಪಾವತಿಸಿದ 2,50,000 ಈಕ್ವಿಟಿ ಷೇರುಗಳು) | **24,87,20,000** | **22,37,20,000** |

(ಬಿ) **ಷೇರು ಬಂಡವಾಳ –** ವರದಿಯ ಅವಧಿಯ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಬಾಕಿಯಿರುವ ಷೇರುಗಳ ಸಂಖ್ಯೆಯ ಹೊಂದಾಣಿಕೆ

| ವಿವರಗಳು | 31.03.2017ರಂದು ಇದ್ದಂತೆ | | 31.03.2016ರಂದು ಇದ್ದಂತೆ | |
|---|---|---|---|---|
| | **ಸಂಖ್ಯೆ** | **ಮೊತ್ತ (ರೂ.)** | **ಸಂಖ್ಯೆ** | **ಮೊತ್ತ (ರೂ.)** |
| ವರ್ಷಾರಂಭದಲ್ಲಿ ಬಾಕಿಯಿರುವ ಷೇರುಗಳು | 22,37,200 | 22,37,20,000 | 21,37,200 | 21,37,20,000 |
| ಸೇರಿಸಿ: ಪ್ರಸ್ತುತ ವರ್ಷಾವಧಿಯಲ್ಲಿ ನೀಡಿದ ಷೇರುಗಳು | 2,50,000 | 2,50,00,000 | 1,00,000 | 1,00,00,000 |
| ಕಳೆಯಿರಿ: ಪ್ರಸ್ತುತ ವರ್ಷಾವಧಿಯಲ್ಲಿ ಮರಳಿ ಖರೀದಿಸಿದ ಷೇರುಗಳು | – | – | – | – |
| ಪ್ರಸ್ತುತ ವರ್ಷಾವಧಿಯ ಅಂತ್ಯದಲ್ಲಿ ಬಾಕಿಯಿರುವ ಷೇರುಗಳು | 24,87,200 | 24,87,20,000 | 22,37,200 | 22,37,20,000 |

(ಸಿ) **ಷೇರು ಬಂಡವಾಳ –** ಪ್ರತಿ ಷೇರುದಾರರಲ್ಲಿರುವ 5%ಕ್ಕಿಂತ ಅಧಿಕ ಷೇರುಗಳನ್ನು ಹೊಂದಿದ ಕಂಪನಿಯ ಷೇರುಗಳ ವಿವರಗಳು

| ಷೇರುದಾರರ ಹೆಸರು | 31.03.2017ರಂದು ಇದ್ದಂತೆ | | 31.03.2016ರಂದು ಇದ್ದಂತೆ | |
|---|---|---|---|---|
| | *ಷೇರುಗಳ ಸಂಖ್ಯೆ* | *ಶೇ. ಹೊಂದಿರುವಿಕೆ%* | *ಷೇರುಗಳ ಸಂಖ್ಯೆ* | *ಶೇ. ಹೊಂದಿರುವಿಕೆ%* |
| ಮಾನ್ಯ ರಾಜ್ಯಪಾಲರು, ಕರ್ನಾಟಕ ರಾಜ್ಯ<br>(24,87,200 ಷೇರುಗಳಲ್ಲಿ ನಾಮ ನಿರ್ದೇಶಿತ ನಿರ್ದೇಶಕರು 11 ಷೇರುಗಳನ್ನು ಹೊಂದಿರುತ್ತಾರೆ) | 24,87,200 | 100.00% | 22,37,200 | 100.00% |

*(ಡಿ) ಒಂದು ವೇಳೆ ಕಂಪನಿ ಪರಿಸಮಾಪ್ತಿಯಾದಲ್ಲಿ ಈಕ್ವಿಟಿ ಷೇರು ಹೊಂದಿರುವವರು ಎಲ್ಲಾ ಪ್ರಿಫರೆನ್ಷಿಯಲ್ ಮೊತ್ತಗಳನ್ನು ವಿತರಣೆ ಮಾಡಿದ ನಂತರ ಕಂಪನಿಯ ಉಳಿದ ಆಸ್ತಿಗಳನ್ನು ಪಡೆಯಲು ಅರ್ಹರಾಗಿರುವರು. ಷೇರುಗಳ ವಿತರಣೆಯನ್ನು ಷೇರುದಾರರು ಹೊಂದಿರುವ ಈಕ್ವಿಟಿ ಷೇರುಗಳ ಸಂಖ್ಯೆಗೆ ಅನುಪಾತವಾಗಿ ಮಾಡಲಾಗುವುದು.*

**ಟಿಪ್ಪಣಿ : 2 ಮೀಸಲುಗಳು ಮತ್ತು ಹೆಚ್ಚಳ**

| ವಿವರಗಳು | 31.03.2017ರಂದು ಇದ್ದಂತೆ ರೂ. | 31.03.2016ರಂದು ಇದ್ದಂತೆ ರೂ. |
|---|---|---|
| ಲಾಭ ಮತ್ತು ನಷ್ಟ ತಃಖ್ತೆಯಲ್ಲಿನ ಹೆಚ್ಚುವರಿ ಶಿಲ್ಕು | | |
| **ಆರಂಭಿಕ ಶಿಲ್ಕು** | **76,76,17,980** | **70,59,10,482** |
| ಸೇರಿಸಿ: ತೆರಿಗೆಯನ್ನು ಲಾಭ ಮತ್ತು ನಷ್ಟದ ತಃಖ್ತೆಯಿಂದ ವರ್ಗಾವಣೆ ಮಾಡಿದ ನಂತರ ನಿವ್ವಳ ಲಾಭ | 4,37,15,181 | 6,17,07,496 |
| **ಮುಕ್ತಾಯದ ಶಿಲ್ಕು** | **81,13,33,161** | **76,76,17,978** |

**ಟಿಪ್ಪಣಿ : 3 ಹಂಚಿಕೆಗಾಗಿ ಕಾದಿರಿಸಿರುವ ಷೇರು ಅರ್ಜಿ ಹಣ**

| ವಿವರಗಳು | 31.03.2017ರಂದು ಇದ್ದಂತೆ ರೂ. | 31.03.2016ರಂದು ಇದ್ದಂತೆ ರೂ. |
|---|---|---|
| ಷೇರು ಅರ್ಜಿ ಹಣ | 50,00,000 | 1,00,00,000 |
| **ನಿಯಮಗಳು ಮತ್ತು ನಿಬಂಧನೆಗಳು:** | | |
| ಎ) ಹಾಲಿಯಿರುವ ಈಕ್ವಿಟಿ ಷೇರುಗಳಿಗೆ ಸರಿ ಸಮಾನವಾಗಿರುವುದು | | |
| ಬಿ) ಕಂಪನಿಯು ತಲಾ ರೂ.100/- ಮುಖ ಬೆಲೆಯ 50,000 ಈಕ್ವಿಟಿ ಷೇರುಗಳನ್ನು ನೀಡಲು ಉದ್ದೇಶಿಸಿದೆ | | |
| ಸಿ) ಕಂಪನಿಯ ಅಧಿಕೃತ ಬಂಡವಾಳವು ಮೇಲೆ ತಿಳಿಸಿರುವ ಷೇರುಗಳನ್ನು ಹಂಚಿಕೆ ಮಾಡಲು ಸಾಕಷ್ಟಿದೆ. | | |
| ಡಿ) 9ನೇ ಮೇ 2017ರ ಒಳಗೆ ಈಕ್ವಿಟಿ ಷೇರುಗಳನ್ನು ನೀಡಲು ಉದ್ದೇಶಿಸಲಾಗಿದೆ. | 50,00,000 | 1,00,00,000 |

**ಟಿಪ್ಪಣಿ : 4 ಇತರೆ ದೀರ್ಘಾವಧಿ ಹೊಣೆಗಾರಿಕೆಗಳು**

| ವಿವರಗಳು | 31.03.2017ರಂದು ಇದ್ದಂತೆ ರೂ. | 31.03.2016ರಂದು ಇದ್ದಂತೆ ರೂ. |
|---|---|---|
| ಠೇವಣಿಗಳು | 8,42,42,815 | 12,36,29,028 |
| ಮುಂಗಡವಾಗಿ ಪಡೆದ ಗುತ್ತಿಗೆ ಬಾಡಿಗೆ | 1,40,60,192 | 1,40,60,192 |
| | **9,83,03,007** | **13,76,89,220** |

**ಟಿಪ್ಪಣಿ : 5 ದೀರ್ಘಾವಧಿ ಏರ್ಪಾಡುಗಳು**

| ವಿವರಗಳು | 31.03.2017ರಂದು ಇದ್ದಂತೆ ರೂ. | 31.03.2016ರಂದು ಇದ್ದಂತೆ ರೂ. |
|---|---|---|
| **ನೌಕರರ ಸೌಲಭ್ಯಗಳಿಗಾಗಿ ಏರ್ಪಾಡುಗಳು** | | |
| ರಜಾ ಸಂಬಳಗಳಿಗಾಗಿ ಏರ್ಪಾಡು | 4,07,75,159 | 4,20,08,459 |
| | **4,07,75,159** | **4,20,08,459** |

**ಟಿಪ್ಪಣಿ : 6 ವ್ಯಾಪಾರಿ ಸಂದಾಯಗಳು**

| ವಿವರಗಳು | 31.03.2017ರಂದು ಇದ್ದಂತೆ ರೂ. | 31.03.2016ರಂದು ಇದ್ದಂತೆ ರೂ. |
|---|---|---|
| ಸರಕು ಮತ್ತು ಸೇವೆಗಳ ಸಾದಿಲ್ವಾರು ಲೇಣೆದಾರರು | 1,24,11,00,726 | 1,13,67,85,920 |
| | **1,24,11,00,726** | **1,13,67,85,920** |

**ಟಿಪ್ಪಣಿ : 7 ಇತರೆ ಚಾಲ್ತಿ ಹೊಣೆಗಾರಿಕೆಗಳು**

| ವಿವರಗಳು | 31.03.2017ರಂದು ಇದ್ದಂತೆ ರೂ. | 31.03.2016ರಂದು ಇದ್ದಂತೆ ರೂ. |
|---|---|---|
| ಠೇವಣಿಗಳು | 4,86,85,913 | 4,23,10,638 |
| ಪಾವತಿಸಬೇಕಿರುವ ಶಾಸನಬದ್ಧ ಬಾಕಿಗಳು | 2,26,59,598 | 3,52,85,765 |
| ಬಂಡವಾಳ ವೆಚ್ಚಗಳಿಗೆ ಸಾದಿಲ್ವಾರು ಜಮಾಗಳು | 1,28,09,435 | 1,30,98,321 |
| ವೆಚ್ಚಗಳಿಗೆ ಸಾದಿಲ್ವಾರು ಜಮಾ | 1,20,66,443 | 1,32,53,865 |
| ಗ್ರಾಹಕರು ಮತ್ತು ಇತರರಿಂದ ಸ್ವೀಕರಿಸಿದ ಮುಂಗಡ | 19,99,69,214 | 15,84,37,144 |
| ವೆಚ್ಚವಾಗಿರದ ಅನುದಾನಗಳು | 24,21,66,499 | 14,57,08,077 |
| ಇತರೆ ಹೊಣೆಗಾರಿಕೆಗಳು | 18,83,345 | 20,34,860 |
| | **54,02,40,447** | **41,01,28,670** |

**ಟಿಪ್ಪಣಿ : 8 ಅಲ್ಪಾವಧಿ ಏರ್ಪಾಡುಗಳು**

| ವಿವರಗಳು | 31.03.2017ರಂದು ಇದ್ದಂತೆ ರೂ. | 31.03.2016ರಂದು ಇದ್ದಂತೆ ರೂ. |
|---|---|---|
| ತೆರಿಗೆಗಾಗಿ ಏರ್ಪಾಡು | 2,25,00,000 | 3,00,00,000 |
| ನೌಕರರ ಸೌಲಭ್ಯಗಳಿಗಾಗಿ ಏರ್ಪಾಡು : | | |
| – ರಜೆ ವೇತನಕ್ಕೆ ಏರ್ಪಾಡು | 1,13,24,111 | 1,07,97,380 |
| – ಗ್ರಾಚ್ಯುಯಿಟಿಗೆ ಏರ್ಪಾಡು | 34,66,663 | 41,19,760 |
| | **3,72,90,774** | **4,49,17,140** |

## ಟಿಪ್ಪಣಿ : 9(ಎ) ಮತ್ತು 9(ಬಿ) – ಆಸ್ತಿ, ಸ್ಥಾವರ ಮತ್ತು ಉಪಕರಣ

(ರೂ.ಗಳಲ್ಲಿ)

| ಕ್ರ. ಸಂ. | ವಿವರಗಳು | ಒಟ್ಟು ಬ್ಲಾಕ್ | | | | | | ಸವಕಳಿ ಬ್ಲಾಕ್ | | | | | ನಿವ್ವಳ ಬ್ಲಾಕ್ | |
|---|---|---|---|---|---|---|---|---|---|---|---|---|---|---|
| | | 01.04.2016 ರಲ್ಲಿದ್ದಂತೆ | ಪ್ರಸಕ್ತ ವರ್ಷದ ಸೇರ್ಪಡೆ | ವರ್ಷದ ತೆಗೆದುಹಾಕುವಿಕೆ ಪ್ರಸಕ್ತ ವರ್ಷ | ವರ್ಷದ ತೆಗೆದುಹಾಕುವಿಕೆ ಸರ್ಕಾರಿ ಅನುದಾನ | ವಜಾ ಮಾಡಿದ ಸ್ವತ್ತುಗಳು | 31.03.2017 ರಲ್ಲಿದ್ದಂತೆ | 01.04.2016 ರವರೆಗೆ | ಪ್ರಸಕ್ತ ವರ್ಷ | ಪ್ರಸಕ್ತ ವರ್ಷದ ತೆಗೆದು ಹಾಕುವಿಕೆ | ವಜಾ ಮಾಡಿದ ಸ್ವತ್ತುಗಳು | 31.03.2017 ರವರೆಗೆ | 31.03.2017 ರಲ್ಲಿದ್ದಂತೆ | 31.03.2016 ರಲ್ಲಿದ್ದಂತೆ |
| 9(ಎ) | **ಗೋಚರ ಆಸ್ತಿಗಳು** | | | | | | | | | | | | | |
| 1 | ಜಮೀನು – ಪೂರ್ಣ ಒಡೆತನ | 97,835,288 | – | – | – | – | 97,835,288 | 2,115,641 | – | – | – | 2,115,641 | 95,719,647 | 95,719,647 |
| | *ಹಿಂದಿನ ವರ್ಷ* | *97,639,754* | *187,110* | – | – | – | *97,826,864* | *2,115,641* | – | – | – | *2,115,641* | *95,711,223* | *95,524,113* |
| 2 | ಜಮೀನು – ಗುತ್ತಿಗೆಯದು | 5,247,875 | – | – | – | – | 5,247,875 | 1,574,170 | 174,930 | – | – | 1,749,100 | 3,498,775 | 3,673,705 |
| | *ಹಿಂದಿನ ವರ್ಷ* | *5,247,875* | – | – | – | – | *5,247,875* | *1,399,240* | *174,930* | – | – | *1,574,170* | *3,673,705* | *3,848,635* |
| 3 | ಕಟ್ಟಡ | 253,966,292 | 13,012,683 | 160,078 | – | – | 266,818,897 | 6,716,123 | 4,484,588 | 160,078 | – | 11,040,633 | 255,778,264 | 247,250,170 |
| | *ಹಿಂದಿನ ವರ್ಷ* | *253,974,716* | – | – | – | – | *253,974,716* | *2,463,528* | *4,252,594* | – | – | *6,716,122* | *247,258,594* | *251,511,188* |
| 4 | ಟಾರು ಹಾಕಿದ ರಸ್ತೆಗಳು | 15,552,933 | – | – | – | – | 15,552,933 | 6,777,467 | 3,856,817 | – | – | 10,634,284 | 4,918,649 | 8,775,466 |
| | *ಹಿಂದಿನ ವರ್ಷ* | *15,552,933* | – | – | – | – | *15,552,933* | *2,920,650* | *3,856,817* | – | – | *6,777,467* | *8,775,466* | *12,632,283* |
| 5 | ವಾಹನಗಳು | 6,738,572 | – | – | – | – | 6,738,572 | 2,409,509 | 641,766 | – | – | 3,051,275 | 3,687,297 | 4,329,063 |
| | *ಹಿಂದಿನ ವರ್ಷ* | *6,738,572* | – | – | – | – | *6,738,572* | *1,636,543* | *772,966* | – | – | *2,409,509* | *4,329,063* | *5,102,029* |
| 6 | ಕಂಪ್ಯೂಟರ್ಸ್ | 5,232,065 | 1,352,496 | 1,532,206 | – | – | 5,052,355 | 3,602,742 | 903,097 | 1,198,570 | – | 3,307,269 | 1,745,086 | 1,629,324 |
| | *ಹಿಂದಿನ ವರ್ಷ* | *4,539,164* | *692,901* | – | – | – | *5,232,065* | *2,315,322* | *1,287,420* | – | – | *3,602,742* | *1,629,323* | *2,223,842* |
| 7 | ಸರ್ವರ್‌ಗಳು ಮತ್ತು ನೆಟ್‌ವರ್ಕ್ಸ್ | 75,442,018 | – | – | – | – | 75,442,018 | 45,630,993 | 8,743,131 | – | – | 54,374,124 | 21,067,894 | 29,811,025 |
| | *ಹಿಂದಿನ ವರ್ಷ* | *65,152,948* | *10,289,070* | – | – | – | *75,442,018* | *35,522,497* | *10,108,496* | – | – | *45,630,993* | *29,811,025* | *29,630,451* |
| 8 | ಕಚೇರಿ ಉಪಕರಣ | 167,753,944 | 296,041 | 755,890 | – | – | 167,294,095 | 159,467,667 | 2,209,521 | 452,081 | – | 161,225,107 | 6,068,988 | 8,286,276 |
| | *ಹಿಂದಿನ ವರ್ಷ* | *165,237,812* | *2,782,463* | *266,330* | – | – | *167,753,945* | *156,988,633* | *2,604,707* | *125,673* | – | *159,467,667* | *8,286,278* | *8,249,179* |
| 9 | ಪೀಠೋಪಕರಣ ಮತ್ತು ಅಳವಡಿಕೆಗಳು | 36,125,825 | 357,887 | 250,099 | – | – | 36,233,613 | 8,701,948 | 3,246,033 | 79,995 | – | 11,867,986 | 24,365,627 | 27,423,878 |
| | *ಹಿಂದಿನ ವರ್ಷ* | *35,014,244* | *1,111,581* | – | – | – | *36,125,825* | *5,516,941* | *3,185,007* | – | – | *8,701,948* | *27,423,877* | *29,497,303* |
| | **ಉಪ ಮೊತ್ತ (ಎ)** | **663,894,812** | **15,019,107** | **2,698,273** | – | – | **676,215,646** | **236,996,260** | **24,259,883** | **1,890,724** | – | **259,365,419** | **416,850,227** | **426,898,554** |
| | **ಉಪ ಮೊತ್ತ ಹಿಂದಿನ ವರ್ಷ** | ***649,098,018*** | ***15,063,125*** | ***266,330*** | – | – | ***663,894,813*** | ***210,878,995*** | ***26,242,937*** | ***125,673*** | – | ***236,996,259*** | ***426,898,554*** | ***438,219,023*** |
| 9(ಬಿ) | **ಅಗೋಚರ ಆಸ್ತಿಗಳು** | | | | | | | | | | | | | |
| 1 | ಸಾಫ್ಟ್‌ವೇರ್ | 46,24,809 | 4,55,432 | – | – | – | 50,80,241 | 14,59,520 | 11,03,758 | – | – | 25,63,278 | 25,16,963 | *31,65,289* |
| | *ಹಿಂದಿನ ವರ್ಷ* | *1,880,510* | *2,744,299* | – | – | – | *4,624,809* | *788,171* | *671,349* | – | – | *1,459,520* | *3,165,289* | *1,092,339* |
| | **ಉಪ ಮೊತ್ತ (ಬಿ)** | ***1,880,510*** | ***2,744,299*** | – | – | – | ***4,624,809*** | ***788,171*** | ***671,349*** | – | – | ***1,459,520*** | ***3,165,289*** | ***1,092,339*** |
| | **ಪ್ರಸಕ್ತ ವರ್ಷ (ಒಟ್ಟು=ಎ+ಬಿ)** | **668,519,621** | **15,474,539** | **2,698,273** | – | – | **681,295,887** | **238,455,780** | **25,363,641** | **1,890,724** | – | **261,928,697** | **419,367,190** | **430,063,843** |
| | **ಹಿಂದಿನ ವರ್ಷ** | ***650,978,528*** | ***17,807,424*** | ***266,330*** | – | – | ***668,519,622*** | ***211,667,166*** | ***26,914,286*** | ***125,673*** | – | ***238,455,779*** | ***430,063,843*** | ***439,311,362*** |

**ಸೂಚನೆ : 1.** ದಿನಾಂಕ : **01.04.2004**ರಂದು ಅಥವಾ ನಂತರ ಸರ್ಕಾರದ ಅನುದಾನದಿಂದ ಪಡೆದುಕೊಂಡ ಆಸ್ತಿಗಳನ್ನು ಸಾಧಾರಣ ಮೌಲ್ಯದಲ್ಲಿ ತೋರಿಸಿದೆ.

**2.** ಜಮೀನು ಮತ್ತು ಕಟ್ಟಡಗಳು ಇವೆರಡನ್ನೂ ಒಳಗೊಂಡ ಈ ಹಿಂದಿನ ಮೊತ್ತ ರೂ.**8,424/–** ಅನ್ನು ಕಟ್ಟಡಗಳ ಅಡಿಯಲ್ಲಿ ವರ್ಗೀಕರಿಸಿದೆ. ಕಟ್ಟಡವನ್ನು ಬೀಳಿಸಿದರಿಂದ ಸದರಿ ರೂ.**8,424/–** ಮೊತ್ತವನ್ನು ಮುಕ್ತ ಹಿಡುವಳಿ ಜಮೀನು ಆಗಿ ಪರಿಗಣಿಸಿದೆ ಮತ್ತು ವರ್ಗೀಕರಿಸಿದೆ.

**ಟಿಪ್ಪಣಿ : 9(ಸಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ** (ರೂ.ಗಳಲ್ಲಿ)

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ – ಐಟಿ ಪಾರ್ಕ್‌ಗಳು | – | 1,10,27,110 |
| ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ – ಕಚೇರಿ ಕಟ್ಟಡಗಳು | – | 38,62,522 |
| | – | **1,48,89,632** |

**ಟಿಪ್ಪಣಿ : 10 ಚಾಲ್ತಿಯಲ್ಲದ ಹೂಡಿಕೆಗಳು**

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| **ಪಟ್ಟೀಕರಣಗೊಳ್ಳದ್ದು – ವಾಣಿಜ್ಯೇತರ :** | | |
| ಮೆ॥ ಡಾ. ಶೆಟ್ ಮ್ಯಾಗ್ನೆಟಿಕ್ಸ್ ಪ್ರೈವೇಟ್ ಲಿಮಿಟೆಡ್ | 24,000 | 24,000 |
| ತಲಾ ರೂ.100/–ರ 240 ಈಕ್ವಿಟಿ ಷೇರುಗಳು | | |
| ಕಳೆಯಿರಿ : ಬೆಲೆಯಲ್ಲಿನ ಇಳಿಕೆಗಾಗಿ ಏರ್ಪಾಡು | 23,999 | 23,999 |
| | 1 | 1 |
| ಮೆ॥ ಕರ್ನಾಟಕ ಟೆಲಿಕಾಂ ಲಿಮಿಟೆಡ್ | 26,00,000 | 26,00,000 |
| ತಲಾ ರೂ.100/–ರ 78,000 ಈಕ್ವಿಟಿ ಷೇರುಗಳು | | |
| (52,000 ಬೋನಸ್ ಷೇರುಗಳು ಸೇರಿದಂತೆ) | | |
| ಕಳೆಯಿರಿ : ಬೆಲೆಯಲ್ಲಿನ ಇಳಿಕೆಗಾಗಿ ಏರ್ಪಾಡು | 25,99,999 | 25,99,999 |
| | 1 | 1 |
| ಮೆ॥ ಕಿಯೋನಿಕ್ಸ್ ಪೆಂಟಾ ಸೆಮಿ ಕಂಡಕ್ಟರ್ಸ್ ಲಿಮಿಟೆಡ್ | | |
| ತಲಾ ರೂ.100/–ರ 7,480 ಈಕ್ವಿಟಿ ಷೇರುಗಳು | 7,48,000 | 7,48,000 |
| ಕಳೆಯಿರಿ : ಬೆಲೆಯಲ್ಲಿನ ಇಳಿಕೆಗಾಗಿ ಏರ್ಪಾಡು | 7,47,999 | 7,47,999 |
| | 1 | 1 |
| ಮೆ॥ ಸ್ಪೀಡ್ (ಇಂಡಿಯಾ) ಟೆಲ್‌ಟ್ರಾನಿಕ್ಸ್ ಲಿಮಿಟೆಡ್ | | |
| ತಲಾ ರೂ.10/–ರ 3,41,000 ಈಕ್ವಿಟಿ ಷೇರುಗಳು | 34,10,000 | 34,10,000 |
| ಕಳೆಯಿರಿ : ಬೆಲೆಯಲ್ಲಿನ ಇಳಿಕೆಗಾಗಿ ಏರ್ಪಾಡು | 34,09,999 | 34,09,999 |
| | 1 | 1 |
| ಮೆ॥ ಅಲ್ಟ್ರಾಸಾನಿಕ್ ಇನ್‌ಸ್ಟ್ರುಮೆಂಟೇಶನ್ಸ್ ಪ್ರೈವೇಟ್ ಲಿಮಿಟೆಡ್ | | |
| ತಲಾ ರೂ.100/–ರ 230 ಈಕ್ವಿಟಿ ಷೇರುಗಳು | 23,000 | 23,000 |
| ಕಳೆಯಿರಿ: ಬೆಲೆಯಲ್ಲಿನ ಇಳಿಕೆಗಾಗಿ ಏರ್ಪಾಡು | 22,999 | 22,999 |
| | 1 | 1 |
| | **5** | **5** |

(ಷೇರುಗಳಲ್ಲಿ ಹೂಡಿಕೆಗಳಿಗೆ ಏರ್ಪಾಡು ಮಾಡಲಾಗಿದೆ. ಮೇಲಿನ ಕಂಪನಿಗಳ ಪೈಕಿ ಮೆ॥ ಕರ್ನಾಟಕ ಟೆಲಿಕಾಂ ಲಿಮಿಟೆಡ್, ಮೆ॥ ಕಿಯೋನಿಕ್ಸ್ ಪೆಂಟಾ ಸೆಮಿ ಕಂಡಕ್ಟರ್ಸ್ ಲಿಮಿಟೆಡ್ ಮತ್ತು ಮೆ॥ ಸ್ಪೀಡ್ (ಇಂಡಿಯಾ) ಟೆಲ್ಟ್ರಾನಿಕ್ಸ್ ಲಿಮಿಟೆಡ್ ಕಂಪನಿಗಳು ಪರಿಸಮಾಪ್ತಿಯಲ್ಲಿವೆ)

**ಟಿಪ್ಪಣಿ : 11 ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು**

(ರೂ.ಗಳಲ್ಲಿ)

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| **ಬಂಡವಾಳ ಮುಂಗಡಗಳು** | | |
| ಎ) ಸುಭದ್ರ, ಉತ್ತಮವೆಂದು ಪರಿಗಣಿಸಿದ್ದು : | – | – |
| ಬಿ) ಅಭದ್ರ, ಉತ್ತಮವೆಂದು ಪರಿಗಣಿಸಿದ್ದು: | 20,00,00,000 | 20,00,00,000 |
| ಸಿ) ಸಂದೇಹಾಸ್ಪದ | – | – |
| ಒಟ್ಟು – (ಎ) | 20,00,00,000 | 20,00,00,000 |
| **ಭದ್ರತಾ ಠೇವಣಿಗಳು** | | |
| ಎ) ಸುಭದ್ರ, ಉತ್ತಮವೆಂದು ಪರಿಗಣಿಸಿದ್ದು : | – | – |
| ಬಿ) ಅಭದ್ರ, ಉತ್ತಮವೆಂದು ಪರಿಗಣಿಸಿದ್ದು: | 57,72,387 | 42,87,210 |
| ಸಿ) ಸಂದೇಹಾಸ್ಪದ | | |
| ಒಟ್ಟು – (ಬಿ) | 57,72,387 | 42,87,210 |
| **ಇತರೆ ಸಾಲಗಳು ಮತ್ತು ಮುಂಗಡಗಳು** | | |
| ಎ) ಸುಭದ್ರ, ಉತ್ತಮವೆಂದು ಪರಿಗಣಿಸಿದ್ದು : | | |
| – ಸಿಬ್ಬಂದಿಗೆ ಮುಂಗಡ | 6,51,897 | 5,08,158 |
| ಬಿ) ಅಭದ್ರ, ಉತ್ತಮವೆಂದು ಪರಿಗಣಿಸಿದ್ದು | | |
| – ಸಿಬ್ಬಂದಿಗೆ ಮುಂಗಡ – ಇತರರು | 6,58,926 | 6,66,262 |
| ಸಿ) ಸಂದೇಹಾಸ್ಪದ | | |
| – ಯೋಜನೆಗಳಿಗಾಗಿ ಮುಂಗಡ | 5,76,953 | 5,76,953 |
| | 18,87,776 | 17,51,373 |
| (ಕಳೆಯಿರಿ) : ಸಂದೇಹಾಸ್ಪದ ಸಾಲ ಮತ್ತು ಮುಂಗಡಗಳಿಗೆ ಏರ್ಪಾಡು | (5,76,953) | (5,76,953) |
| ಒಟ್ಟು – (ಸಿ) | 13,10,823 | 11,74,420 |
| (ಎ)+(ಬಿ)+(ಸಿ)ರ ಒಟ್ಟು | **20,70,83,210** | **20,54,61,630** |

**ಟಿಪ್ಪಣಿ : 12 ಇತರೆ ಚಾಲ್ತಿಯಲ್ಲದ ಆಸ್ತಿಗಳು**

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| ಮುಂಗಡ ಪಾವತಿಸಿದ ವೆಚ್ಚಗಳು | 6,87,933 | 10,55,805 |
| | **6,87,933** | **10,55,805** |

**ಟಿಪ್ಪಣಿ : 13 ತಪಶೀಲು**

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| ಎಲೆಕ್ಟ್ರಾನಿಕ್ ಸಿಟಿಯಲ್ಲಿನ ಜಮೀನು | 73,60,200 | 1,04,08,814 |
| ಪುಸ್ತಕಗಳು | 2,63,880 | 3,75,515 |
| | **76,24,080** | **1,07,84,329** |

**ಟಿಪ್ಪಣಿ : 14 ವಸೂಲಿಯಾಗಬೇಕಾಗದ ವ್ಯಾಪಾರಿ ಬಾಕಿಗಳು** (ರೂ.ಗಳಲ್ಲಿ)

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| **ಆರು ತಿಂಗಳು ಮೀರಿದ ಅವಧಿಯ ಬಾಕಿ** (ಸಾಲಗಾರರ ವೈಯಕ್ತಿಕ ಭದ್ರತೆ ಹೊರತುಪಡಿಸಿ ಮತ್ತಾವುದೇ ಭದ್ರತೆಯಿಲ್ಲದ ಉತ್ತಮವೆಂದು ಪರಿಗಣಿಸಿದ ಸಾಲ) | | |
| ಎ) ಸುಭದ್ರ, ಉತ್ತಮವೆಂದು ಪರಿಗಣಿಸಿದ್ದು | – | – |
| ಬಿ) ಅಭದ್ರ, ಉತ್ತಮವೆಂದು ಪರಿಗಣಿಸಿದ್ದು | 64,55,42,827 | 50,09,80,579 |
| ಸಿ) ಸಂದೇಹಾಸ್ಪದ | 1,45,79,443 | 1,45,79,443 |
| | 66,01,22,270 | 51,55,60,022 |
| (ಕಳೆಯಿರಿ) : ಸಂದೇಹಾಸ್ಪದ ಸಾಲಗಳಿಗೆ ಏರ್ಪಾಡು | (1,45,79,443) | (1,45,79,443) |
| ಒಟ್ಟು (ಎ) | 64,55,42,827 | 50,09,80,579 |
| <u>ಇತರೆ</u> | | |
| ಎ) ಸುಭದ್ರ, ಉತ್ತಮವೆಂದು ಪರಿಗಣಿಸಿದ್ದು | – | – |
| ಬಿ) ಅಭದ್ರ, ಉತ್ತಮವೆಂದು ಪರಿಗಣಿಸಿದ್ದು | 44,46,08,188 | 50,76,86,860 |
| ಸಿ) ಸಂದೇಹಾಸ್ಪದ | – | – |
| ಒಟ್ಟು – (ಬಿ) | 44,46,08,188 | 50,76,86,860 |
| (ಎ) +(ಬಿ)ರ ಒಟ್ಟು | **1,09,01,51,015** | **1,00,86,67,439** |

**ಟಿಪ್ಪಣಿ : 15 ನಗದು ಮತ್ತು ಬ್ಯಾಂಕ್ ಶಿಲ್ಕು**

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| **ನಗದು ಮತ್ತು ಬ್ಯಾಂಕ್ ಶಿಲ್ಕು** | | |
| ಎ) <u>ನಗದು ಮತ್ತು ನಗದು ಸಮಗಳು</u> – ಕೈಯಲ್ಲಿರುವ ನಗದು | 1,07,309 | 1,31,784 |
| <u>ಬ್ಯಾಂಕುಗಳಲ್ಲಿನ ಶಿಲ್ಕುಗಳು –</u> ಶೆಡ್ಯೂಲ್ಡ್ ಬ್ಯಾಂಕುಗಳ ಚಾಲ್ತಿ ಖಾತೆಗಳಲ್ಲಿ | 5,18,24,346 | 3,91,19,951 |
| ಬಿ) <u>ಇತರೆ ಬ್ಯಾಂಕ್‌ಗಳ ಶಿಲ್ಕುಗಳು</u> – ನಿಶ್ಚಿತ ಠೇವಣಿಗಳಲ್ಲಿ | 91,78,84,808 | 73,12,52,890 |
| | **96,98,16,463** | **77,05,04,625** |

**ಟಿಪ್ಪಣಿ : 16 ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು**

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| **ಇತರೆ ಸಾಲ ಮತ್ತು ಮುಂಗಡಗಳು** | | |
| ಅಭದ್ರ, ಉತ್ತಮವೆಂದು ಪರಿಗಣಿಸಿದ್ದು | | |
| – ಬರಬೇಕಾಗಿರುವ ಟಿಡಿಎಸ್ | 5,16,90,820 | 6,19,98,259 |
| – ಶಾಸನಬದ್ಧ ಪ್ರಾಧಿಕಾರಗಳಿಂದ ಬರಬೇಕಾಗಿರುವುದು | 14,52,45,513 | 13,54,38,083 |
| – ಪೂರೈಕೆದಾರರಿಗೆ ಮುಂಗಡ | 11,18,74,558 | 11,19,56,944 |
| – ಸಿಬ್ಬಂದಿಗೆ ಮುಂಗಡ | 8,99,324 | 8,31,076 |
| – ಮುಂಗಡ ಹಣ ಠೇವಣಿ | 84,95,132 | 4,87,840 |
| – ಇತರೆ ಮುಂಗಡಗಳು | 28,57,263 | 90,02,377 |
| | **32,10,62,610** | **31,97,14,579** |

**ಟಿಪ್ಪಣಿ : 17 ಇತರೆ ಚಾಲ್ತಿ ಆಸ್ತಿಗಳು**

| ವಿವರಗಳು | 31.03.2017ರಂದು ಇದ್ದಂತೆ | 31.03.2016ರಂದು ಇದ್ದಂತೆ |
|---|---|---|
| ಸ್ವಯಂ ಪ್ರತ್ಯೇಕತೆ ಯೋಜನೆ | – | 1,53,819 |
| ಪೂರ್ವ ಪಾವತಿ ವೆಚ್ಚಗಳು | 47,53,371 | 42,85,589 |
| ಕಾರ್ಯಾಚರಣೆಪೂರ್ವ ವೆಚ್ಚಗಳು (ಸಾಧ್ಯಾಸಾಧ್ಯತೆ ಅಧ್ಯಯನ–ಐಟಿ ಪಾರ್ಕ್, ಬಾಗಲಕೋಟೆ) | – | 3,00,000 |
| | **47,53,371** | **47,39,408** |

## 31ನೇ ಮಾರ್ಚ್ 2017ಕ್ಕೆ ಮುಕ್ತಾಯಗೊಳ್ಳುವ ವರ್ಷದ ಲಾಭ ಮತ್ತು ನಷ್ಟದ ತಃಖ್ತೆಯ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

**ಬಿ. ಟಿಪ್ಪಣಿ : 18 ಕಾರ್ಯಾಚರಣೆಯಿಂದ ಬಂದ ಆದಾಯ** (ರೂ.ಗಳಲ್ಲಿ)

| ವಿವರಗಳು | 31.03.2017 | 31.03.2016 |
|---|---|---|
| **ಕಾರ್ಯಾಚರಣೆಯಿಂದ ಬಂದ ಆದಾಯ** | | |
